ಕೊರವ ಮಹಿಳೆಯರ ಬದುಕು ಮತ್ತು ಬವಣೆ

(ಕೊಪ್ಪಳ ನಗರದ ಕುಂಚ ಕೊರವ ಮಹಿಳೆಯರನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಆಂಶಿಕ ಪದವಿಗಾಗಿ
ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕಿ

ಭುವನೇಶ್ವರಿ ಗುನ್ನಳ್ಳಿ

ಮಾರ್ಗದರ್ಶಕರು

ಡಾ. ಶಿವಾನಂದ ಎಸ್. ವಿರಕ್ತಮಠ

ಪ್ರವಾಚಕರು

ಮಹಿಳಾ ಅಧ್ಯಯನ ವಿಭಾಗ

ಮಹಿಳಾ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೦೯

ಕೊರವ ಮಹಿಳೆಯರ ಬದುಕು ಮತ್ತು ಬವಣೆ

(ಕೊಪ್ಪಳ ನಗರದ ಕುಂಚಿ ಕೊರವ ಮಹಿಳೆಯರನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್.ಆಂಶಿಕ ಪದವಿಗಾಗಿ
ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕಿ
ಭುವನೇಶ್ವರಿ ಗುನ್ನಳ್ಳಿ

ಮಾರ್ಗದರ್ಶಕರು
ಡಾ. ಶಿವಾನಂದ ಎಸ್.ವಿರಕ್ತಮಠ
ಪ್ರವಾಚಕರು
ಮಹಿಳಾ ಅಧ್ಯಯನ ವಿಭಾಗ

ಮಹಿಳಾ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೦೮

ಸಂಶೋಧಕರ ಪ್ರಮಾಣ ಪತ್ರ

ಕೊರವ ಮಹಿಳೆಯರ ಬದುಕು ಮತ್ತು ಬವಣೆ ಎಂಬ ಸಂಪ್ರಬಂಧವನ್ನು ಡಾ.ಶಿವಾನಂದ ಎಸ್.ವಿರಕ್ತಮಠ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್ ಪದವಿಗಾಗಿ ಭಾಷಾ ನಿಕಾಯದ ಮಹಿಳಾ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

Bhavya

ಭುವನೇಶ್ವರಿ ಗುನ್ನಳ್ಳಿ
ಸಂಶೋಧಕಿ
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ

ದಿನಾಂಕ : 7/10/2009

ಮಾರ್ಗದರ್ಶಕರ ದೃಢೀಕರಣ ಪತ್ರ

ಕೊರವ ಮಹಿಳೆಯರ ಬದುಕು ಮತ್ತು ಬವಣೆ ಎಂಬ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್.ಪದವಿಗಾಗಿ ಭುವನೇಶ್ವರಿ ಗುನ್ನಳ್ಳಿ ಅವರು ನನ್ನ ಮಾರ್ಗದರ್ಶನ ದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಸಂಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ಶಿವಾನಂದ ಎಸ್.ವಿರಕ್ತಮಠ
ಮಾರ್ಗದರ್ಶಕರು ಮತ್ತು ಪ್ರವಾಚಕರು
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ
ದಿನಾಂಕ : 7/10/09

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ ವ್ಯಾಪ್ತಿ ಹಾಗೂ ವೈಧಾನಿಕತೆ

೧

ಅಧ್ಯಯನದ ಉದ್ದೇಶ ವ್ಯಾಪ್ತಿ ಹಾಗೂ ವೈಧಾನಿಕತೆ

೧.೦. ಪ್ರಸ್ತಾವನೆ

ಮೂಲತಃ ಅಲೆಮಾರಿಯಾಗಿದ್ದ ಮಾನವ ಪಶುಪಾಲನೆ ಹಾಗೂ ಬೇಸಾಯದ ಹಂತದಲ್ಲಿ ನೆಲೆನಿಂತ ತಾಣಗಳೇ ಗ್ರಾಮಗಳಾಗಿ ಬೆಳೆದವು. ಇಂಥ ಸ್ಥಿರ ಸಮುದಾಯಗಳಲ್ಲಿ ವೃತ್ತಿ ಆಧಾರಿತ ಜಾತಿ, ವರ್ಗಗಳು ಹುಟ್ಟಿಕೊಂಡವು. ಮುಂದೆ ಅವೇ ವರ್ಣಗಳಾಗಿ ರೂಪುಗೊಂಡವು. ಇವೆಲ್ಲವುಗಳಿಂದ ದೂರವೇ ಉಳಿದ ವರ್ಗಗಳೆಂದರೆ ಬುಡಕಟ್ಟು, ಗ್ರಾಮ ಮತ್ತು ನಗರಗಳ ಸಮೀಪ ಅಥವಾ ಅವುಗಳೊಂದಿಗೆ ಸಂಚರಿಸುತ್ತ ಜೀವನ ಸಾಗಿಸುತ್ತಾ ಬಂದ ಅಲೆಮಾರಿ ಜನಸಮುದಾಯಗಳು ಇಂತಹ ಅಲೆಮಾರಿ ಸಮುದಾಯಗಳು ನಮ್ಮ ಕರ್ನಾಟಕದಲ್ಲಿ ಬಹಳಷ್ಟು ಗೋಚರಿಸುತ್ತವೆ. ಉದಾಹರಣೆಗೆ ಹಕ್ಕಿಪಿಕ್ಕಿ, ಸಿದ್ದಿ ಜನಾಂಗ, ಗೊಲ್ಲ, ಬಂಟರು, ಕೊರಗ, ಕೊರವ, ಅಡವಿ ಚೆಂಚರು ಮುಂತಾದವುಗಳು. ಇವುಗಳಲ್ಲಿ ಇಂದು ನಮ್ಮ ಪ್ರಸ್ತುತ ಅಧ್ಯಯನಕ್ಕೆ ಕೊರವರಲ್ಲಿಯ ಉಪ ಪಂಗಡವಾದ ಹಾಗೂ ಕೊರವರ ಮೂಲ ಎಂದು ಕರೆಯಿಸಿಕೊಳ್ಳುವ ಕುಂಚಿ ಕೊರವ ಸಮುದಾಯದ ಮಹಿಳೆಯರ ಬದುಕು-ಬವಣೆಯ ಚಿತ್ರಣವನ್ನು ದಾಖಲಿಸಿ ವಿಶ್ಲೇಷಿಸುವ ಕಾರ್ಯ ಕೈಗೊಳ್ಳಲಾಗಿದೆ.

ಕೊಂಚಿ ಕೊರವರು ನಗರದ ಹೊರವಲಯದಲ್ಲಿ ವಾಸಿಸುತ್ತಿದ್ದು ತಮ್ಮದೇ ಆದ ಸಂಪ್ರದಾಯ, ಸಂಸ್ಕೃತಿ, ಆಚಾರಗಳನ್ನು ಅಳವಡಿಸಿಕೊಂಡು ಜೀವನವನ್ನು ಸಾಗಿಸುತ್ತಿದ್ದಾರೆ. ಭಾರತ ಸರ್ಕಾರದ ಸಂವಿಧಾನದ ೩೪೨ನೇ ಅನುಚ್ಛೇದದಲ್ಲಿ ಅಲೆಮಾರಿ ಬುಡಕಟ್ಟುಗಳನ್ನು ಸೇರಿಸಲಾಗಿದೆ. ಇದರಲ್ಲಿ ಕೊರವ ಸಮುದಾಯವು ಒಂದು. ಹಾಗೆ ಈ ಅನುಚ್ಛೇದ ಆಗಿಂದಾಗ್ಗೆ ಪರಿಷ್ಕರಣೆಗೊಳ್ಳುತ್ತಲೇ ಇರುತ್ತದೆ. ೧೯೭೬(ಕಲಂ ೧೦೮) ದಿನಾಂಕ ೧೮ ಸೆಪ್ಟೆಂಬರ್ ನಲ್ಲಿ ೪೯ ಬುಡಕಟ್ಟುಗಳನ್ನು ಗುರುತಿಸಿ, ಅವುಗಳನ್ನು ಪರಿಶಿಷ್ಟ ಜಾತಿಗೆ ಸೇರ್ಪಡೆ ಮಾಡಿದ್ದಾರೆ. ಇವರಲ್ಲಿ ಕೊರವರು ಕೂಡ ಸೇರಿದ್ದಾರೆ. ಇದೇ ಜಾತಿಯ ಉಪಪಂಗಡದವರಾದ ಕುಂಚಿ ಕೊರವರು ಈ ವ್ಯಾಪ್ತಿಯೊಳಗೆ ಸೇರ್ಪಡೆಗೊಳ್ಳುತ್ತಾರೆ. ಜಾತಿಗನುಗುಣವಾಗಿ ಗಂಡು-ಹೆಣ್ಣು ಇಬ್ಬರಿಗೂ ಸರ್ಕಾರ ಅನೇಕ ಸೌಕರ್ಯಗಳನ್ನು ನೀಡಿದ್ದರೂ ಬಹುಪಾಲು ಜನರು ಇಂತಹ ಸೌಕರ್ಯಗಳಿಂದ ವಂಚಿತರಾಗಿದ್ದಾರೆ. ಎಲ್ಲಾ ನಾಗರಿಕ

[illegible]

[illegible]

[illegible]

[illegible]

[illegible]

ಸೌಲಭ್ಯಗಳಿಂದ ದೂರವೇ ಉಳಿದಿದ್ದಾರೆ. ವಿಶೇಷವಾಗಿ ಕುಂಚಿ ಕೊರವ ಮಹಿಳೆಯರು ಉದಾತ್ತ ನೀತಿ-ನಿಯಮಗಳನ್ನು ಬೆಳೆಸಿಕೊಂಡು ಬಂದಿರುವುದರ ಜೊತೆಗೆ ತಮ್ಮ ಮೂಢನಂಬಿಕೆಗಳಿಂದಾಗಿ, ನಾಗರಿಕ ಪ್ರಪಂಚದ ಅಜ್ಞಾನದಿಂದಾಗಿ ಹಲವು ಮೂಢ ನಂಬಿಕೆಗಳನ್ನು ಉಳಿಸಿಕೊಂಡು, ಬೆಳೆಸಿಕೊಂಡು ಬಂದಿರುವುದನ್ನು ಕಾಣಬಹುದಾಗಿದೆ.

ಕುಂಚಿ ಕೊರವ ಸಮುದಾಯದ ಮಹಿಳೆಯರು ಉಡುಗೆ, ತೊಡುಗೆ, ಆಹಾರ, ಆಚರಣೆ, ದುಡಿಮೆ ಎಲ್ಲವುಗಳಿಂದಲೂ ಭಿನ್ನತೆಯನ್ನು ಗುರುತಿಸಿಕೊಂಡವರಾಗಿದ್ದಾರೆ. ಇಡೀ ಕುಟುಂಬದ ಜವಾಬ್ದಾರಿಯನ್ನು ಮಹಿಳೆಯರೆ ಹೊತ್ತುಕೊಂಡಿದ್ದಾರೆ. ಆದರೆ ಮನೆ ಯಜಮಾನನ ಸ್ಥಾನ ಮಾತ್ರ ಸಂಪೂರ್ಣ ಪುರುಷನ ಆಳ್ವಿಕೆಯಲ್ಲಿದೆ. ಈ ಮಾತಿನ ಆಶಯ ಏನೆಂದರೆ ಪುರುಷ ಪ್ರಧಾನತೆಯ ನಂಟಿಗೆ ಅಂಟಿಕೊಂಡಿರುವವರು ಇವರಾಗಿದ್ದಾರೆ. ಮನೆಯ ಒಳಗೂ, ಹೊರಗು ಅವಿರತವಾಗಿ ದುಡಿಯುತ್ತ ಇಬ್ಬಗೆಯ ಜವಾಬ್ದಾರಿಗಳನ್ನು ಯಶಸ್ವಿಯಾಗಿ ಈ ಮಹಿಳೆಯರು ನಡೆಸುತ್ತಲೇ ಇದ್ದಾರೆ. ದುಡಿಮೆಯ ಶ್ರಮ ಮಹಿಳೆಯ ಪಾಲಾದರೆ, ದುಡಿಮೆಯಿಂದ ಬಂದ ಪ್ರತಿಫಲ ಮಾತ್ರ ಮನೆಯ ಯಜಮಾನನ ಪಾಲಾಗುತ್ತದೆ. ಇದನ್ನು ಗಮನಿಸಿದಾಗ ಇಡೀ ಕುಟುಂಬ ಅಥವಾ ಸಮುದಾಯದ ಉಳಿವಿಗೆ ಮುಖ್ಯ ಕಾರಣ ಮಹಿಳೆಯೆ ಆಗಿದ್ದು, ಎಲೆ ಮರೆಯ ಕಾಯಿಯಂತೆ ಅಗೋಚರವಾಗಿರುವುದು ಕಂಡುಬರುತ್ತದೆ.

ಅಲೆಮಾರಿಗಳೆಂದು ಕರೆಯಿಸಿಕೊಳ್ಳುವ ಕುಂಚಿ ಕೊರವರು ಇಂದು ಸಾಮುದಾಯಿಕ ಜೀವನ ಪ್ರಾರಂಭಿಸಿದ್ದಾರೆ. ಆದರೆ ದುಡಿಮೆಗೆಂದು ಮಹಿಳೆಯರು ಏಕಾಂಗಿಯಾಗಿ ಅಥವಾ ಒಬ್ಬೊಬ್ಬರೆ ವಲಸೆ ಹೋಗುತ್ತಾರೆ. ಇದು ಇವರ ಗಟ್ಟಿತನದ ಪ್ರತಿಬಿಂಬವಾಗಿದೆ. ಕಿತ್ತು ತಿನ್ನುವ ಬಡತನ ಮತ್ತು ಮಲಿನತೆಯಿಂದ, ದೈಹಿಕ ಶ್ರಮದಿಂದುಂಟಾಗುವ ಆರೋಗ್ಯದ ಸಮಸ್ಯೆಗಳಂತೂ ಹೇಳತೀರದವುಗಳಾಗಿವೆ. ಇತ್ತೀಚೆಗೆ ತುಂಡು ಭೂಮಿಗಳನ್ನು ಹೊಂದಿದ್ದು, ಭೂಮಿಯೊಂದಿಗೆ ಇತರೆ ಎಲ್ಲಾ ಚರ ಮತ್ತು ಸ್ಥಿರ ಆಸ್ತಿಗಳು ಪುರುಷರ ಹೆಸರಿನಲ್ಲೇ ಕಂಡುಬರುತ್ತವೆ. ಇದು ಮಹಿಳೆಯರಿಗೆ ಯಾವುದರ ಮೇಲೂ ಒಡೆತನ ಇಲ್ಲದಿರುವುದನ್ನು ಸ್ಪಷ್ಟಪಡಿಸುತ್ತದೆ. ಇವರು ತಮ್ಮದೇ ಆದ ಭಾಷೆ ಮತ್ತು ಜನಪದ ಗೀತೆಗಳನ್ನು ಬೆಳಸಿಕೊಂಡು ಬಂದವರಾಗಿದ್ದಾರೆ. ಇವನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ಪರಿಚಯಿಸುವುದು ಕೂಡ ಇಂದು ನಮ್ಮ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ಸಾಮಾಜಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಮತ್ತು ಆರೋಗ್ಯದ ದೃಷ್ಟಿಯಿಂದ ಕುಂಚಿ ಕೊರವ ಮಹಿಳೆಯರು ಸಾಕಷ್ಟು ಹಿಂದುಳಿದಿದ್ದು, ಈ ಮಹಿಳೆಯರ ಬದುಕಿನ ಸಂಪೂರ್ಣ ಚಿತ್ರಣವನ್ನು ತೆರೆದಿಟ್ಟು ವಿಶ್ಲೇಷಿಸುವ ಕಾರ್ಯವನ್ನು ನಮ್ಮ ಈ ಕುಂಚಿ ಕೊರವ ಮಹಿಳೆಯರ ಬದುಕು ಮತ್ತು ಬವಣೆಯ ಅಧ್ಯಯನದಲ್ಲಿ ಕೈಗೊಳ್ಳಲಾಗಿದೆ.

೧.೧. ಅಧ್ಯಯನದ ಉದ್ದೇಶ

ಅಧ್ಯಯನದ ಉದ್ದೇಶಗಳು ಒಂದು ನಿರ್ದಿಷ್ಟ ಸಂಶೋಧನಾ ಯೋಜನೆಯಡಿಯಲ್ಲಿ ಬರುವ ಒಟ್ಟು ಕೆಲಸಗಳಿಗೆ ಉತ್ತರ ಹುಡುಕುವ ಕೆಲಸವನ್ನು ಸೂಚಿಸುತ್ತವೆ. ಇದನ್ನೇ ಇನ್ನೊಂದು ವಿಧದಲ್ಲಿ ಹೇಳುವುದಾದರೆ ಯೋಜನೆ ಏನನ್ನು ಶೋಧಿಸಲು ಅಥವಾ ಪರೀಕ್ಷಿಸಲು ಅಥವಾ ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿದೆ ಎನ್ನುವುದನ್ನು ತಿಳಿಸುತ್ತವೆ. ಈ ನಿಟ್ಟಿನಲ್ಲಿ ನಮ್ಮ "ಕುಂಚಿ ಕೊರವ ಮಹಿಳೆಯರ ಬದುಕು ಬವಣೆ"ಯತ್ತ ಅಧ್ಯಯನ ಸಾಗುತ್ತದೆ.

ಈಗಾಗಲೇ ಸಮುದಾಯದ ಕುರಿತು ಸಾಕಷ್ಟು ಅಧ್ಯಯನಗಳು ನಡೆದಿದ್ದು ಇಂದಿಗೂ ನಡೆಯುತ್ತಲೇ ಇವೆ. ಅಂತಹ ಸಮುದಾಯಗಳಲ್ಲಿ ಕುಂಚಿ ಕೊರವ ಮಹಿಳೆಯರ ಬದುಕಿನ ಸಮಗ್ರ ಅಧ್ಯಯನವನ್ನು ನಡೆಸಿ ದಾಖಲಿಸಿ, ವಿಶ್ಲೇಷಿಸುವ ಉದ್ದೇಶವನ್ನು ನಮ್ಮ ಅಧ್ಯಯನ ಹೊಂದಿದೆ. ಇವರು ನಗರದ ಪ್ರತ್ಯೇಕವಾಸಿಗಳಾಗಿದ್ದು ಜಾತಿಯತೆಯಿಂದ ಕೆಳಮಟ್ಟದ ಸ್ಥಾನಮಾನ ಹೊಂದಿದ್ದಾರೆ. ನಗರವಾಸಿಗಳಿಗಿಂತ ಹೇಗೆ ಭಿನ್ನವಾಗಿ ತಮ್ಮತನವನ್ನು ರೂಢಿಸಿಕೊಂಡು ಜೀವನ ಸಾಗಿಸುತ್ತಿದ್ದಾರೆ ಎಂಬುದನ್ನು ಕಾಣುವುದು ಅತೀ ಮುಖ್ಯವಾಗಿದೆ. ಪ್ರತಿಯೊಂದು ಸಮುದಾಯವು ತನ್ನದೇ ಆದ ಸಾಮಾಜಿಕತೆ, ಧಾರ್ಮಿಕತೆ, ಸಾಂಸ್ಕೃತಿಕತೆ, ರಾಜಕೀಯತೆ, ಸಂಘಟನಾತ್ಮಕತೆಯನ್ನು ಹೊಂದಿವೆ. ಈ ಸಮುದಾಯದಲ್ಲಿಯ ಮಹಿಳೆಯರು ಹೇಗೆ ಇವುಗಳಲ್ಲಿ ಹಾಸು ಹೊಕ್ಕಾಗಿ ಬೆರೆತಿದ್ದಾರೆ ಎಂಬುದನ್ನು ಅರಿತು ಅವರ ಸ್ಥಿತಿಗತಿ(ಸ್ಥಾನಮಾನ)ಗಳ ಬಗ್ಗೆ ಲಿಂಗ ಸಂಬಂಧಿ ಅಧ್ಯಯನ ನಡೆಸುವುದು ನಮ್ಮ ಉದ್ದೇಶವಾಗಿದೆ.

ಕುಂಚಿ ಕೊರವ ಮಹಿಳೆಯರು ಉಡುಗೆ-ತೊಡುಗೆ, ಊಟೋಪಾಚಾರ, ಆಚಾರ-ವಿಚಾರಗಳಲ್ಲಿ ನಗರದ ಹೆಣ್ಣು ಮಕ್ಕಳಿಗಿಂತ ಭಿನ್ನವಾಗಿದ್ದಾರೆ. ಇವರ ಕೆಳಮಟ್ಟದ ಜೀವನ ನಿರ್ವಹಣೆಗೆ ಕಾರಣವೇನು ಎಂಬುದನ್ನು ತಿಳಿಯುವುದಾಗಿದೆ ಹಾಗೂ ಮೇಲ್ ಜಾತಿಯವರೆಂದು ಕರೆಸಿಕೊಳ್ಳುವ ಮತ್ತು ತಮ್ಮದೇ ಜಾತಿಯ ಪುರುಷರಿಂದ ಹೇಗೆ ದೌರ್ಜನ್ಯಕ್ಕೊಳಗಾಗುತ್ತಿದ್ದಾರೆಂದು ಸೂಕ್ಷ್ಮವಾಗಿ ಗ್ರಹಿಸುವತ್ತ ಅಧ್ಯಯನ ಸಾಗುತ್ತದೆ. ಕುಂಚಿ ಕೊರವ ಸಮುದಾಯದ ಮಹಿಳೆಯರು ಎಷ್ಟರ ಮಟ್ಟಿಗೆ ತಮ್ಮ ದುಡಿಮೆಯ ಬಗ್ಗೆ ಸ್ವ-ಪ್ರಜ್ಞೆ ಹೊಂದಿದ್ದಾರೆಂದು ತಿಳಿಯುವುದರ ಜೊತೆಗೆ ಅಸಂಘಟಿತರಾಗಿ ದುಡಿಯುತ್ತಿದ್ದು ಕುಟುಂಬದಲ್ಲಿನ ಇವರ ಆರ್ಥಿಕ ಹಿಡಿತದ ಬಗ್ಗೆ ತಿಳಿಯುವುದಾಗಿದೆ.

ಸಂಪ್ರದಾಯ ಮತ್ತು ಸಂಸ್ಕೃತಿ ಎಂಬ ಹೆಸರಿನಲ್ಲಿ ಮಹಿಳೆಯರನ್ನು ಸಂಕೋಲೆಗಳಲ್ಲಿರಿಸುವ ಸಂಚನ್ನು ಪುರುಷ ಪ್ರಧಾನ ವ್ಯವಸ್ಥೆ ಹಿಂದಿನಿಂದಲೂ ಇಂದಿನವರೆಗೆ ರೂಪಿಸುತ್ತಲೇ ಬಂದಿದೆ. ಇದಕ್ಕೆ ಕುಂಚಿ ಕೊರವ ಸಮುದಾಯವು ಹೊರತಲ್ಲ. ಜನಪದ ಹಾಡು ಮತ್ತು ಕಥೆಗಳು ಇದಕ್ಕೆ ನಿದರ್ಶನಗಳಾಗಿವೆ. ಇವುಗಳನ್ನು ಗುರುತಿಸಿ ವಿಶ್ಲೇಷಿಸುವುದನ್ನು ಅಧ್ಯಯನ ಮುಖ್ಯ ಉದ್ದೇಶವಾಗಿಸಿ

ಕೊಂಡಿದೆ. ಸರ್ಕಾರ ಕುಂಚಿ ಕೊರವ ಮಹಿಳೆಯರಿಗೆಂದೆ ಅನೇಕ ಯೋಜನೆಗಳನ್ನು ನೀಡಿದ್ದು, ಅದರ ಸದುಪಯೋಗ ಎಷ್ಟರ ಮಟ್ಟಿಗೆ ಪಡೆದುಕೊಂಡಿದ್ದಾರೆ ಅಥವಾ ಪಡೆದುಕೊಳ್ಳುವಲ್ಲಿ ವಿಫಲರಾಗಿದ್ದಾರೆ ಎಂಬುದನ್ನು ತಿಳಿಯುವುದಾಗಿದೆ. ಈ ರೀತಿಯಾಗಿ ಪ್ರಸ್ತುತ ಅಧ್ಯಯನ ಅನೇಕ ಉದ್ದೇಶಗಳನ್ನಿರಿಸಿಕೊಂಡು ಕುಂಚಿ ಕೊರವ ಮಹಿಳೆಯರ ಬದುಕಿನ ವಿವಿಧ ಮಜಲುಗಳನ್ನು ವಿವರಿಸುವ ಕಾರ್ಯ ಮಾಡುತ್ತಿದೆ.

೧.೨. ಅಧ್ಯಯನದ ವ್ಯಾಪ್ತಿ

ಅಧ್ಯಯನ ಕ್ಷೇತ್ರ ತುಂಬಾ ವಿಶಾಲವಾದಂತಹ ವ್ಯಾಪ್ತಿಯನ್ನು ಹೊಂದಿದೆ. ಕೊರವರಲ್ಲಿ ಕುಂಚಿ ಕೊರವರು ಉಪ ಪಂಗಡದವರಾದರು, ಬಹು ಪ್ರದೇಶಗಳಲ್ಲಿ ಹರಡಿಕೊಂಡಿದ್ದಾರೆ. ಇದರಲ್ಲಿ ಮುಖ್ಯವಾಗಿ ಬೆಂಗಳೂರು, ತುಮಕೂರು, ಚಿತ್ರದುರ್ಗ, ಕೋಲಾರ, ಧಾರವಾಡ, ಬೆಳಗಾವಿ, ಬಳ್ಳಾರಿ, ಚಿಕ್ಕಮಂಗಳೂರು ಮತ್ತು ಕೊಪ್ಪಳ ಮುಂತಾದ ಭಾಗಗಳಲ್ಲಿ ಹೆಚ್ಚಾಗಿ ಕಂಡುಬರುತ್ತಾರೆ. ನಮ್ಮ ಪ್ರಸ್ತುತ ಅಧ್ಯಯನದಲ್ಲಿ ಜಿಲ್ಲಾ ಕೇಂದ್ರವಾದ ಕೊಪ್ಪಳವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ನಮ್ಮ ಅಧ್ಯಯನದ ಸಮಯ, ಸಂಪನ್ಮೂಲ ಮತ್ತು ಶ್ರಮದ ಅಗತ್ಯತೆಯನ್ನರಿತು ಕೇವಲ ಕೊಪ್ಪಳ ನಗರವನ್ನು ಮಾತ್ರ ಅಧ್ಯಯನ ವ್ಯಾಪ್ತಿಗೆ ಒಳಪಡಿಸಲಾಗಿದೆ. ಕುಂಚಿ ಕೊರವರು ನಗರದ ಹೊರವಲಯದಲ್ಲಿ ತಮ್ಮದೇ ಆದ ಪ್ರತ್ಯೇಕ ಸಮುದಾಯ ಒಂದನ್ನು ಸೃಷ್ಟಿಸಿಕೊಂಡು ಜೀವನ ನಿರ್ವಹಣೆ ಮಾಡುತ್ತಿದ್ದಾರೆ. ೩೦೦ಕ್ಕೂ ಹೆಚ್ಚು ಕುಟುಂಬಗಳು ಇಲ್ಲಿ ವಾಸವಾಗಿದ್ದು, ನಮ್ಮ ಅಧ್ಯಯನದ ಅನುಕೂಲಕ್ಕಾಗಿ ೮೦ ಮಹಿಳೆಯರನ್ನು ಸಂದರ್ಶನಕ್ಕೆ ಒಳಪಡಿಸಿಕೊಳ್ಳಲಾಗಿದೆ. ಜೊತೆಗೆ ದುಡಿಯಲು ವಲಸೆ ಬಂದ ಮಹಿಳೆಯರನ್ನು ಕೂಡ ಅಧ್ಯಯನದ ವ್ಯಾಪ್ತಿಗೆ ತೆಗೆದುಕೊಳ್ಳಲಾಗಿದೆ.

೧.೩. ಅಧ್ಯಯನದ ವೈಧಾನಿಕತೆ

ಯಾವುದೇ ಒಂದು ಸಂಶೋಧನೆಯು ತನ್ನದೇ ಆದಂತಹ ಸಂಶೋಧನಾ ವಿಧಾನವನ್ನು ಅಳವಡಿಸಿಕೊಂಡಿರುತ್ತದೆ. ಈ ಪ್ರಕಾರವಾಗಿ ನನ್ನ ಪ್ರಸ್ತುತ ಅಧ್ಯಯನದಲ್ಲಿ ಮಹಿಳೆಯರಿಂದ ಮಾಹಿತಿ ಸಂಗ್ರಹಿಸಲು ಯಾವ ವಿಧಾನಗಳು ಸೂಕ್ತವೋ ಅಂತಹ ಹಲವಾರು ವಿಧಾನಗಳನ್ನು ಬಳಸಿಕೊಂಡು ನೈಜ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಕುಂಚಿ ಕೊರವ ಮಹಿಳೆಯರ ಬದುಕು-ಬವಣೆ ಅರಿಯಲು ಕ್ಷೇತ್ರಕಾರ್ಯಕ್ಕೆ ಸಂಬಂಧಿಸಿದಂತೆ ಸಾಂಪ್ರದಾಯಿಕ ವಿಧಾನಗಳಾದ ಪ್ರಶ್ನಾವಳಿ, ಸಂದರ್ಶನ ಮತ್ತು ಅವಲೋಕನವನ್ನು ಕೈಗೊಳ್ಳುವುದರ ಜೊತೆಗೆ ಪರಿಮಾಣಾತ್ಮಕ ಮತ್ತು ಗುಣಾತ್ಮಕ ಸಂಶೋಧನಾ ವಿಧಾನ, ವ್ಯಕ್ತಿ ನಿಷ್ಠತೆ, ಅನುಭವಾಧಾರಿತ ವಿಶ್ಲೇಷಣೆ ಮತ್ತು ಸಂಕಥನಾತ್ಮಕ ವಿಶ್ಲೇಷಣಾ ವಿಧಾನಗಳನ್ನು ಅಳವಡಿಸಿಕೊಂಡಿದ್ದೇನೆ. ಕುಂಚಿ ಕೊರವ ಮಹಿಳೆಯರ ಬದುಕಿನ ಸವಿವರವಾದ ಚಿತ್ರಣ ತೆರೆದಿಡುವಲ್ಲಿ ಈ ವಿಧಾನಗಳು ಮಹತ್ವದ ಪಾತ್ರವಹಿಸುತ್ತವೆ.

ಪ್ರಶ್ನಾವಳಿ

ಸಂಶೋಧನೆ ಸಂದರ್ಭದಲ್ಲಿ ಮಾಹಿತಿ ಸಂಗ್ರಹಣೆಗಾಗಿ ಈ ಪ್ರಶ್ನಾವಳಿ ತುಂಬಾ ಉಪಯುಕ್ತತೆ ಪಡೆದುಕೊಂಡಿದೆ. ಅಭಿಪ್ರಾಯ ಪ್ರಕ್ರಿಯೆ ಮತ್ತು ಮಾಹಿತಿಯನ್ನು ಸಂಗ್ರಹಣೆ ಮಾಡುವ ದೃಷ್ಟಿಯಿಂದ ನಿರ್ದಿಷ್ಟ ವಿಷಯದ ಸುತ್ತ ಹೆಣೆದ ಪ್ರಶ್ನೆಗಳ ಸರಣಿಯೇ ಪ್ರಶ್ನಾವಳಿಯಾಗಿದೆ. ಪ್ರಶ್ನಾವಳಿಯಲ್ಲಿ ರಚಿತ ಪ್ರಶ್ನಾವಳಿ, ಅರಚಿತ ಪ್ರಶ್ನಾವಳಿ, ಸಚಿತ್ರ ಪ್ರಶ್ನಾವಳಿ ಹಾಗೂ ಅಂಚೆ ಪ್ರಶ್ನಾವಳಿ ಎಂದು ವಿವಿಧ ಪ್ರಕಾರಗಳಿದ್ದು, ನಮ್ಮ ಈ ಕುಂಚಿ ಕೊರವ ಸಮುದಾಯದ ಮಹಿಳೆಯರ ಬದುಕನ್ನು ಅರಿಯಲು ಅರಚಿತ ಮತ್ತು ರಚಿತ ಪ್ರಶ್ನಾವಳಿಯನ್ನು ಬಳಸಿಕೊಳ್ಳಲಾಗಿದೆ. ಮೊದಲೇ ರಚಿಸಿದ ಪ್ರಶ್ನೆಗಳನ್ನು ಒಳಗೊಂಡಿರದೆ ಪ್ರಶ್ನಾವಧಿಯ ಅವಶ್ಯಕತೆಗೆ ತಕ್ಕಂತೆ ಹೊಂದಿಕೊಳ್ಳುವ ಪ್ರಶ್ನೆಗಳನ್ನು ಕೇಳಿ ಮಾಹಿತಿ ಪಡೆಯುವ ಮಾರ್ಗ ಒಂದಾದರೆ, ಪೂರ್ವಯೋಜಿತವಾಗಿ ಪ್ರಶ್ನೆಗಳನ್ನು ಸಿದ್ಧಪಡಿಸಿಕೊಂಡು ಕ್ಷೇತ್ರದಲ್ಲಿ ನೇರವಾಗಿ ಪ್ರಶ್ನೆಗಳನ್ನು ಮಹಿಳೆಯರಿಗೆ ಕೇಳಿ ಉತ್ತರವನ್ನು ಪಡೆದುಕೊಳ್ಳುವ ಮತ್ತೊಂದು ಮಾರ್ಗವನ್ನು ಸಹ ಅನುಸರಿಸಲಾಗಿದೆ.

ಸಂದರ್ಶನ

ಸಂದರ್ಶನ ಮಾಹಿತಿ ಸಂಗ್ರಹಣೆಯಲ್ಲಿ ವ್ಯಾಪಕವಾಗಿ ಬಳಸಲ್ಪಡುತ್ತಿರುವ ಒಂದು ಸಂಶೋಧನಾ ವಿಧಾನವಾಗಿದೆ. ಸಂದರ್ಶನವು ಒಂದು ಅಂತರ್ ಕ್ರಿಯಾತ್ಮಕ ಪ್ರಕ್ರಿಯೆಯಾಗಿದ್ದು ಇಬ್ಬರ ನಡುವಿನ ಪರಸ್ಪರ ಸಂವಾದದ ಪ್ರತಿಫಲವಾಗಿ ಸಂದರ್ಶನವು ಮೂಡಿಬರುತ್ತದೆ. ಆದ್ದರಿಂದ ಕುಂಚಿ ಕೊರವ ಮಹಿಳೆಯರಿಂದ ಮಾಹಿತಿ ಸಂಗ್ರಹಿಸಲು ಈ ವಿಧಾನವನ್ನು ಬಳಸಲಾಗಿದೆ. ಈ ಕುಂಚಿ ಕೊರವ ಸಮುದಾಯದ ಮಹಿಳೆಯರು ಬಹುತೇಕ ಅನಕ್ಷರಸ್ಥರಾಗಿರುವುದರಿಂದ ಅರಚಿತ ಸಂದರ್ಶನ ಮತ್ತು ರಚಿತ ಸಂದರ್ಶನ ಕೈಪಿಡಿಯನ್ನು ಬಳಸಲಾಗಿದೆ. ಮೊದಲೇ ತಯಾರಿಸಿದ್ದ ಪ್ರಶ್ನೆಗಳ ಪಟ್ಟಿಯಿದ್ದು, ಆ ಪ್ರಶ್ನೆಗಳನ್ನು ಮಹಿಳೆಯರಿಗೆ ಕೇಳಿ ಅವರಿಂದ ಮೌಖಿಕವಾಗಿ ಉತ್ತರಗಳನ್ನು ಪಡೆದುಕೊಳ್ಳಲಾಗಿದೆ. ಕೆಲವು ಸಂದರ್ಭದಲ್ಲಿ ಅಲ್ಲಿಯೇ ಅರಚಿತ ಪ್ರಶ್ನೆಗಳನ್ನು ಸೃಷ್ಟಿಸಿಕೊಂಡು ಸಂದರ್ಶನವನ್ನು ನಡೆಸಲಾಗಿದೆ.

ಅವಲೋಕನ

ಸಂಶೋಧನಾ ವಿಧಾನಗಳಲ್ಲಿ ಅವಲೋಕನ ವಿಧಾನವೂ ಒಂದಾಗಿದ್ದು, ನಡಾವಳಿಕೆಗಳ ಸೂಕ್ಷ್ಮ ವೀಕ್ಷಣೆ ಮತ್ತು ವಿಶ್ಲೇಷಣೆ ಇದಾಗಿರುತ್ತದೆ. ಇದರಲ್ಲಿ ೨ ಪ್ರಕಾರಗಳಿದ್ದು ಅನಿಯಂತ್ರಿತ ಅವಲೋಕನ ಮತ್ತು ಕ್ರಮಬದ್ಧವಾದ ನಿಯಂತ್ರಿತ ಅವಲೋಕನಗಳಾಗಿವೆ. ಇವುಗಳಲ್ಲಿ ಅನಿಯಂತ್ರಿತ ಅವಲೋಕನದ ಒಂದು ಪ್ರಕಾರವಾದ ಅನಿಯಂತ್ರಿತ ಸಹಭಾಗೀ ಅವಲೋಕವನ್ನು ಕುಂಚಿ ಕೊರವ ಮಹಿಳೆಯರ ಬದುಕು ಮತ್ತು ಬವಣೆಯನ್ನರಿಯಲು ಬಳಸಿಕೊಳ್ಳಲಾಗಿದೆ. ಸಂದರ್ಶನದ ಮೂಲಕ ಸಂಗ್ರಹಿಸಿದ

ಮಾಹಿತಿಯೂ ಪೂರ್ಣ ಪ್ರಮಾಣದಲ್ಲವಾದ್ದರಿಂದ ಅವರಾಡುವ ಅಂತರಾಳದ ಮಾತುಗಳು ಮತ್ತು ಜೊತೆಗೆ ಅವರ ವರ್ತನೆಗಳೆರಡನ್ನು ಅವಲೋಕಿಸುವ ಮೂಲಕ ಮಹಿಳೆಯರಿಂದ ಮಾಹಿತಿ ಸಂಗ್ರಹಿಸಲಾಗಿದೆ.

ಪರಿಮಾಣಾತ್ಮಕ ಮತ್ತು ಗುಣಾತ್ಮಕ ಸಂಶೋಧನಾ ವಿಧಾನ

ಸಂಶೋಧನೆಯಲ್ಲಿ ಗುಣಾತ್ಮಕ ಮತ್ತು ಪರಿಮಾಣಾತ್ಮಕ ಸಂಶೋಧನಾ ವಿಧಾನಗಳು ಬಹು ಮುಖ್ಯ ಪಾತ್ರವಹಿಸುತ್ತವೆ. ಪರಿಮಾಣಾತ್ಮಕ ಸಂಶೋಧನಾ ವಿಧಾನವೂ ಅಂಕಿ-ಅಂಶಗಳನ್ನು ದಾಖಲಿಸಲು ನೆರವಾದರೆ, ಗುಣಾತ್ಮಕ ಸಂಶೋಧನಾ ವಿಧಾನವೂ ಹೆಚ್ಚಾಗಿ ಮಾನಸಿಕ ಮತ್ತು ಭಾವನಾತ್ಮಕ ಅಂಶಗಳನ್ನು ಹೊರ ತೆಗೆಯಲು ಸೂಕ್ತವಾಗಿದೆ. ಜೊತೆಗೆ ತಲಸ್ಪರ್ಶಿಯಾದ ಅಧ್ಯಯನ ಇದಾಗಿದೆ. ಗುಣ ಪಕ್ಷಪಾತವನ್ನು ಹೇಳುವ, ಪರಿಣಾಮವನ್ನು ಪರಿಗಣಿಸುವ ಹಿನ್ನೆಲೆಯಲ್ಲಿ ಇದನ್ನು ಬಳಸಿಕೊಳ್ಳಲಾಗಿದೆ. ಮಹಿಳೆಯರ ತಲ ಸ್ಥಿತಿಗೆ ಹೋಗಿ ಅಧ್ಯಯನ ನಡೆಸುತ್ತದೆ. ಆದ್ದರಿಂದ ಸ್ತ್ರೀವಾದಿ ಸಂಶೋಧಕರು ಮಹಿಳೆಯರಿಗೆ ಸಂಬಂಧಿಸಿದಂತೆ ಸಂಶೋಧನೆ ಮಾಡುವಾಗ ಗುಣಾತ್ಮಕ ಸಂಶೋಧನಾ ವಿಧಾನಕ್ಕೆ ಹೆಚ್ಚು ಒತ್ತು ಕೊಡುತ್ತಾರೆ. ಮಹಿಳೆಯರ ಅನುಭವದ ವಿಶ್ಲೇಷಣೆಯನ್ನು ಅಂತರಾಳಕ್ಕೆ ಹೊಕ್ಕು ಮಾಹಿತಿ ತೆಗೆಯಲು ಸೂಕ್ತ ವಿಧಾನವಾಗಿದೆ. ಈ ನಿಟ್ಟಿನಲ್ಲಿ ನಮ್ಮ ಕುಂಚಿ ಕೊರವ ಮಹಿಳೆಯರ ಬದುಕು ಬವಣೆ ಅರಿಯಲು ಈ ಎರಡು ವಿಧಾನಗಳನ್ನು ಅಳವಡಿಸಿಕೊಳ್ಳಲಾಗಿದೆ.

ವ್ಯಕ್ತಿ ನಿಷ್ಠತೆ

ಸಾಮಾನ್ಯವಾಗಿ ಸಾಂಪ್ರದಾಯಿಕ ಸಂಶೋಧನಾ ವಿಧಾನಗಳಲ್ಲೂ ಬಳಸಲ್ಪಡುವ ಈ ವಿಧಾನವು, ಮಹಿಳೆಯರಿಗೆ ಸಂಬಂಧಿಸಿದಂತಹ ಸಂಶೋಧನಾ ಸಂದರ್ಭದಲ್ಲಿ ಅವರನ್ನು ಕೇವಲ ವಸ್ತುವಾಗಿ ಪರಿಗಣಿಸುವುದು ಕಂಡುಬರುತ್ತದೆ. ಆದರೆ ಮಹಿಳಾ ಅಧ್ಯಯನದ ವಿಷಯದ ಸಂದರ್ಭದಲ್ಲಿ ವ್ಯಕ್ತಿ ನಿಷ್ಠತೆ ಬೇರೆಯೇ ಆದ ಪಾತ್ರ ವಹಿಸಿಕೊಳ್ಳುತ್ತದೆ. ಮಹಿಳೆಯರು ಶ್ರೇಣೀಕೃತ ಸಮಾಜದ ಚಾಲನೆಯ ಬಹುಮುಖ್ಯ ಅಂಗವೆಂದು ಪರಿಗಣಿಸಿ, ಅವರ ವಾಸ್ತವ ಸ್ಥಿತಿ, ಹಿನ್ನೆಲೆ, ಚರಿತ್ರೆ, ವರ್ತಮಾನ, ಭವಿಷ್ಯ ಎಲ್ಲವನ್ನು ಸವಿವರವಾಗಿ ಅಧ್ಯಯನ ಮಾಡುತ್ತದೆ. ವ್ಯಕ್ತಿ ನಿಷ್ಠತೆಯೂ ಕೂಡ ಒಂದು ತಲಸ್ಪರ್ಶಿಯ ಅಧ್ಯಯನವಾಗಿದೆ. ಕುಂಚಿ ಕೊರವ ಮಹಿಳೆಯರ ಸಮಸ್ಯೆಗಳು, ಬದುಕಿನ ವಿಧಾನ, ಭಿನ್ನವಾಗಿದ್ದು ಇದನ್ನು ಸಾರ್ವತ್ರಿಕಗೊಳಿಸದೆ ವೈಯಕ್ತಿಕ ನೆಲೆಯಿಂದ ಪರಿಶೀಲಿಸಿ ನೈಜ ಸ್ಥಿತಿಯನ್ನು ಹೊರತರುವಲ್ಲಿ ಇದು ಸಹಾಯಕವಾಗಿದೆ. ಹಾಗೂ ಕುಟುಂಬದ ಚೌಕಟ್ಟಿಗೆ ಸೀಮಿತಗೊಳಿಸಿರುವ ಮಹಿಳೆಯರ ಸಮಸ್ಯೆಗಳ ಕುರಿತಾದ ಸೂಕ್ತ ಮಾಹಿತಿ ಪಡೆದುಕೊಳ್ಳಲು ವ್ಯಕ್ತಿ ನಿಷ್ಠತೆ ಸಂಶೋಧನೆಯನ್ನು ಕೈಗೊಳ್ಳಲಾಗಿದೆ.

ಅನುಭವಾತ್ಮಕ ವಿಶ್ಲೇಷಣಾ ವಿನ್ಯಾಸ

ಸ್ತ್ರೀವಾದಿ ಸಂಶೋಧನೆಯಲ್ಲಿ ಮುಖ್ಯವಾಗಿ ಅಳವಡಿಸಿಕೊಳ್ಳುವ ವಿಧಾನವೆಂದರೆ 'ಅನುಭವಾತ್ಮಕ ವಿಶ್ಲೇಷಣಾ ವಿನ್ಯಾಸವಾಗಿದೆ. ಕುಂಚಿ ಕೊರವ ಮಹಿಳೆಯರ ಬದುಕು-ಬವಣೆಯನ್ನು ಅರಿಯುವ ಸಂದರ್ಭವನ್ನು ಸಂಶೋಧಕಿಯಾದ ನಾನು, ನನ್ನ ಅನುಭವ, ಅಭಿಪ್ರಾಯ, ಭಾವನೆಗಳನ್ನು ಹಂಚಿಕೊಂಡು ಅವುಗಳನ್ನು ಮಾಹಿತಿಯನ್ನಾಗಿ ಬಳಸಿಕೊಳ್ಳಲು ಈ ವಿಧಾನವನ್ನು ಅಳವಡಿಸಿಕೊಂಡಿದ್ದೇನೆ. ಕಾರಣ ಅನುಭವಾತ್ಮಕ ವಿಶ್ಲೇಷಣಾ ವಿನ್ಯಾಸವು ವ್ಯಕ್ತಿ ನಿಷ್ಠತೆ, ಗುಣಾತ್ಮಕವಾದ ಮತ್ತು ವಿಶ್ಲೇಷಣಾತ್ಮಕ ಈ ಎಲ್ಲಾ ಅಂಶಗಳನ್ನು ಒಳಗೊಂಡಿರುವುದರಿಂದ ನಮ್ಮ ಅಧ್ಯಯನಕ್ಕೆ ಹೆಚ್ಚು ಸೂಕ್ತವಾಗಿದೆ. ಈ ಹಿನ್ನೆಲೆಯಲ್ಲಿ ಕುಂಚಿಕೊರವ ಮಹಿಳೆಯರೊಂದಿಗೆ ನಾನು ಒಬ್ಬಳೆಂದು ಗುರುತಿಸಿಕೊಂಡು ನೈಜ ಮಾಹಿತಿ ಪಡೆದುಕೊಳ್ಳುವಲ್ಲಿ ಈ ವಿಧಾನ ತುಂಬಾ ಉಪಯುಕ್ತತೆ ಪಡೆದುಕೊಂಡಿದೆ.

ಸಂಕಥನಾತ್ಮಕ ವಿಶ್ಲೇಷಣೆ

ದೃಷ್ಟಾಂತಗಳ ಮೂಲಕ ಕತೆಯನ್ನು ಕಟ್ಟಿಕೊಡುವ ಕೆಲಸ ಸಂಕಥನಾತ್ಮಕತೆ ಮಾಡುತ್ತದೆ. ಆದ್ದರಿಂದ ಕುಂಚಿ ಕೊರವ ಸಮುದಾಯದ ಮಹಿಳೆಯರ ಜನಾಂಗೀಯ ಹಿನ್ನೆಲೆ, ಜನಪದ ಹಾಡುಗಳ ಸಂಗ್ರಹಣೆ ಹಾಗೂ ಅವುಗಳ ವಿಶ್ಲೇಷಣೆಯಲ್ಲಿ ಈ ವಿಧಾನ ತುಂಬಾ ಪ್ರಮುಖವಾದ ಪಾತ್ರವಹಿಸುತ್ತದೆ. ಈ ಹಿನ್ನೆಲೆಯಲ್ಲಿ ಸಂಕಥನಾತ್ಮಕ ವಿಶ್ಲೇಷಣಾ ವಿಧಾನವನ್ನು ಬಳಸಿಕೊಂಡಿದ್ದೇನೆ. ಇದರಿಂದ ಪಡೆದುಕೊಳ್ಳುವ ಮಾಹಿತಿ ನಮಗೆ ಸಂಭಾಷಣಾ(discourse) ರೂಪದಲ್ಲಿ ಲಭ್ಯವಾಗುತ್ತದೆ. ಹೀಗೆ ಪಡೆದುಕೊಂಡ ಮಾಹಿತಿಯನ್ನು ದಾಖಲಿಸಿ ಮಹಿಳಾ ದೃಷ್ಟಿಕೋನದಿಂದ ವಿಶ್ಲೇಷಿಸುವ ಕಾರ್ಯ ಪ್ರಸ್ತುತ ಅಧ್ಯಯನದಲ್ಲಿ ಕೈಗೊಳ್ಳಲಾಗಿದೆ.

೧.೪. ಅಧ್ಯಯನದ ಸಮೀಕ್ಷೆ

ಕುಂಚಿ ಕೊರವ ಮಹಿಳೆಯರ ಬದುಕು-ಬವಣೆಯನ್ನು ಅರಿಯಲು ಪೂರ್ವ ಯೋಜಿತವಾಗಿ ಇದಕ್ಕೆ ಸಂಬಂಧಿಸಿದಂತೆ ಪುಸ್ತಕ, ಸಂಪ್ರಬಂಧಗಳು ಮತ್ತು ಸಂಶೋಧನಾ ಪ್ರಬಂಧಗಳನ್ನು ಪರಿಶೀಲಿಸುವುದು ಅಗತ್ಯವೆನಿಸಿ ಈ ನಿಟ್ಟಿನಲ್ಲಿ ಕೆಳಗಿನ ಹಲವಾರು ಪುಸ್ತಕ, ಸಂಪ್ರಬಂಧಗಳು ಮತ್ತು ಸಂಶೋಧನಾ ಪ್ರಬಂಧಗಳನ್ನು ಅಭ್ಯಸಿಸಲಾಗಿದೆ. ಅವು ಅಧ್ಯಯನಕ್ಕೆ ಪೂರಕವಾಗಿವೆಯೋ ಅಥವಾ ಇಲ್ಲವೋ ಎಂದುದನ್ನು ಮನಗಾಣಲಾಗಿದೆ.

೧. **ಕೊರವ ಸಂಸ್ಕೃತಿ,** ಉಪ ಸಂಸ್ಕೃತಿಗಳ ಮಾಲೆ, ಬರಗೂರು ರಾಮಚಂದ್ರಪ್ಪ

೨. **ಪಾರ್ಥಿ ಬುಡಕಟ್ಟು,** ಒಂದು ಮಾನವ ಶಾಸ್ತ್ರೀಯ ಅಧ್ಯಯನ, ಲಕ್ಕಿಪೃಥ್ವಿರಾಜ್

[illegible]

[illegible]

[illegible]

[illegible]

[illegible]

[illegible]

೩. ಜನಪದ ಮತ್ತು ಆಧುನಿಕ ಬುಡಕಟ್ಟು ಸಮುದಾಯಗಳಲ್ಲಿ ವೇಶ್ಯವಾಟಿಕೆ ಪರಂಪರೆ ಮತ್ತು ಸಮಸ್ಯೆಗಳು, ಲೀಲಾ ಸಂಪಿಗೆ

೪. ಬಳ್ಳಾರಿ ಜಿಲ್ಲೆಯ ಬೇಡ ಸಮುದಾಯದ ಶಿಕ್ಷಣದ ಪ್ರಗತಿ : ಒಂದು ಅಧ್ಯಯನ, ಮಲ್ಲಿಕಾರ್ಜುನ ಕಿಚಡಿ

೫. ಕರ್ನಾಟಕ ಸಿಂಧೋಳಿ ಸಮುದಾಯ : ಸಮಾಜಶಾಸ್ತ್ರೀಯ ಅಧ್ಯಯನ, ದೊಡ್ಡಮನಿ ಲೋಕ್‌ರಾಜ್

೬. ಬುಡಕಟ್ಟು ಅಭಿವೃದ್ಧಿ : ಒಂದು ವಿಮರ್ಶಾತ್ಮಕ ಅಧ್ಯಯನ, ಎಸ್.ಬಿ.ಮುನಿರಾಜು

೭. ಕರ್ನಾಟಕದ ಮೂಲನಿವಾಸಿ ಬುಡಕಟ್ಟು ಸಮುದಾಯದ ಪರಿಸರ ಮತ್ತು ಅಭಿವೃದ್ಧಿ : ಅರ್ಥಶಾಸ್ತ್ರೀಯ ಅಧ್ಯಯನ, ಸುದರ್ಶನ ಕುಮಾರ ಎಂ.

೮. ಹಾಲಕ್ಕಿ ಒಕ್ಕಲಿಗ ಮಹಿಳೆ, ವಿಜಯಲಕ್ಷ್ಮಿ

೯. ಬಂಟರು ಒಂದು ಸಮಾಜೋ-ಸಾಂಸ್ಕೃತಿಕ ಅಧ್ಯಯನ, ಇಂದಿರಾ ಹೆಗ್ಗಡೆ

೧೦. ಕರ್ನಾಟಕದಲ್ಲಿ ಬುಡಕಟ್ಟುಗಳು, ಡಾ.ಎಚ್.ಜೆ.ಲಕ್ಕಪ್ಪಗೌಡ

೧೧. ಇಳಿಗರು, ಜನಪದ ಅಧ್ಯಯನ, ಡಾ.ಎಂ.ಬೈರೇಗೌಡ

೧೨. ಸುಡುಗಾಡು ಸಿದ್ಧರು ಒಂದು ಸಾಂಸ್ಕೃತಿಕ ಅಧ್ಯಯನ, ಡಾ.ಟಿ.ಎಂ.ಭಾಸ್ಕರ್

೧೩. ಲಂಬಾಣಿ ಸಂಸ್ಕೃತಿ, ಡಾ. ಸಣ್ಣರಾಮ

೧೪. ಕುರುಬರ ಹೆಜ್ಜೆಗಳು ಒಂದು ಅಧ್ಯಯನ, ಚಂದ್ರಕಾಂತ ಬಿಜ್ಜರಗಿ

೧೫. ದಕ್ಷಿಣ ಕರ್ನಾಟಕದ ಕೊರವರು ಒಂದು ಸಾಂಸ್ಕೃತಿಕ ಅಧ್ಯಯನ, ಡಾ.ಬಿ.ಪಿ.ರಾಮಯ್ಯ

ಈ ಎಲ್ಲಾ ಪುಸ್ತಕ ಸಂಪ್ರಬಂಧಗಳು ಮತ್ತು ಸಂಶೋಧನಾ ಪ್ರಬಂಧಗಳನ್ನು ಸಮೀಕ್ಷಿಸಿದಾಗ ಇವುಗಳನ್ನು ಕೇವಲ ಸಮುದಾಯಿಕ ಜೀವನಕ್ಕೆ ಸೀಮಿತಗೊಳಿಸಿರುವುದು ಕಂಡುಬರುತ್ತದೆ. ಎಲ್ಲೂ ಮಹಿಳೆಯರನ್ನು ಸಮುದಾಯದ ಒಂದು ಭಾಗವಾಗಿ ಗುರುತಿಸದೆ ಪುರುಷರ ಆಚಾರ-ವಿಚಾರಗಳಲ್ಲಿ ಮಹಿಳೆಯರು ಗೌಣವಾಗಿ ಕೇವಲ ಹುಲುಕಡ್ಡಿಯಂತೆ ಗೋಚರಿಸಿದ್ದಾರೆ. ಆದರೆ ನಮ್ಮ ಪ್ರಸ್ತುತ ಅಧ್ಯಯನದಲ್ಲಿ ಲಿಂಗಸಂಬಂಧಿ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಮಾನವನ ಛಾಯೆಯಂತೆ ಮಹಿಳೆಯರ ಬದುಕಿನ ಪ್ರತಿ ಚಹರೆಯನ್ನು ಇಲ್ಲಿ ಚಿತ್ರಿಸಲಾಗಿದೆ.

೧.೫. ಅಧ್ಯಯನದ ಮಹತ್ವ

ಸ್ತ್ರೀ ಸಂಕುಲವು ವಿವಿಧ ಜಾತಿ, ವರ್ಗ, ವರ್ಣಗಳಲ್ಲಿ ಹಂಚಿಹೋಗಿದ್ದು, ಪ್ರತಿಯೊಂದು ಸಮುದಾಯದ ಮಹಿಳೆಯರ ವಿಭಿನ್ನ ರೀತಿಯ ಸಮಸ್ಯೆಗಳನ್ನು ಗುರುತಿಸಿ, ದಾಖಲಿಸಿ, ವಿಶ್ಲೇಷಣೆಗೊಳಪಡಿಸಿ

ಪರಿಹಾರಗಳನ್ನು ಕಂಡುಕೊಳ್ಳುವಂತಹ ಕಾರ್ಯ ಜರುಗುತ್ತಿದೆ. ಈ ಪರಿಹಾರಗಳನ್ನು ಕಂಡುಕೊಳ್ಳುವಂತಹ ಕಾರ್ಯ ಜರುಗುತ್ತದೆ. ಈ ನಿಟ್ಟಿನಲ್ಲಿ ಕುಂಚಿ ಕೊರವ ಸಮುದಾಯದ ಮಹಿಳೆಯ ಬದುಕು ಬವಣೆಯನ್ನು ಅಭ್ಯಸಿಸುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ. ಇದುವರೆಗೆ ಹಲವಾರು ಸಮುದಾಯಗಳ ಅಧ್ಯಯನ ನಡೆದಿದ್ದು ಮಹಿಳೆಯ ವಿಷಯಗಳನ್ನು ಸಾಂಪ್ರದಾಯಿಕ ಮೌಲ್ಯಗಳಲ್ಲಿಯೇ ಬಿಂಬಿಸಿದ್ದಾರೆ. ಆದರೆ ನಮ್ಮ ಪ್ರಸ್ತುತ ಅಧ್ಯಯನ ಧರ್ಮ, ಆಚರಣೆ, ಸಂಪ್ರದಾಯ, ಸಂಸ್ಕೃತಿ, ಸಾಮಾಜಿಕತೆ ಹೀಗೆ ಹತ್ತು ಒಲವು ವಿಷಯಗಳಲ್ಲಿ ಮಹಿಳೆಯರು ಮುಚ್ಚಿ ಹೋಗಿರುವುದನ್ನು ಗುರುತಿಸಿ, ಪುರುಷ ಪ್ರಧಾನ ಸಮಾಜ ಹೇಗೆ ಮಹಿಳೆಯನ್ನು ಅಂಕಿತದಲ್ಲಿಟ್ಟು ಕೊಳ್ಳುವಲ್ಲಿ ಸಫಲವಾಗಿದೆ ಎಂಬುದನ್ನು ಅರಿತು ಆ ಅಂಕಿತದಿಂದ ಬಿಡುಗಡೆಗೊಳಿಸಿ ತನ್ನದೇ ಆದ ರೂಪುಕೊಡುವ ಕಾರ್ಯ ನಿರ್ವಹಿಸುತ್ತದೆ.

ಅಲೆಮಾರಿ ಜನಾಂಗವೆಂದೆನಿಸಿಕೊಂಡ ಈ ಕುಂಚಿ ಕೊರವ ಮಹಿಳೆಯರ ಕುರಿತಾಗಿ ಎಲ್ಲಾ ದೃಷ್ಟಿಕೋನಗಳಿಂದ ಅಭ್ಯಸಿಸುವತ್ತ ಅಧ್ಯಯನ ಸಾಗುತ್ತದೆ. ಸಂಸ್ಕೃತಿ, ಸಾಮಾಜಿಕತೆ, ಸಾಂಗತ್ಯ, ಸಂರಕ್ಷಣೆ, ಸಂಕುಚಿತತೆ, ಸಂವೇದನಾ ಶೀಲತೆ, ಸಂಭಾಷಣೆ, ಸಂಯೋಜನೆ, ಸಂಪೋಷಣೆ ಇವುಗಳೆಲ್ಲದರಲ್ಲೂ ಮಹಿಳೆಯ ಪ್ರತಿನಿಧೀಕರಣ ಗುರುತಿಸಿ, ನಮ್ಮದೇ ಆದ ನಿಟ್ಟಿನಲ್ಲಿ ಸಮಸ್ಯೀಕರಿಸಿಕೊಂಡು ಇದಕ್ಕೆ ಪರಿಹಾರಗಳನ್ನು ಕಂಡುಕೊಳ್ಳುವತ್ತ ಅಧ್ಯಯನ ಹೆಚ್ಚು ಮಹತ್ವ ಪಡೆದುಕೊಂಡಿದೆ.

ಕೊಂಚಿ ಕೊರವ ಮಹಿಳೆಯರ ಬದುಕಿನ ವಿವಿಧ ಮಜಲುಗಳನ್ನು ಎಳೆಎಳೆಯಾಗಿ ಬಿಚ್ಚಿಡುವಲ್ಲಿ ಅಧ್ಯಯನ ಸಹಾಯಕವಾಗಿದೆ. ಮನುಷ್ಯನ ಅಂತರಾಳ ಎಂದು ಹೇಗೆ ಹೇಳುತ್ತವೆಯೋ ಹಾಗೆ ಇಡೀ ಮನುಕುಲದ ಅಂತರಾಳ ಈ ಬುಡಕಟ್ಟು ಸಮುದಾಯಗಳಾಗಿವೆ. ಈ ಅಲೆಮಾರಿ ಸಮುದಾಯದಲ್ಲಿಯ ಅಂತರಾಳದ ಜೀವಂತ ನಿದರ್ಶನಗಳು ಕುಂಚಿ ಕೊರವ ಮಹಿಳೆಯರಾಗಿದ್ದಾರೆ. ಇಂತಹ ಮಹಿಳೆಯರ ಅಧ್ಯಯನ ಮಾತ್ರ ಯಾವುದಾದರೊಂದು ಅಧ್ಯಯನಕ್ಕೆ ಪರಿಪೂರ್ಣತೆಯನ್ನು ತಂದುಕೊಡಬಲ್ಲದು ಎಂದು ಹೇಳಿದರೆ ತಪ್ಪಾಗಲಾರದು.

ಅಧ್ಯಾಯ ೨

ಕುಂಚಿ ಕೊರವ ಸಮುದಾಯ ಮತ್ತು ಮಹಿಳೆ : ಒಂದು ನಿರ್ವಚನ

೨

ಕುಂಚಿ ಕೊರವ ಸಮುದಾಯ ಮತ್ತು ಮಹಿಳೆ : ಒಂದು ನಿರ್ವಚನ

ವ್ಯಕ್ತಿ ವ್ಯಕ್ತಿಗಳು ಕೂಡಿ ಬಾಳಿದರೆ ಕುಟುಂಬ, ಕುಟುಂಬ ಕುಟುಂಬಗಳು ಒಂದೆಡೆ ಕೂಡಿ ವಾಸಿಸಿದರೆ ಅದು ಸಮುದಾಯ. ಇಂತಹ ಅನೇಕ ಸಮುದಾಯಗಳು ಸೇರಿ ಬದುಕಿದಾಗ ಅವು ಗ್ರಾಮ, ನಗರ, ಪಟ್ಟಣಗಳಾಗುತ್ತವೆ. ಸಮುದಾಯಗಳು ಈ ಬಗೆಯ ಗ್ರಾಮ, ನಗರ, ಪಟ್ಟಣಗಳಲ್ಲಿ ನೆಲೆಯೂರಲು ತಮ್ಮದೇ ಆದ ಇತಿಹಾಸವನ್ನು ಕೂಡ ಹೊಂದಿರುತ್ತವೆ. ಈ ಸಮುದಾಯಗಳು ಸಮಾನ ಆಸಕ್ತಿ, ಅಭಿರುಚಿ, ಮನೋಭಾವ ಅಥವಾ ಉದ್ಯೋಗವನ್ನು ಹೊಂದಿದ ಜನರಿಂದ ಕೂಡ ಸೃಷ್ಟಿಗೊಂಡಂತವರಾಗಿರಬಹುದು. ಇಂತಹ ಸಮುದಾಯಗಳಲ್ಲಿ ಕೊರವ ಸಮುದಾಯದ ಉಪ ಪಂಗಡವಾದ ಕುಂಚಿ ಕೊರವ ಸಮುದಾಯವು ಉದ್ಯೋಗ, ಜನಾಂಗೀಯ ಹಿನ್ನೆಲೆ ಅಥವಾ ಇನ್ನಾವುದೋ ಕಾರಣಕ್ಕೆ ವಿಶಿಷ್ಟ ಸ್ಥಾನ ಪಡೆದುಕೊಂಡಂತಹ ಹಿನ್ನೆಲೆಯಲ್ಲಿ ವಿಶೇಷ ಗಮನ ಸೆಳೆದಿದೆ. ಆದ್ದರಿಂದ ಸಮುದಾಯದ ಬಹುಮುಖ್ಯ ಭಾಗವಾದ ಮಹಿಳೆಯರ ಬದುಕು-ಬವಣೆಯನ್ನು ಅರಿಯುವುದನ್ನು ನಮ್ಮ ಅಧ್ಯಯನದ ಬಹುಮುಖ್ಯ ಆಶಯವಾಗಿಸಿಕೊಳ್ಳಲಾಗಿದೆ. ಇದಕ್ಕೆ ಪೂರಕವಾಗಿ ಈ ಸಮುದಾಯದ ಮೂಲಕ ಅಧ್ಯಯನ ಬಹಳ ಮುಖ್ಯವಾದ ಪಾತ್ರವಹಿಸಿಕೊಳ್ಳುತ್ತದೆ. ಇದಕ್ಕೂ ಪೂರ್ವದಲ್ಲಿ ಸಮುದಾಯ ಎನ್ನುವುದರ ಬಗ್ಗೆ ಸ್ಪಷ್ಟೀಕರಣ ಅಗತ್ಯವಾಗಿದೆ. ಹಲವಾರು ಸಮಾಜ ಶಾಸ್ತ್ರಜ್ಞರು ಈಗಾಗಲೇ ಸಮುದಾಯಗಳ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಇವರ ಪ್ರಕಾರ ಸಮುದಾಯ ಎಂದರೆ

ಇ.ಎಸ್.ಬೊಗಾರ್ಡಸ್‌ರ ಪ್ರಕಾರ-"ಒಂದು ನಿರ್ದಿಷ್ಟವಾದ ಪ್ರದೇಶದಲ್ಲಿ ವಾಸಿಸುವ ಮತ್ತು ಕೆಲವು ಪ್ರಮಾಣದ ನಾವು ನಮ್ಮವರು ಎಂಬ ಭಾವನೆಯನ್ನು ಹೊಂದಿರುವ ಸಾಮಾಜಿಕ ಜೀವನದ ಎಲ್ಲಾ ನೋಟಗಳನ್ನೊಳಗೊಂಡ ಅತಿ ಚಿಕ್ಕದಾದ ಪ್ರಾಂತೀಯ ಸಮೂಹಕ್ಕೆ ಸಮುದಾಯ ಎನ್ನುತ್ತೇವೆ"[೧] ಎಂದು ಹೇಳಿದ್ದಾರೆ.

ಕಿಂಗ್ಸಲೇ ಡೇವಿಸ್ ರ ಪ್ರಕಾರ - "ಸಾಮಾಜಿಕ ಜೀವನದ ಎಲ್ಲ ಅಂಶಗಳನ್ನು ಒಳಗೊಂಡಿರುವ ಒಂದು ಅತಿ ಚಿಕ್ಕ ಸ್ಥಾನೀಯ ಜನ ಸಮೂಹವನ್ನು ಸಮುದಾಯ ಎನ್ನಬಹುದು."[೨] ಎಂದು ಹೇಳಿದ್ದಾರೆ.

ಈ ಮೇಲಿನ ವ್ಯಾಖ್ಯಾನಗಳನ್ನು ಗಮನಿಸಿದಾಗ ಯಾವುದೇ ವ್ಯಕ್ತಿ ಒಂದು ವ್ಯಾಪಾರ ವ್ಯವಸ್ಥೆಯಲ್ಲಾಗಲೀ, ಒಂದು ಮತ ಇಲ್ಲವೇ ಚರ್ಚಿನಲ್ಲಾಗಲಿ ಜೀವಿಸಲು ಸಾಧ್ಯವಿಲ್ಲ. ಎಲ್ಲಾ ಬಗೆಯ ಸಾಮಾಜಿಕ ಸಂಬಂಧಗಳು ಲಭ್ಯವಾಗಬಹುದಾದ ಜನರ ಸಮೂಹದಲ್ಲಿ ಸ್ಥಿರವಾದ ನೆಲೆಯಲ್ಲಿ ಮಾತ್ರ ಸಮರ್ಪಕವಾಗಿ ಮಾನವ ಜೀವಿಸಲು ಸಾಧ್ಯ. ಇದರಿಂದಾಗಿಯೇ ಕೆಲವಾರು ಜನರು, ಯಾವುದಾದರೊಂದು ಸ್ಥಳದಲ್ಲಿ ಶಾಶ್ವತವಾಗಿ ನೆಲೆಸಿರುತ್ತಾರೆ(ಹೆಣ್ಣು-ಗಂಡು ಇಬ್ಬರನ್ನು ಒಳಗೊಂಡಂತೆ). ಆದಿವಾಸಿ ನೆಲೆ, ಗ್ರಾಮ, ಪಟ್ಟಣ, ನಗರ, ಜಿಲ್ಲೆ, ರಾಷ್ಟ್ರ ಮೊದಲಾದವುಗಳನ್ನು ಸಮುದಾಯಗಳು ಎಂದು ಕರೆಯಬಹುದು. ಇಂತಹ ಒಂದು ಆದಿವಾಸಿ ಅಲೆಮಾರಿ ನೆಲೆಯ ಮಹಿಳೆಯರ ಬದುಕು ಬವಣೆ ಅರಿಯುವ ಕಾರ್ಯ ತಮ್ಮ ಅಧ್ಯಯನದ ಮೂಲ ಉದ್ದೇಶವಾಗಿದೆ. ಇತ್ತೀಚೆಗೆ ಅಲೆಮಾರಿತನ ಮಾಯವಾಗಿ ನಗರ ಪಟ್ಟಣಗಳಲ್ಲಿ ನೆಲೆಯೂರಿ, ನಗರ ವಾಸಿಗಳಾಗಿ ಪ್ರತ್ಯೇಕ ಸಮುದಾಯ ನಿರ್ಮಿಸಿಕೊಂಡು ಬದುಕುತ್ತಿದ್ದಾರೆ. ಆದ್ದರಿಂದ ಈ ಜಾಡಿನಲ್ಲಿ ಅಧ್ಯಯನ ಸಾಗುತ್ತದೆ.

೨.೦. ಕೊರವ ಪದದ ನಿಷ್ಪತ್ತಿ, ಹುಟ್ಟು ಮತ್ತು ಮೂಲಸ್ಥಾನ

ಕುಂಚಿ ಕೊರವರು "ಕೊರವ ಅಥವಾ ಕೊರಮ" ಅಲೆಮಾರಿ ಬುಡಕಟ್ಟಿನ ಉಪ ಪಂಗಡದವರಾಗಿದ್ದು, ಕೊರಮ ಅಥವಾ ಕೊರವ ಪದದ ಹುಟ್ಟಿನ ಬಗ್ಗೆ ತಿಳಿಯುವುದು ತುಂಬಾ ಅವಶ್ಯವಾಗಿದೆ. ಕೊರಮ ಎಂಬುದು ಜಾತಿಸೂಚಕ ಪದವಾಗಿದ್ದು, ಇದರ ನಿಷ್ಪತ್ತಿ ಹೀಗಿದೆ. "ಕೊರವಂಜಿ ಶಬ್ಧ ಪ್ರಮುಖ ದ್ರಾವಿಡ ಭಾಷೆಗಳಲ್ಲಿ ಕಂಡುಬರುತ್ತದೆ. ತಮಿಳಿನ ಪುಲ್ಲಿಂಗ ರೂಪ 'ಕುರುನ್ ' ಎಂದಾದರೆ 'ಕುರುತ್ತಿ', 'ಕುರುವ', 'ಕುರವಂಚಿ(ಜಿ)' ಎಂಬ ಹಲವಾರು ಸ್ತ್ರೀರೂಪಗಳಿವೆ. ಇದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ 'ಕೊರವಂಜಿ', ಕೊರವತಿ, ಕೊರಮಿತಿ, ತೆಲುಗಿನಲ್ಲಿ 'ಕೊರವತ', 'ಕೊರವಂಜಿ' ಮುಂತಾದ ರೂಪಗಳು ಪ್ರಯೋಗದಲ್ಲಿವೆ, ಪುಲ್ಲಿಂಗ ಮತ್ತು ಸ್ತ್ರೀಲಿಂಗ ರೂಪ ಕು ದಿಂದ ಕುರುವ, ಕೊರಮ ರೂಪಗೊಂಡಿರಬಹುದು. ಹೀಗೆ ಇದನ್ನು ಅರ್ಥೈಸಬಹುದು. "ಪುಲ್ಲಿಂಗ ರೂಪ 'ಕು> ಕುರ> ಕುರು> ಕುರುಣಿಗ' ಕುರುವ> ಕೊರವ> ಕೊರವನ್> ಕೊರಮ> ಕೊರಚ ಎಂದಾದರೆ ಸ್ತ್ರೀಲಿಂಗ ರೂಪ ಕು> ಕುರ> ಕುರು> ಕುರುವಿ> ಕೊರವಿ> ಕೊರವತ> ಕೊರವಿತೆ>ಕುರಂಚಿ> ಕೊರಮಿ> ಕೊರವಂಜಿ> ಕೊರವಂಚಿ ಎಂದು ಕಾಲದಿಂದ ಕಾಲಕ್ಕೆ ರೂಪಾಂತರಗೊಂಡಿದೆ ಎಂಬುದು ತಿಳಿಯುತ್ತದೆ."[೩]

ಹೀಗೆ ಕೊರಮ ಪದ ನಿಷ್ಪತ್ತಿಯಾಗಿದ್ದು ಪ್ರಸ್ತುತದಲ್ಲಿ ಕೊರವ, ಕೊರಮ ಎಂಬ ಹೆಸರಿನಿಂದ ಗುರುತಿಸಿಕೊಳ್ಳುತ್ತಾರೆ.

[illegible]

ಕೊರವ ಜನಾಂಗದ ಹುಟ್ಟು

ಯಾವುದೇ ಒಂದು ಜಾತಿ, ಜನಾಂಗ, ಸಮುದಾಯ ಅಷ್ಟೇ ಏಕೆ ಮನುಷ್ಯನ ಹುಟ್ಟಿಗೆ ಒಂದು ಪೂರ್ವಾಪರ ಇತಿಹಾಸ ಇದ್ದೇ ಇರುತ್ತದೆ. ಇಂತಹ ಇತಿಹಾಸ ಅಧ್ಯಯನದ ಸಂದರ್ಭದಲ್ಲಿ ಬಹುಮುಖ್ಯ ಪಾತ್ರವಹಿಸುತ್ತದೆ. ವರ್ತಮಾನವು ಯಾವಾಗಲು ಭೂತಕಾಲದ ಜಾಡನ್ನು ಹಿಡಿದು ಹೆಜ್ಜೆ ಹಾಕುತ್ತಿರುತ್ತದೆ. ಕುಂಚಿ ಕೊರವರು ಕೊರವ ಜನಾಂಗದ ಉಪಪಂಗಡವಾಗಿದ್ದರಿಂದ ಕೊರವರ ಹುಟ್ಟು ಹೇಗಾಯಿತು, ಯಾವ ಆಧಾರದ ಮೇಲೆ ಉಪ ಪಂಗಡಗಳು ಸೃಷ್ಟಿಯಾದವೆಂದು ತಿಳಿಯಬೇಕಿದೆ. ಕೊರಮ ಜನಾಂಗದ ಹುಟ್ಟಿಗೆ ಅನೇಕ ಕಥೆಗಳು ನಮಗೆ ಲಭ್ಯವಾಗುತ್ತವೆ. ಕೆಲವೊಂದನ್ನು ಇಲ್ಲಿ ಉಲ್ಲೇಖಿಸಲಾಗಿದೆ.

ಕಥೆ ೧

ಮಹಾಭಾರತದಲ್ಲಿ ಕೊರಮರು ಧರ್ಮರಾಜನ ವಂಶದವರೆಂದು ಸೂಚಿಸುವ ಒಂದು ಕತೆಯಿದೆ. ಸೋದರರ ಜೊತೆ ಧರ್ಮರಾಜನು ವನವಾಸಕ್ಕೆ ಹೋದಾಗ ಅವನನ್ನು ಪ್ರೀತಿಸಿದ ಓರ್ವ ಹೆಣ್ಣು ಮಗಳು ಕಣಿ ಹೇಳುವವಳ ವೇಷ ಧರಿಸಿ ಹೋಗಿ ಅವನನ್ನು ವರಿಸಿದಳಂತೆ , ಆಕೆಯ ಸಂತಾನವೇ ಕೊರವರೆಂದು ನಂಬಲಾಗುತ್ತದೆ.[೪]

ಕಥೆ ೨

ತುಮಕೂರು ಜಿಲ್ಲೆಯ ತಿಪಟೂರು ತಾಲೂಕಿನ ಹಿರೇಬಿದರೆಯ ಸುಮಾರು ತೊಂಬತ್ತು ವರ್ಷದ ಕೊರಮರ ಶ್ರೀಪಾಪಯ್ಯನವರು ಹೇಳಿದ ಕಥೆಯನ್ನು ಡಾ.ಬಿ.ಪಿ.ರಾಮಯ್ಯನವರು ತಮ್ಮ ಲೇಖನದಲ್ಲಿ ಹೀಗೆ ಉಲ್ಲೇಖಿಸಿದ್ದಾರೆ.

"ಹಿಂದೆ ದಶರಥ ಮತ್ತು ಕೌಸಲ್ಯರವರಿಗೆ ಮಕ್ಕಳಿಲ್ಲದಿದ್ದಾಗ ಅವರು ಶಿವ ಪಾರ್ವತಿಯರನ್ನು ಪ್ರಾರ್ಥಿಸಿದರು. ಇವರ ತಪಸ್ಸನ್ನು ಮೆಚ್ಚಿ ಕೊರಮ, ಕೊರವಂಜಿ ವೇಷ ಧರಿಸಿದ ಶಿವ, ಪಾರ್ವತಿಯರು ಆಯೋಧ್ಯಾ ಪಟ್ಟಣದ ಹೊರ ಭಾಗದಲ್ಲಿದ್ದ ಮರದಡಿಗೆ ಬಂದು, ಆ ಮರದಡಿಯಲ್ಲಿ ಕೊರಮನು ಬಿದಿರಿನ ಬುಟ್ಟಿ ಹೆಣೆಯುತ್ತಾ ಕುಳಿತುಕೊಂಡನು. ಕೊರವಂಜಿ ಬಿದಿರಿನ ಗೂಡೆಯೊಂದನ್ನು ಹೊತ್ತು ಕೈಯಲ್ಲಿ ಗಗ್ರದ(ಮಂತ್ರದ) ಕೋಲು ಹಿಡಿದು ಪಟ್ಟಣಕ್ಕೆ ಬಂದು ಕೌಸಲ್ಯಗೆ ಮಕ್ಕಳ ಫಲ ಕೊಟ್ಟಳಂತೆ. ಅವಳು ಅಲ್ಲಿಂದ ಹೊರಡುವಷ್ಟರಲ್ಲಿ ಕೊರಮನೂ ಬಂದು ಆಕೆಯನ್ನು ಕೂಡಿಕೊಂಡನಂತೆ. ಇಬ್ಬರೂ ಕೈಲಾಸದ ಕಡೆ ಹೊರಟಾಗ ತಮ್ಮ ಈ ವೇಷದ ಕುರುಹನ್ನು ಉಳಿಸುವ ಸಲುವಾಗಿ ಇಬ್ಬರು ಮಕ್ಕಳನ್ನು ಸೃಷ್ಟಿಸಿ ಶಿವ ತನ್ನ ಸೊಂಟದಲ್ಲಿದ್ದ ಮಚ್ಚನ್ನು ತೆಗೆದು ಆ ಮಕ್ಕಳಿಗೆ ಹಿಡಿಯಲು ಹೇಳಿದನಂತೆ. ಒಬ್ಬನು ಮಚ್ಚಿನ ಹಿಡಿಕೆಯ ಭಾಗವನ್ನು ಇನ್ನೊಬ್ಬ ಮಚ್ಚಿನ ತುದಿಯ ಭಾಗವನ್ನು

ಹಿಡಿದನಂತೆ. ಹಿಡಿಕೆಯ ಭಾಗ ಹಿಡಿದವನಿಗೆ ಗೌರಿಮಗನಾಗು ಎಂದು ವರಕೊಟ್ಟು ಹೋದರಂತೆ. ಗೌರಿಮಗ ಎಂದರೆ ಕೊರಮ ಗಂಗೆ ಮಗ ಎಂದರೆ ಮೇದಾರ ಎಂದು ಕೊರವ ಜನಾಂಗದ ಹುಟ್ಟಿನ ಬಗ್ಗೆ ವಿವರಿಸಿದ್ದಾರೆ.[೫]

ಕಥೆ ೩

ಮಹಾಭಾರತದಲ್ಲಿ ಪ್ರಮುಖವಾಗಿ ಎರಡು ಬಣಗಳು. ಹಾಗೆಯೇ ಈ ಕೌರವ ಪಾಂಡವರ ನಡುವೆ ವೈಮನಸ್ಸು, ದ್ವೇಷ ಹಾಗೂ ಅವರಿಬ್ಬರ ನಡುವೆ ನಡೆದ ಯುದ್ಧವೇ ಮಹಾಭಾರತ ಕಥೆಯ ತಿರುಳು. ಬಾಲ್ಯದಿಂದಲೂ ಬದ್ಧದ್ವೇಷಿಗಳಾದ ಈ ಕೌರವ ಪಾಂಡವರು ವಯಸ್ಕರಾದಂತೆಲ್ಲಾ ಅವರಿಬ್ಬರ ನಡುವಣ ದ್ವೇಷವೂ ವೃದ್ಧಿಸತೊಡಗಿತು. ದಿನೇ ದಿನೇ ಮಿತಿಮೀರತೊಡಗಿದ ದುರ್ಯೋಧನನ ಅತಿಯಾದ ದುರ್ಬುದ್ಧಿಯಿಂದ ಬೇಸತ್ತು ಹೋದ ರಾಜಕುಮಾರ ಧರ್ಮರಾಜನು ದುರ್ಯೋಧನನ ಮುಖವನ್ನು ಸಹ ನೋಡಬಾರದೆಂಬ ಉದ್ದೇಶದಿಂದ ರಾಜ್ಯವನ್ನು ತೊರೆದು ಒಮ್ಮೆ ದೇಶಾಂತರ ಹೊರಟು ಹೋಗುತ್ತಾನೆ. ಆದರೆ ಧರ್ಮರಾಜನನ್ನು ಒಬ್ಬ ಹುಡುಗಿ ಬಹಳ ಗಾಢವಾಗಿ ಪ್ರೀತಿಸಿರುತ್ತಾಳೆ. ಆ ಹುಡುಗಿ ಮಾತ್ರ ಅವನನ್ನು ಮರೆತಿರುವುದಿಲ್ಲ. ಧರ್ಮರಾಜ ಊರು ಬಿಟ್ಟು ಹೊರಟು ಹೋದ ಎಂಬ ಸುದ್ದಿ ಕಿವಿಗೆ ಬೀಳುತ್ತಿದ್ದಂತೆಯೇ ದಿಗ್ಭ್ರಾಂತಳಾಗುತ್ತಾಳೆ. ರಾಜಕುಮಾರನನ್ನು ಸಂಪೂರ್ಣವಾಗಿ ಮರೆಯಲೂ ಆಗದೇ ಸೇರಿಸಿಕೊಳ್ಳಲು ಆಗದೆ ತೊಳಲಾಟಕ್ಕೆ ಸಿಲುಕಿಕೊಳ್ಳುತ್ತಾಳೆ. ಕೊನೆಗೆ ಒಂದು ದಿನ ಅವಳು ಮನೆ ಬಿಟ್ಟು ಹೊರಟು ಹೋಗುತ್ತಾಳೆ. ಗೊತ್ತು ಗುರಿಯಿಲ್ಲದೆ ಆ ಹುಡುಗಿ ಅಪರಿಚಿತ ಸ್ಥಳಗಳಲ್ಲಿ ಅಪರಿಚಿತ ಜನರ ನಡುವೆ ವ್ಯವಹರಿಸಲು ಭಯಗ್ರಸ್ಥಳಾಗುತ್ತಾಳೆ. ಆಗ ಅವಳಿಗೊಂದು ಉಪಾಯ ಹೊಳೆಯುತ್ತದೆ. ಆ ಪ್ರಕಾರ ಭವಿಷ್ಯ ನುಡಿಯುವವಳಂತೆ ವೇಷ ಹಾಕಿಕೊಂಡು ಊರೂರು, ಬೀದಿ ಬೀದಿ ಅಲೆಯುತ್ತಾ ರಾಜಕುಮಾರ ಧರ್ಮರಾಜನನ್ನು ಹುಡುಕುತ್ತಾಳೆ. ಕೊನೆಗೊಂದು ದಿನ ತನ್ನ ಪ್ರಯತ್ನದಲ್ಲಿ ಯಶಸ್ವಿಯೂ ಆಗುತ್ತಾಳೆ. ಅಂದರೆ ಧರ್ಮರಾಜನನ್ನು ಪತ್ತೆ ಹಚ್ಚಿ ಅವಳು ಅವನ ಜೊತೆಗೆ ಸೇರಿಕೊಳ್ಳುತ್ತಾಳೆ. ಆಗ ಗರ್ಭಿಣಿಯಾಗುತ್ತಾಳೆ. ಹೀಗೆ ಈ ಸಂದರ್ಭದಲ್ಲಿ ಇವರಿಬ್ಬರಿಗೆ ಹುಟ್ಟಿದ ಸಂತಾನವೇ ಕೊರಮ ಎಂಬ ಹೆಸರು ಪಡೆಯಿತು.[೬]

ಈ ಕಥೆಗಳನ್ನು ಗಮನಿಸಿದಾಗ ರಾಮಾಯಣ, ಮಹಾಭಾರತದ ಸಂದರ್ಭದಲ್ಲಿ ಕೊರಮ ಜನಾಂಗ ಹುಟ್ಟಿತೆಂದು ಕಂಡುಬರುತ್ತದೆ. ಮತ್ತು ಭಾಗವತದಲ್ಲೂ ಈ ಜನಾಂಗದ ಕುರಿತು ಮಾಹಿತಿ ಲಭ್ಯವಾಗುತ್ತದೆ. ವಿಶೇಷವೆಂದರೆ ಈ ಜನಾಂಗದ ಹುಟ್ಟಿಗೆ ಹೆಣ್ಣು ಮೂಲ ಕಾರಣ ಎಂಬುದರಲ್ಲಿ ಎರಡು ಮಾತಿಲ್ಲ. ಹೆಣ್ಣಿನಿಂದ ಸೃಷ್ಟಿಗೊಂಡ ಜನಾಂಗದಲ್ಲಿ ಹೆಣ್ಣಿಗೆ ಪ್ರಾಶಸ್ತ್ಯ ಇರಲೇಬೇಕಲ್ಲವೆ ಎಂಬ ಪ್ರಶ್ನೆ ಕಾಡದಿರದು. ಆದರೆ ವಾಸ್ತವದಲ್ಲಿ ಹೆಣ್ಣನ್ನು ಎರಡನೆ ದರ್ಜೆಯ ಪ್ರಜೆಯಾಗಿಯೇ ಕಾಣುತ್ತಾರೆ. ಮೂಲದಲ್ಲಿ ಏನೇ ಇರಬಹುದು ಆದರೆ ಇಂದು ಮಾತ್ರ ಪುರುಷ ಅಧಿಕಾರಶಾಹಿತ್ವ

ನೆಲೆಗೊಂಡಿದೆ. ಇವರ ಸಂಸ್ಕೃತಿ, ಸಂಪ್ರದಾಯ, ಜನಪದ ಸಾಹಿತ್ಯ ಹಿಂದೆಯೂ ಕೂಡ ಪುರುಷ ಪ್ರಧಾನತೆ ಆಳ್ವಿಕೆ ಇತ್ತು ಎಂದು ಹೇಳುವಲ್ಲಿ ಕೆಲವೊಂದು ಕುರುಹುಗಳಾಗಿವೆ.

ಕೊರವ ಸಮುದಾಯದ ಮೂಲ

ಪ್ರತಿಯೊಂದು ಮಾನವ ಸಮುದಾಯಕ್ಕೆ ಅದರದೇ ಅದ ಮೂಲ ಹಾಗೂ ಹಿನ್ನೆಲೆಗೆ ಸಂಬಂಧಿದಂತೆ ಒಂದೊಂದು ಇತಿಹಾಸ ಇದ್ದೇ ಇರುತ್ತದೆ. ಒಂದು ಸಮುದಾಯದ ಮೂಲವನ್ನು ಕಂಡುಕೊಳ್ಳಬೇಕಾದರೆ ಮಾನವಶಾಸ್ತ್ರದ ಕಡೆ ಗಮನಹರಿಸುವುದು ಅವಶ್ಯವಾಗಿದೆ. ಕೊರಮರು ಮೂಲತಃ ಬುಡಕಟ್ಟಿನವರಾಗಿದ್ದು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಅಲೆಮಾರಿಗಳಾಗಿ ಜೀವನ ಸಾಗಿಸುತ್ತಿದ್ದವರು. ಕಾಲಕ್ರಮೇಣವಾಗಿ ಗುಂಪುಗಳನ್ನು ಕಟ್ಟಿಕೊಂಡು ಒಂದೆಡೆ ಸ್ಥಿರವಾಗಿ ನೆಲೆಯೂರಿ, ನಾಗರಿಕ ಜೀವನ ಪ್ರಾರಂಭಿಸಲು ಪ್ರಯತ್ನಿಸಿದವರು. ತಮಿಳುನಾಡು ಹಾಗೂ ಆಂಧ್ರಪ್ರದೇಶದಲ್ಲಿ ಹೆಚ್ಚಾಗಿ ಕಂಡುಬರುವ ಕೊರವರು ಎಲ್ಲಿಂದ ಬಂದವರೆಂದು ಹೇಳುವುದು ಸ್ವಲ್ಪ ಕಷ್ಟದ ಕೆಲಸವೇ ಆಗಿದೆ. ಅದರೆ ಭಾಷೆ ಹಾಗೂ ಶೈಲಿಯನ್ನು ನೋಡಿದರೆ ಇವರು ದಕ್ಷಿಣ ಭಾರತದವರು ಅದರಲ್ಲಿಯೂ ತಮಿಳುನಾಡಿನಿಂದ ವಲಸೆ ಬಂದವರೆಂದು ಹೇಳಬಹುದಾಗಿದೆ. ಬದುಕಿನ ಅನಿವಾರ್ಯ ಕಾರಣಗಳಿಂದಾಗಿ ದೇಶದ ಹಲವು ಭಾಗಗಳಲ್ಲಿ ಚದುರಿ ಹೋಗಿ ಬೇರೆ ಬೇರೆ ಹೆಸರುಗಳಿಂದ ಗುರುತಿಸಲ್ಪಡುತ್ತಿದ್ದಾರೆ.

ಥರ್ಸ್ಟ್‌ನ್ ಅವರು ತಿಳಿಸುವಂತೆ ಉತ್ತರ ಹಾಗೂ ದಕ್ಷಿಣ ಅರ್ಕಾಟ್‌ಗಳಲ್ಲಿ ಕೊರಚ, ಕೊರ್ಚ ಎಂದು ಕರೆಯುತ್ತಾರೆ. ಆದರೆ, ಅಕ್ಕಪಕ್ಕದ ಜಿಲ್ಲೆಗಳಲ್ಲಿ ಅವರನ್ನೇ ಯರುಕುಲ ಅಥವಾ ಯರಕಲ ಎಂದು ಕರೆಯುತ್ತಾರೆ. ಇಲ್ಲಿ ಒಂದೇ ಪಂಗಡದ ಜನರನ್ನು ಬೇರೆ ಬೇರೆ ಹೆಸರಿನಿಂದ ಕರೆಯುತ್ತಿದ್ದ ಬಗ್ಗೆ, ಅಲ್ಲದೆ ತಮಿಳುನಾಡಿನ ಕೆಲ ಭಾಗಗಳಲ್ಲಿ ಇವರು ವಾಸವಾಗಿದ್ದ ಅಂಶಗಳನ್ನು ಈ ದಾಖಲೆ ಸ್ಪಷ್ಟಪಡಿಸುತ್ತಿದೆ. ಹೀಗೆ ಮುಂದುವರೆಯುತ್ತಾ ಕೊರವರು ಹಾಗೂ ಕೇಪ್ ಮಾರಿಗಳು ಒಂದೇ ಮೂಲದವರು. ಅವರು ಸಹ ತಮಿಳುನಾಡಿನ ತಂಜಾವೂರು ಜಿಲ್ಲೆಯ ಒಂದು ಹಳ್ಳಿಯಿಂದ ಹೊರಟು ಭಾರತದಾದ್ಯಂತ ಚದುರಿರಬೇಕು ಎನ್ನುವಲ್ಲಿಯೂ ಕೂಡ ಕೊರವರು ಮತ್ತು ಕೇಪಮಾರಿಗಳು ಒಂದೇ ಮೂಲದವರು ಎಂಬ ಸತ್ಯಾಂಶ ಕಾಣಬಹುದು. ಹೀರೇಂದ್ರ ಕೆ ರಕ್ಷಿತ್ ಅವರು ಈಡಿಗರು, ಬೆಸ್ತರು ಮತ್ತು ಯರುಕುಲರು ತಮಿಳುನಾಡಿನಿಂದ ವಲಸೆ ಬಂದವರೆಂದು ತಿಳಿಸುತ್ತಾರೆ.[೬]

೨.೧. ಕೊರವರ ಉಪ ಪಂಗಡಗಳು

ಉದ್ಯೋಗಕ್ಕನುಗುಣವಾಗಿ ಕುಕ್ಕೆ ಹೆಣೆಯುವವರನ್ನು ಕುಕ್ಕೆ ಕೊರಮರು, ವಾಲಗ ಊದುವವರನ್ನು ವಾಲಗದ ಕೊರವರು, ಹಗ್ಗ ಮಾಡುವವರನ್ನು ಹಗ್ಗದ ಕೊರಚರು, ಎತ್ತುಗಳ ವ್ಯಾಪಾರ ಮಾಡುವವರನ್ನು ಎತ್ತಿನ ಕೊರಚರು, ಉಪ್ಪು ಮಾರುವವರನ್ನು ಉಪ್ಪು ಕೊರಮರು, ಕಳ್ಳತನ, ರಸ್ತೆ ದರೋಡೆ

ಮಾಡುತ್ತಿದ್ದವರನ್ನು ಕಳ್ಳ ಕೊರಮರು(ಕಳ್ಳ ಕೊರಚ), ಬ್ಯಾರಗಾಯಿ ಕೊರಮರು, ಗಂಡಿ ಕೊರಮರು, ಕೋತಿ ಆಟವಾಡಿಸುವವರನ್ನು ಕೋತಿ ಕೊರಮರು, ಹಾವು ಆಡಿಸುವವರನ್ನು ಹಾವಿನ ಕೊರಮರು ಅಥವಾ ಕೊರವರು, ಶಹನಾಯಿನುಡಿಸುವವರನ್ನು ಭಜಂತ್ರಿಗಳು, ಕುಂಚ ತಯಾರಿಸುತ್ತಿದ್ದವರನ್ನು ಕುಂಚಿ ಕೊರಮರು ಎಂದು ಮುಂತಾದ ಹೆಸರುಗಳಿಂದ ಗುರುತಿಸುತ್ತಾರೆ.[೮]

ಹೀಗೆ ಅವರು ಮಾಡುವ ಕೆಲಸದ ಆಧಾರದ ಮೇಲೆ ಉಪಪಂಗಡಗಳಾಗಿ ಬೇರ್ಪಟ್ಟಿವೆ. ಇಂದು ನಮ್ಮ ಅಧ್ಯಯನಕ್ಕೆ 'ಕುಂಚಿ ಕೊರವ' ಉಪ ಪಂಗಡವನ್ನು ಆಯ್ದುಕೊಂಡಿದ್ದು, ಇವರ ಈ ಮೂಲದ ಬಗೆಗೆ ಕೆಲವು ದೃಷ್ಟಾಂತಗಳು ಸಿಗುತ್ತವೆ.

೨.೨. ಕುಂಚಿ ಕೊರವ ನಾಮದ ಮೂಲ

ಕುಂಚ ಮಾಡುವವರನ್ನು ಸಾಮಾನ್ಯವಾಗಿ ಕುಂಚಿ ಕೊರವ ಎಂದು ಕರೆಯಲಾಯಿತು. ಸೀರೆ ನೇಯ್ಯುವ ಸಂದರ್ಭದಲ್ಲಿ ಸೀರೆ ತಯಾರಿಸುವ ನೂಲಿಗೆ (ದಾರದ ಎಳೆ) ಸರಿಯನ್ನು(ಮೈದಾ ಹಿಟ್ಟಿನಿಂದ ಮಾಡಿದ್ದು) ಹಾಕಿ ಈ ಕೊರವರು ತಯಾರಿಸುತ್ತಿದ್ದ ಸಣಬಿನ ಕುಂಚದಿಂದ ತೀಡುತ್ತಿದ್ದರು. ಹಾಗಾಗಿ ಇವರಿಗೆ ಕುಂಚಿ ಕೊರವ ಎಂದು ಕರೆಯಲಾಯಿತು(ಕುಂಚ ಕ್ರಮೇಣವಾಗಿ ಆಡುಭಾಷೆಯಲ್ಲಿ 'ಕುಂಚಿ' ಎಂದು ಬದಲಾದಂತಿದೆ).

ಈ ಕುಂಚಿ ಕೊರವರ ಹುಟ್ಟಿಗೆ ಮತ್ತೊಂದು ನಂಬಿಕೆ ಇದೆ. ಅದು, ಕೊರವರು ಮೂಲತಃ ಭಿಕ್ಷಾಟನೆಗೆ ಹೆಸರುವಾಸಿಯಾದವರು. ಭಿಕ್ಷಾಟನೆಯನ್ನು ತಮ್ಮ ವೃತ್ತಿ ಧರ್ಮ ಎಂದು ಹೇಳುತ್ತಾರೆ. ಭಿಕ್ಷಾಟನೆಗೆ ಮಹಿಳೆಯರು ಹೋದಂತ ಸಂದರ್ಭದಲ್ಲಿ ಮಳೆ, ಚಳಿ, ಗಾಳಿ ಎನ್ನದೆ ತಿರುಗಬೇಕಾಗುತ್ತಿತ್ತು. ಆಗ ಇವುಗಳಿಂದ ರಕ್ಷಣೆ ಪಡೆಯಲು 'ಕುಂಚಿಗೆ'ಯನ್ನು ಕಟ್ಟುತ್ತಿದ್ದರು. ಕುಂಚಿಗೆ ಕಟ್ಟುತ್ತಿದ್ದರೆಂಬ ಕಾರಣದಿಂದ ಕುಂಚಿ ಕೊರವರಾದರೆಂದು ತಿಳಿದುಬರುತ್ತದೆ.

೨.೩. ಸಮುದಾಯ ಮತ್ತು ಮಹಿಳೆ

ಕುಂಚಿ ಕೊರವರು ಮೂಲತಃ ಅಲೆಮಾರಿ ಬುಡಕಟ್ಟಿನವರಾಗಿದ್ದಾರೆ. ನಗರ ಪಟ್ಟಣಗಳತ್ತ ಅಲೆದಾಡುತ್ತ, ಅಲೆಮಾರಿತನ ತೊರೆದು ಕಾಲಕ್ರಮೇಣವಾಗಿ ಗುಂಪುಗಳನ್ನು ಕಟ್ಟಿಕೊಂಡು ಒಂದೆಡೆ ಸ್ಥಿರವಾಗಿ ನೆಲೆಯೂರಿ ಸಾಮುದಾಯಿಕ ಜೀವನ ಪ್ರಾರಂಭಿಸಿದರು. ಹೊಟ್ಟೆ ಪಾಡಿಗಾಗಿ ವಲಸೆ ಹೋಗಲು ಪ್ರಾರಂಭಿಸಿದರು. ಬದುಕಿನ ಅನಿವಾರ್ಯತೆಗಾಗಿ ಒಂದನ್ನ ತೊರೆದು ಮತ್ತೊಂದನ್ನು ಅಪ್ಪಿಕೊಂಡವರಾಗಿದ್ದಾರೆ. ಮೇಲು ನೋಟಕ್ಕೆ ಇಷ್ಟೊಂದು ಗೊಂದಲಮಯವಾದ ಇವರ ಜೀವನ ಹೇಗೆ ತಾನೆ ನಡೆಯುತ್ತದೆ. ಇನ್ನು ಸಮುದಾಯದ ಮಹಿಳೆಯರ ಪಾಡೇನು ಎಂಬುದೆ ಒಂದು

ಸೋಜಿಗ. ದುಡಿಮೆಯಿಂದ ಸಂಸ್ಕೃತಿ, ಸಂಪ್ರದಾಯ, ಆಚರಣೆವರೆಗೂ ಹೀಗೆ ಮಹಿಳೆಯರು ಹೊಂದಾಣಿಕೆ ಮಾಡಿಕೊಂಡು ಹೊರಟಿದ್ದಾರೆ ಎಂಬುದನ್ನು ತಿಳಿಯುವುದೇ ಒಂದು ವಿಶಿಷ್ಟ ಕಾರ್ಯವಾಗಿದೆ. ಪ್ರಕೃತಿ ಸಹಜವಾಗಿ ಹುಟ್ಟಿ ಅದರೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವಂತದ್ದು ಸಹಜ, ಆದರೆ ಪುರುಷ ನಿರ್ಮಿತ ಸಾಮುದಾಯಿಕ ಚೌಕಟ್ಟಿನೊಳಗೆ ಹೊಂದಾಣಿಕೆ ಕಷ್ಟಸಾಧ್ಯ. ಹೀಗಿರುವಾಗ ಜೀವನವನ್ನು ಒಂದು ಹೋರಾಟ ಎಂದು ತಿಳಿದು ಬಾಳುತ್ತಿರುವ ಈ ಮಹಿಳೆಯ ಶೌರ್ಯ, ಸಾಹಸ ಶ್ಲಾಘನೀಯವೆ ಸರಿ ಎಂದು ಹೇಳಿದರೆ ತಪ್ಪಾಗಲಾರದು.

ಈ ಕುಂಚಿ ಕೊರವ ಸಮುದಾಯವನ್ನು ಗಮನಿಸಿದಾಗ ಇಲ್ಲಿಯೂ ಪಿತೃಸ್ಥಾನಿಯ ಅಧಿಕಾರಗಳೇ ಸೃಷ್ಟಿಗೊಂಡಿವೆ. ಬಹುಶಃ ಇದು ಎಲ್ಲಾ ಸಮುದಾಯಕ್ಕೆ ಅಂಟಿದ ಸಂಗತಿಯಾಗಿದೆ. ಪಿತೃ ಪ್ರಧಾನ ವ್ಯವಸ್ಥೆಯು ಮಹಿಳೆಯರ ಮೇಲೆ ಬೀರಬಹುದಾದಂತಹ ಎಲ್ಲಾ ಪ್ರಭಾವಗಳನ್ನು ಈ ಸಮುದಾಯದ ಮಹಿಳೆಯರ ಮೇಲೂ ಬೀರಿದೆ. ಇಲ್ಲಿ ಮಹಿಳೆಯರು ಎಷ್ಟೇ ದುಡಿದು, ದಣಿದರು ಪುರುಷರ ಕೈಗೊಂಬೆಗಳಾಗಿದ್ದಾರೆ. ಇವರ ಸಂಸ್ಕೃತಿಯನ್ನು ಗಮನಿಸಿದಾಗ ಅಲ್ಲಿ ಮಹಿಳೆ ದ್ವಿತೀಯ ದರ್ಜೆಯ ಪ್ರಜೆಯಾಗಿಯೇ ನಮಗೆ ಗೋಚರಿಸುತ್ತಾಳೆ. ಸಂಪ್ರದಾಯ ಮತ್ತು ಆಚರಣೆಗಳು ಸ್ತ್ರೀ - ಪುರುಷರಿಗೆ ಸಮಾನ ನ್ಯಾಯ ತಂದುಕೊಡುವಲ್ಲಿ ವಿಫಲವಾಗಿವೆ. ಮೇಲು ಮತ್ತು ಅಧೀನ ಎಂಬ ನೆಲೆಯಲ್ಲಿ ಪಾತ್ರಗಳನ್ನು ಸೃಷ್ಟಿಸಿ ಮಹಿಳೆಯರನ್ನು ಅಮೂರ್ತರನ್ನಾಗಿಸಿದ್ದಾರೆ. ಉದ್ಯೋಗದಲ್ಲಿ/ದುಡಿಮೆಯಲ್ಲಿ ಮಹಿಳೆಯರಿಗೆ ಮೇಲ್ ಸ್ಥಾನ ನೀಡಿದರೆ ಯಜಮಾನಿಕ ಅಥವಾ ಮನೆಯ ಒಡೆತನದಲ್ಲಿ ಪುರುಷರಿಗೆ ಮೇಲ್ ಸ್ಥಾನ ಇರುವಂತೆ ರೂಪಿಸಿದ್ದಾರೆ. ಇವೆಲ್ಲವೂ ಪುರುಷ ಪ್ರಧಾನತೆಯ ಕುರುಹುಗಳಾಗಿವೆ. ಮಹಿಳೆಯರಿಗೆ ಶ್ರಮ ನೀಡಿ ಪುರುಷರಿಗೆ ಅಧಿಕಾರದ ಚುಕ್ಕಾಣಿ ಕೊಟ್ಟು ಅದೇ ನಮ್ಮ ಸಂಪ್ರದಾಯ ಎಂದು ಹೇಳುವ ಮಾತು ನಗೆಗೇಡಿನ ಸಂಗತಿ ಎಂದು ಮೇಲ್ ನೋಟಕ್ಕೆಯೇ ಕಂಡುಬರುತ್ತದೆ.

ಜನಾಂಗಿಕವಾಗಿ ಅಲ್ಪಸ್ವಲ್ಪ ನೀಡಲಾಗಿದ್ದ ಸ್ವಾತಂತ್ರ್ಯವನ್ನು ಕೂಡ ಇಂದಿನ ನಾಗರೀಕ ಜೀವನದಲ್ಲಿ ಕಿತ್ತುಕೊಂಡಿದ್ದಾರೆ. ಇಡೀ ಜನಾಂಗದ ರೂಪುರೇಷೆಗಳು ಪುರುಷರಿಂದಲೇ ರೂಪಿತವಾಗಿದ್ದು, ತಮ್ಮ ಅನುಕೂಲಕ್ಕೆ ತಕ್ಕಂತೆ ಬದಲಾಯಿಸುತ್ತಲೇ ಇರುತ್ತಾರೆ. ಆದರೆ ಇಲ್ಲಿ ಒಂದು ವಿಶೇಷವಾದ ಗಮನ ಸೆಳೆಯುವ ಅಂಶವೆಂದರೆ ಮಹಿಳೆಯರಿಗೆ ಅತಿಯಾದ ಪಾತಿವ್ರತ್ಯದ ಕಲ್ಪನೆ ಹೇರಲಾಗಿಲ್ಲ. ಹಾಗೆಂದ ಮಾತ್ರಕ್ಕೆ ಸ್ವೇಚ್ಛಾಚಾರಕ್ಕೂ ಬಿಟ್ಟಿಲ್ಲ. ಮಹಿಳೆಯರಿಗೆ ಮರು ಮದುವೆಗೆ ಅವಕಾಶವಿದೆ. ಜೊತೆಗೆ ಅನೈತಿಕ ವ್ಯವಹಾರಗಳಲ್ಲಿ ಮಹಿಳೆಯರು ತೊಡಗಿದಾಗ್ಯೂ ಅದನ್ನು ನ್ಯಾಯ ನಿರ್ಣಯಗಳಿಂದ ತೀರ್ಮಾನಿಸಿ ಗಂಡನಾದವನ್ನು ಮತ್ತೆ ಸ್ವೀಕರಿಸುವ ಪರಿಪಾಟ ಕಂಡುಬರುತ್ತದೆ. ಈ ಒಂದು ಅಂಶ ಸಂಸ್ಕೃತಿಯ ಹಿರಿಮೆ ಎಂದು ಹೇಳಿದರೆ ತಪ್ಪಾಗಲಾರದು. ಇದರ ಹಿಂದಿರುವ ತಂತ್ರಗಳೇನೆ ಆದರೂ ಇದು ಮೆಚ್ಚಿಕೊಳ್ಳುವಂತಹ ಸಂಗತಿಯಾಗಿದೆ. ತಲೆ ತಲಾಂತರದಿಂದಲೂ ರೂಢಿಯಲ್ಲಿರುವ ಪದ್ಧತಿ

[illegible]

[illegible]

ಇದಾಗಿದೆ. ಎಲ್ಲೋ ಒಂದು ಕಡೆ ಬುಡಕಟ್ಟಿನ ಮಾತೃ ಸ್ಥಾನಿಯತೆಯನ್ನು ಈ ಅಂಶ ನೆನಪಿಗೆ ತರುತ್ತದೆ.

ಇಡೀ ಕುಂಚಿ ಕೊರವ ಸಮುದಾಯದ ಉಳಿವಿಗೆ ಮಹಿಳೆಯರೆ ಕಾರಣರಾಗಿದ್ದು, ಇಂದಿನ ಇವರ ವಾಸ್ತವ ಬದುಕು ಕೇವಲ ದುಡಿಮೆಗೆ ಮೀಸಲಾಗಿದೆ. ಪುರುಷರಿಂದ ಶೋಷಣೆ, ದಬ್ಬಾಳಿಕೆಗಳಿಗೆ ಒಳಗಾಗುತ್ತಿದ್ದರು, ಎಲ್ಲವನ್ನು ಸಹಿಸಿಕೊಂಡು ಬಾಳುತ್ತಿದ್ದಾರೆ. ಅರೆ-ಬರೆ ಹೊಟ್ಟೆ-ಬಟ್ಟೆ, ಕಣ್ಣಿಗೆ ನಿದ್ದೆ ಇಲ್ಲದೆ, ದೇಹದ ಶಕ್ತಿಗಿಂತ ಮಿಗಿಲಾದ ಕೆಲಸ ಮಾಡಿ ಬದುಕಿನ ಜಂಜಾಟದಲ್ಲಿ ಮುಳುಗಿ ಹೋಗಿದ್ದಾರೆ. ಇದರಲ್ಲೇ ದಿನ ಕಳೆವ ಇವರಿಗೆ ತಮ್ಮ ಸ್ಥಾನ-ಮಾನಗಳ ಬಗ್ಗೆ ಯೋಚಿಸುವಷ್ಟು ಜ್ಞಾನವಾಗಲಿ ಅಥವಾ ಸಮಯವಾಗಲಿ ಇವರಿಗೆ ಇಲ್ಲವಾಗಿದೆ. ಕೇವಲ ದುಡಿಯುವ ಯಂತ್ರಗಳಾಗಿ ಮಾತ್ರ ಇಂದು ಮಹಿಳೆಯರು ಕಂಡುಬರುತ್ತಿದ್ದಾರೆ. ಶಿಕ್ಷಣ, ರಾಜಕೀಯ, ಆರೋಗ್ಯ, ಆರ್ಥಿಕ ಸಬಲೀಕರಣ ಎಲ್ಲದರಿಂದಲೂ ಬಹು ದೂರವೇ ಉಳಿದಿದ್ದಾರೆ. ಸಮುದಾಯದ ಪುರುಷರು ಮಹಿಳೆಯರ ಮೇಲೆ ತಮ್ಮ ಪೌರುಷತ್ವ ಎಂದು ಸಾಧಿಸುತ್ತಿರುವ ಅಧಿಕಾರತ್ವವನ್ನು ದುಡಿಮೆಗೂ ಅನ್ವಯಿಸಿಕೊಂಡರೆ ಆ ಮುಗ್ಧ ಮಹಿಳೆಯರ ಮೇಲಿನ ಹೊರೆಯಾದರೂ ತುಸು ಕಡಿಮೆ ಆದೀತು. ಹೊರಗು ಒಳಗೂ ಅವಿರತವಾಗಿ ಈ ಮಹಿಳೆಯರು ಶ್ರಮಿಸುತ್ತಿದ್ದಾರೆ. ಹಾಗೂ ಎಲ್ಲಾ ವರ್ಗಗಳಿಂದಲೂ ತುಳಿತಕ್ಕೊಳಗಾಗಿದ್ದಾಳೆ. ಹೀಗಿರುವಾಗ ಮಹಿಳಾ ಸಬಲೀಕರಣ ಹೇಗೆ ತಾನೆ ಸಾಧ್ಯವಾದೀತು.

ಅಡಿಟಿಪ್ಪಣಿಗಳು

೧. ಮಾಳಿ ಎಚ್.ಬಿ., **ಸಮಾಜಶಾಸ್ತ್ರ**, ಪು.೩೬

೨. ಮುಕ್ತಾ.ವ್ಹಿ.ಉಡುಪಿ, **ಸಮಾಜ ಶಾಸ್ತ್ರದ ಮೂಲತತ್ವಗಳು**, ಪು.೨೯

೩. ಲಕ್ಕಪ್ಪಗೌಡ ಎಚ್.ಜೆ., **ಕರ್ನಾಟಕದ ಬುಡಕಟ್ಟುಗಳು**, ಪು.೨೮೬

೪. ಅದೇ, ಪು.೨೮೭

೫. ಅದೇ, ಪು.೨೮೭

೬. ಬರಗೂರು ರಾಮಚಂದ್ರಪ್ಪ, **ಕೊರವರ ಸಂಸ್ಕೃತಿ**, ಪು.೩೦

೭. ಮಲ್ಲಿಕಾರ್ಜುನ ಬಿ.ಮಾನ್ಪಡೆ, **ಕೊರಮ**, ಪು.೧೨,೧೩

೮. ಅದೇ, ಪು.೨೮೫-೨೮೬

ಅಧ್ಯಾಯ ೩

ಕುಂಚಿ ಕೊರವ ಮಹಿಳೆಯರ ಸಂಪ್ರದಾಯ ಮತ್ತು ಆಚರಣೆಗಳು

೩

ಕುಂಚಿ ಕೊರವ ಮಹಿಳೆಯರ ಸಂಪ್ರದಾಯ ಮತ್ತು ಆಚರಣೆಗಳು

ಜನ ಜೀವನದಲ್ಲಿ ಸಂಪ್ರದಾಯಗಳ ಪಾತ್ರ ಪ್ರಮುಖವಾದುದು. ಇವು ಜನರ ಬದುಕಿನೊಂದಿಗೆ ಅವಿಭಾಜ್ಯ ಸಂಬಂಧವನ್ನು ಸ್ಥಾಪಿಸಿಕೊಂಡಿರುತ್ತವೆ. ಮನುಷ್ಯರ ಮಾತು, ವ್ಯಕ್ತಿತ್ವ ಸಂಪ್ರದಾಯಗಳಲ್ಲಿ ರೂಪುಗೊಂಡಿರುತ್ತವೆ. ಹಾಗೂ ಅಗೋಚರವಾದ ದೈವಶಕ್ತಿಗಳ ಪ್ರೀತ್ಯಾರ್ಥವಾಗಿ ಮನುಷ್ಯ ನಡೆಸುವ ಮತಾಚಾರಗಳು ಮತ್ತು ಕರ್ಮವಿಧಿಗಳನ್ನು ಆಚರಣೆಗಳೆಂದು ಕರೆಯಲಾಗುತ್ತದೆ. ಪರಂಪರಾಗತವಾಗಿ ಬಂದಿರುವ ಆಚರಣೆಗಳ ಹಿನ್ನೆಲೆಗೆ ಬಲವಾದ ನಂಬಿಕೆಗಳು ಇರುತ್ತವೆ. ಆಚರಣೆಗಳು ಧಾರ್ಮಿಕ ವಲಯದಲ್ಲಿರುವುದೇ ಹೆಚ್ಚು. ಈ ಬಗೆಯ ಆಚರಣೆಗಳನ್ನು ಮಾಡುವುದರಿಂದ ದೈವ ಸಂಪ್ರೀತಗೊಂಡು ಇಷ್ಟಾರ್ಥವನ್ನು ನೆರವೇರಿಸುತ್ತದೆ ಎಂದು ನಂಬಲಾಗಿದೆ. ಎಲ್ಲ ಮಾತುಗಳೂ ನಂಬಿಕೆಗಳನ್ನು, ಆಚರಣೆಗಳನ್ನು ಒಳಗೊಂಡಿರುತ್ತವೆ.

ಈ ಹಿನ್ನೆಲೆಯಲ್ಲಿ ಕುಂಚಿ ಕೊರವರ ಸಂಪ್ರದಾಯಗಳು ಮತ್ತು ಆಚರಣೆಗಳು ಮಹಿಳೆಯರಿಗೆ ಯಾವ ಮಾರ್ಗದರ್ಶನ ನೀಡಿವೆ, ಅವು ಉಪಯುಕ್ತತೆ ಹೊಂದಿವೆಯೇ ಎಂದು ಅರಿಯಬೇಕು. ಸಂಪ್ರದಾಯಗಳೇ ಆಚರಣೆಗಳಾಗಿ ಜನರ ನಡಾವಳಿಗಳಲ್ಲಿ ವ್ಯಕ್ತವಾಗುತ್ತವೆ. ಆಚರಣೆಗಳಲ್ಲಿ ವೈಯಕ್ತಿಕ ಮತ್ತು ಸಾಮೂಹಿಕ ಎಂದು ಎರಡು ಭಾಗ ಮಾಡಬಹುದು. ವೈಯಕ್ತಿಕ ಆಚರಣೆಗಳನ್ನು ತನ್ನ ಹೊಲ, ಮನೆ, ಮಾಟ-ಮಂತ್ರ, ಧಾರ್ಮಿಕ ಆಚರಣೆಗಳಾದ ದೇವತೆಗಳಿಗೆ ಹರಕೆ ಕಟ್ಟುವುದು, ಬಲಿ ನೀಡುವುದು ನೈವೇದ್ಯ ಇತ್ಯಾದಿ ಕ್ರಿಯೆಗಳಿಗೆ ಸೀಮಿತವಾಗಿರಿಸಿದರೆ, ಇನ್ನು ಜನನ-ಶಿಕ್ಷಣ, ಮದುವೆ, ಮರಣ, ಜಗಳಗಳು (ಪಂಚಾಯತಿ ವ್ಯಾಪ್ತಿಗೆ) ಹೀಗೆ ಬಾಳಿನ ಮುಂತಾದ ಮುಖ್ಯಘಟ್ಟಗಳು ಸಾಮೂಹಿಕ ಆಚರಣೆಯ ವ್ಯಾಪ್ತಿಗೆ ಬರುತ್ತವೆ.

ಬೇರೆ ಎಲ್ಲಾ ಸಮುದಾಯಗಳಂತೆ ಇಲ್ಲಿಯೂ ವೈಯಕ್ತಿಕ ಆಚರಣೆಗಳು ಕಂಡುಬರುತ್ತವೆ. ಆದರೆ ಇವುಗಳಲ್ಲಿ ಸ್ವಲ್ಪ ವ್ಯತ್ಯಾಸವಿದ್ದು, ಜನಾಂಗೀಕವಾಗಿ ಗುರುತಿಸಿಕೊಳ್ಳುತ್ತಾರೆ. ಹೊಲ, ಮನೆ ಖರೀದಿಸುವುದು, ಅವುಗಳ ಪೂಜಾ ಕಾರ್ಯ ಸೇರಿದಂತೆ ಸ್ತ್ರೀ-ಪುರುಷರಿಬ್ಬರೂ ಭಾಗಿಗಳಾಗಿರುತ್ತಾರೆ. ಆದರೆ ಇವುಗಳ ಯಜಮಾನಿಕೆ ಗಂಡನ ಹೆಸರಿನಲ್ಲಿ ಅಥವಾ ಅಧೀನದಲ್ಲಿ ಇರುತ್ತವೆ. ಕಾರಣ

[illegible]

[illegible]

[illegible]

[illegible]

ಆಸ್ತಿಯ ಆಳ್ವಿಕೆ ಗಂಡು ಸಂತಾನಕ್ಕೆ ಸೇರಿದ್ದು ಎಂಬ ಧೋರಣೆ ಪುರುಷ ಪ್ರಧಾನತೆಯ ಹಿಡಿತದಲ್ಲಿ ಆರ್ಥಿಕತೆ ಸಿಲುಕಿರುವುದು ಸಹಜವೆನಿಸಿದರೂ ದುಡಿಯುವ ಅಥವಾ ಆ ಸಂಪತ್ತನ್ನು ಗಳಿಸುವ ಹೊಣೆ ಮಹಿಳೆಯರದ್ದಾಗಿರುತ್ತದೆ ಎಂಬುದೇ ಸೋಜಿಗದ ಸಂಗತಿ.

ಸ್ತ್ರೀ ಸಂಕುಲ ಹಿಂದಿನಿಂದ ಇಂದಿನವರೆಗೂ ಕೇವಲ ಪುರುಷನ ಆಸ್ತಿ ಭಾಗವಾಗಿ ರೂಪಿತಗೊಂಡಿದ್ದಾಳೆಯೇ. ಹೊರತು ಆಕೆಗೆ ಆಸ್ತಿ ಹೊಂದುವ ಹಕ್ಕು ಇಲ್ಲವೇ ಇಲ್ಲ. ಕುಂಚಿ ಕೊರವರ ಕೆಲವರು ವ್ಯಕ್ತಿ ಒಳಿತಿಗೆ, ಕೆಡುಕಿಗೆ ಮಾಟವನ್ನು ಮಾಡುತ್ತಿದ್ದುದು ತಿಳಿದುಬರುತ್ತದೆ. ಒಂದು ಕಾಲಕ್ಕೆ **ಹೊಲೆಮಣಸೆ** ಎಂಬ ಉಗ್ರ ದೇವತೆಯನ್ನು ಮಣ್ಣಿನಲ್ಲಿ ಮಾಡಿ ಪೂಜಿಸಿ ಬಲಿ ಕೊಟ್ಟ ಉದ್ದೇಶಿತ ವ್ಯಕ್ತಿಗೆ ತೊಂದರೆ ಕೊಡುತ್ತಿದ್ದಾನೆಂದು ತಿಳಿದುಬರುತ್ತದೆ. ಇಲ್ಲಿ ಹೆಣ್ಣನ್ನೇ ಸಂಹಾರಕಳಾಗಿ(ಹೊಲೆ ಮಣಸೆ) ಚಿತ್ರಿಸಿರುವುದು ಕಂಡುಬರುತ್ತದೆ. ಜನನಿಯಾದ ಹೆಣ್ಣನ್ನು ಸಂಹಾರಕಳಾಗಿಯೂ ಕಾಣುತ್ತಾರೆ. ಹೆಣ್ಣನ್ನು ಒಂದೆಡೆ ಶಾಂತಿ ಸ್ವರೂಪಳಾಗಿ, ಮತ್ತೊಂದೆಡೆ ಉಗ್ರ ರೂಪಿಯಾಗಿ ಕಾಣಲಾಗುತ್ತಿದೆ. ಹೇಗೆ ಬೇಕೋ ಹಾಗೆ ಹೆಣ್ಣನ್ನು ಬಿಂಬಿಸಿ ಕೆಡುಕಿನಿಂದ ಮುಕ್ತಿ ಹೊಂದುವ ಸಲುವಾಗಿ ಪುರುಷರು ರೂಪಿಸಿರುವ ಪುರುಷ ಪ್ರಾಧಾನ್ಯತೆಯ ವ್ಯವಸ್ಥಿತ ತಂತ್ರ ಎಂದು ಹೇಳಬಹುದು.

ಕುಂಚಿ ಕೊರವರು ತಮ್ಮ ಕುಲದೇವತೆಯಾದ ಕೊರಮ ದೇವಿಗೆ ಹರಕೆ ಕಟ್ಟಿ ಅದು ಈಡೇರಿದಾಗ ಪ್ರಾಣಿಗಳನ್ನು (ಹಂದಿ, ಕುರಿ, ಕೋಳಿ) ಬಲಿ ನೀಡಿ ಹರಕೆ ತೀರಿಸುತ್ತಾರೆ. ಆಕೆ ರಕ್ತಾರ್ಷಿಯಾರ್ಯಳೆಂದು ರಕ್ತದಿಂದ ಕೂಡಿದ ಮಾಂಸವನ್ನು ನೈವೇದ್ಯಕ್ಕೆ ಅರ್ಪಿಸುತ್ತಾರೆ. ಇಂತಹ ಬಲಿ ನೀಡುವ ಆಚರಣೆಯನ್ನು ಮುಖ್ಯ ಭಾಗವಾಗಿಸಿಕೊಂಡಿದ್ದಾರೆ. ಆಚರಣೆ ಮತ್ತು ಸಂಪ್ರದಾಯಗಳು ಎಷ್ಟೇ ಆಳವಾಗಿ ಬೇರೂರಿದೆ ಎಂದರೆ ಕಾನೂನು ಉಲ್ಲಂಘನೆಯಿಂದ ಶಿಕ್ಷೆಗೆ ಒಳಪಡಬೇಕಾಗುತ್ತದೆ ಎಂದು ತಿಳಿದಾಗ್ಯೂ ಬಲಿ ಕೊಡುವ ಆಚರಣೆಗಳು ಘನಘೋಷಿತವಾಗಿ ಜಾರಿಯಲ್ಲಿದೆ.

ಸಾಮೂಹಿಕ ಆಚರಣೆಗಳಾದ ಜನನ, ಮರಣ, ಶಿಕ್ಷಣ ಹೀಗೆ ಹುಟ್ಟಿನಿಂದ ಸಾಯುವತನಕ ಬದುಕಿನ ಪ್ರತಿ ಹಂತದಲ್ಲೂ ಇವುಗಳಿಗೆ ಬೆಲೆ ನೀಡುತ್ತಲೇ ಬಂದಿದ್ದಾರೆ. ಸಮುದಾಯದಲ್ಲಿ ಯಾರ ಮನೆಯಲ್ಲಿಯೇ ಮದುವೆ ನಡೆಯಲಿ ಎಲ್ಲರೂ ನಿಂತು ಒಟ್ಟಾಗಿ ಆ ಕಾರ್ಯ ಯಶಸ್ವಿಗೊಳಿಸುತ್ತಾರೆ. ಸತ್ತಾಗಲು ಅಷ್ಟೇ ಇಡೀ ಸಮುದಾಯವೇ ದುಃಖದ ಮಡುವಿನಲ್ಲಿ ತೇಲುತ್ತದೆ. ಮುಂದೆ ನಿಂತು ಎಲ್ಲರೂ ಇಂತಹ ಕಾರ್ಯಗಳಲ್ಲಿ ಭಾಗಿಗಳಾಗುತ್ತಾರೆ. ಸಾಮೂಹಿಕ ಆಚರಣೆಯಲ್ಲಿ ಕಂಡುಬರುವ ಮತ್ತೊಂದು ಮುಖ್ಯ ಅಂಶವೆಂದರೆ ಶಿಕ್ಷಣ. ಸಮುದಾಯದಲ್ಲಿ ಇತ್ತೀಚೆಗೆ ಎಲ್ಲಾ ಹುಡುಗರಿಗೆ ಮತ್ತು ಹುಡುಗಿಯರಿಗೆ ಶಿಕ್ಷಣ ನೀಡುವಲ್ಲಿ ಮುಂದಾಗಿದ್ದಾರೆ. ಆದರೆ ಯಾರೂ ಹೆಣ್ಣು ಮಕ್ಕಳಿಗೆ ಹೆಚ್ಚಿನ ಶಿಕ್ಷಣವನ್ನು ಕೊಡಿಸುವುದಿಲ್ಲ. ಕಾರಣ ಅವರು ಗಂಡನ ಮನೆಗೆ ಹೋಗುವವರು, ಕುಟುಂಬದ

[illegible]

ಜವಾಬ್ದಾರಿ ಹೊರುವವರು ಅವರಿಗ್ಯಾಕೆ ಶಿಕ್ಷಣ? ದುಡಿಮೆ ತಾನೆ ಬದುಕು ನಡೆಸುವುದು! ಶಿಕ್ಷಣವೇನಲ್ಲವಲ್ಲ ಎಂದು ಪಕ್ಷಪಾತ ಮನೋಭಾವನೆಯಿಂದ ನುಡಿಯುತ್ತಾರೆ.

೩.೦. ಸಂಸ್ಕೃತಿಯ ಭಾಗವಾಗಿ ಕುಂಚಿ ಕೊರವ ಮಹಿಳೆ

ಸಂಸ್ಕೃತಿ ಎಂಬುದು ಯಾವುದೇ ಒಂದು ದೇಶ, ಮೇಲ್ವರ್ಗ, ಉನ್ನತ ಜಾತಿಗಳೆಂದು ಕರೆಯಿಸಿಕೊಳ್ಳುವವರಿಗೆ ಅಥವಾ ಯಾವುದೇ ಸಮುದಾಯ ಅಥವಾ ಲಿಂಗಕ್ಕೆ ಸೀಮಿತವಾಗಿಲ್ಲ. ಅದು ಪ್ರತಿಯೊಬ್ಬ ಮಾನವ ಜೀವಿ ತಾನು ನೆಲೆಸಿ ಪಡೆದುಕೊಂಡಿರುವ ಆಚಾರ, ವಿಚಾರಗಳಲ್ಲಿ ಹಾಸುಹೊಕ್ಕಾಗಿರುತ್ತದೆ. ವಿಭಿನ್ನ ನೆಲೆಯಲ್ಲಿ ಸಂಸ್ಕೃತಿ ಗೋಚರವಾಗುತ್ತದೆ. ನಗರವಾಸಿಗಳ ಸಂಸ್ಕೃತಿ ಒಂದಾದರೆ, ಗ್ರಾಮೀಣ ವಾಸಿಗಳದ್ದೆ ಮತ್ತೊಂದು, ಬುಡಕಟ್ಟು ಜನಾಂಗದವರದ್ದು ಇನ್ನೊಂದು ಬಗೆಯಲ್ಲಿ ಗೋಚರಿಸುತ್ತದೆ.

ಸಂಸ್ಕೃತಿ ಎಂಬುದು ಮನುಷ್ಯರು ತಮ್ಮ ಬದುಕಿಗಾಗಿ ಏನೆಲ್ಲವನ್ನು ಸೃಷ್ಟಿಸಿಕೊಂಡಿದ್ದಾರೆಯೋ ಅದೆಲ್ಲವೂ ಒಳಗೊಳ್ಳುತ್ತದೆ. ಮಾನವನ ಭಾಷೆ, ಉಡುಪು, ಮನೆ, ಉಪಕರಣ, ಮತ, ನಂಬಿಕೆ, ಬಳಸುವ ಸಾಮಾಗ್ರಿಗಳು, ಸಾಮಾಜಿಕ ಸಂಬಂಧಗಳು, ಆಡಳಿತದ ಆರ್ಥಿಕ ವಿಧಾನಗಳು ಒಟ್ಟಿನಲ್ಲಿ ಜೀವನ, ಕುಟುಂಬ ಎಲ್ಲವನ್ನು ಸಂಸ್ಕೃತಿ ಪದ ಒಳಗೊಳ್ಳುತ್ತದೆ. ಜನರ ಜೀವನ ವಿಧಾನದ ಉತ್ತಮಾಂಶಗಳನ್ನು ಮಾತ್ರ ಸಂಸ್ಕೃತಿ ಹೇಳುವುದಿಲ್ಲ. ಒಟ್ಟು ಜನರ ಜೀವನ ವಿಧಾನವನ್ನು ಅದು ಹೇಳುತ್ತದೆ. ನಾಗರೀಕರು, ವಿದ್ಯಾವಂತರು ಮಾತ್ರ ಸುಸಂಸ್ಕೃತರೆಂದು ಹೇಳುವ ಮಾತು ಸರಿಯಲ್ಲ. ನಾಗರಿಕರಾಗಲು ಹಳ್ಳಿಯವರೇ ಆಗಿರಲಿ, ವಿದ್ಯಾವಂತರಿರಲಿ, ಅಶಿಕ್ಷಿತರೇ ಇರಲಿ ಸಂಸ್ಕೃತಿ ಎಂಬುದು ಅವರವರ ಜೀವನ ನಡವಳಿಕೆಯ ಮೇಲೆ ಅವಲಂಬಿಸಿರುತ್ತದೆ.

ಸಂಸ್ಕೃತಿಯು ಎಲ್ಲರಿಂದ ಎಲ್ಲರಿಗೆ ದೊರೆತ ಕೊಡುಗೆ. ಸಂಯುಕ್ತವಾದದ್ದು. ಆದರೆ ಒಂದೊಂದು ಘಟಕವೂ ನೀರಿನ ಕಣಗಳಂತೆ ಒಂದಕ್ಕೊಂದು ಅಂಟಿಕೊಂಡು ದ್ರಾವಕ ರೂಪ ತಳೆದಿರುತ್ತದೆ. ಆವರೆಗೆ ಪರಕೀಯವೆಂದೂ ಪರಿಗಣಿತವಾಗಿದ್ದ ಪ್ರವಾಹಗಳು ಅದರೊಳಕ್ಕೆ ಹರಿದು ಗುರುತು ಸಿಗದಂತೆ ಮರೆಯಾಗುತ್ತವೆ, ಹಾಗೆಯೇ ಸಂಸ್ಕೃತಿಯೂ ಸಹ. ಸ್ಥಳೀಯ ಸಂಸ್ಕೃತಿಗೆ ತನ್ನದೇ ಆದ ವೈಶಿಷ್ಟ್ಯಗಳಿರುತ್ತವೆ. ಆಕ್ರಮಣಕಾರೀ ಪರಕೀಯ ಸಂಸ್ಕೃತಿಗೆ ಚುರುಕಿನಿಂದ ಸ್ಪಂದಿಸಿ ಅದು ಬಹಳ ಬೇಗ ಕರಗುವ ಸ್ಥಿತಿ ತಲುಪಿ, ತನ್ನ ಸ್ವಂತ ಸೇರ್ಪಡೆಯಾದ ಸಾಂಧಿಕೃತ ಘಟಕದ ಗುಣಗಳನ್ನೊಳಗೊಂಡ ಸಂಯುಕ್ತ ಆಕಾರ ಪಡೆಯುತ್ತದೆ. ಹಂತದಿಂದ ಹಂತಕ್ಕೆ ಮುಂದುವರೆದ ಈ ಪ್ರಕ್ರಿಯೆಯು ತನ್ನ ಹಿಂದಿನ ಹಂತಕ್ಕಿಂತ ಶ್ರೀಮಂತವಾಗುತ್ತದೆ. ಹೀಗೆ ಪ್ರತಿಯೊಂದು ಸಮುದಾಯವು ತನ್ನದೇ ಆದ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಕ್ರಿಯೆಯಲ್ಲಿ ನಿರತವಾಗಿರುತ್ತವೆ. ಇಂತಹ ಅನೇಕ ಸಾಂಸ್ಕೃತಿಕ ಅಧ್ಯಯನಗಳು

[illegible]

ಈಗಾಗಲೇ ಬಹಳಷ್ಟು ಜರುಗಿವೆ. ಅದೇ ರೀತಿಯಾಗಿ, ಕುಂಚಿ ಕೊರವ ಸಮುದಾಯದ ಸಂಸ್ಕೃತಿಯ ಬಗ್ಗೆಯೂ ಹಲವಾರು ಅಧ್ಯಯನಗಳು ನಡಿದಿದ್ದು, ಅವು ಹೇಗೆ ಮಹಿಳೆಯರನ್ನು ಒಳಗೂಡಿಸಿಕೊಂಡಿವೆ, ಯಾವ ಪ್ರಭಾವವನ್ನು ತನ್ನ ಸಮುದಾಯದ ಮಹಿಳೆಯರ ಮೇಲೆ ಬೀರಿವೆ ಎಂದು ಅಧ್ಯಯನ ಮಾಡಿ ವಿಶ್ಲೇಷಿಸುವ ಕಾರ್ಯ ಮಾಡಿಲ್ಲ. ಆದ್ದರಿಂದ ಸಂಸ್ಕೃತಿಯ ಬಗ್ಗೆಯೂ ಹಲವಾರು ಅಧ್ಯಯನಗಳು ನಡೆದಿದ್ದು, ಇಂತಹ ತಳ ಸಮುದಾಯ ಎಂದು ಗುರುತಿಸಿಕೊಳ್ಳುವ ಇವರಲ್ಲಿ ಸಂಸ್ಕೃತಿ ಹೇಗೆ ಮಹಿಳೆಯರನ್ನು ತನ್ನೊಳಗೆ ಅಂತರ್ಗತಗೊಳಿಸಿ ಕೊಂಡಿದೆ ಎಂದು ಲಿಂಗ ಸಂಬಂಧಿ ನೆಲೆಯಲ್ಲಿ ನಮ್ಮ ಅಧ್ಯಯನ ಸಾಗುತ್ತದೆ.

ಕುಂಚಿ ಕೊರವ ಸಮುದಾಯಕ್ಕೆ ಬಂದಾಗ ಅಲ್ಲಿಯೂ ಕೂಡ ಸಂಸ್ಕೃತಿ ಭಿನ್ನ ನೆಲೆಯಲ್ಲಿ ರೂಪಿತಗೊಂಡಿರುವುದನ್ನು ಕಾಣಬಹುದಾಗಿದೆ. ಸಂಸ್ಕೃತಿ ಸಮುದಾಯದ ಮಹಿಳೆಯರಿಗೆ ಯಾವ ಸ್ಥಾನಮಾನಗಳನ್ನು ಕಲ್ಪಿಸಿಕೊಟ್ಟಿದೆ, ಹೇಗೆ ಪ್ರಭಾವ ಬೀರಿದೆ ಎಂಬುದನ್ನು ಮನಗಾಣಬೇಕಿದೆ. ಮೂಲತಃ ಅಲೆಮಾರಿಗಳಾಗಿದ್ದ ಇವರು ಅಂತಹ ಸಂಸ್ಕೃತಿಯನ್ನೇ ಸಮುದಾಯ ಜೀವಿಯಾದ ಮೇಲು ಉಳಿಸಿಕೊಂಡಿದ್ದಾರೆಯೇ ಎಂದು ಅರಿಯಬೇಕಾಗಿದೆ. ಸಂಸ್ಕೃತಿಯೂ ಬದಲಾಗಿದೆಯೇ, ಬದಲಾಗುತ್ತಿದೆಯೇ ಅಥವಾ ಆಳವಾಗಿ ಬೇರುರಿದೆಯೇ ಇದು ಎಷ್ಟು ಮಹಿಳೆಯರ ಪರ ಹಾಗೂ ವಿರುದ್ಧವಾಗಿ ಕಾರ್ಯನಿರ್ವಹಿಸಿಕೊಂಡು ಹೊರಟಿದೆ ಎಂಬುದನ್ನು ತಿಳಿಯುವುದು ಅತ್ಯಾವಶ್ಯಕವಾಗಿದೆ.

೩.೦.೦. ಸಾಮಾಜಿಕ ಸಂಘಟನೆ

೧. ವಿವಾಹ ಪದ್ಧತಿ

ವಿವಾಹ ಎಂಬುದು ಮಾನವನ ಜೀವನದಲ್ಲಿ ಅತ್ಯಂತ ಪ್ರಾಮುಖ್ಯತೆ ಪಡೆದುಕೊಂಡಂತಹ ಒಂದು ಸಂಸ್ಥೆಯಾಗಿದೆ. ಗಂಡು ಹೆಣ್ಣಿನ ನಡುವಿನ ಲೈಂಗಿಕ ಬಯಕೆ ಹಾಗೂ ಸಂತಾನೋತ್ಪತ್ತಿಯ ಕಾರ್ಯಕ್ಕಾಗಿ ಕಟ್ಟಿಕೊಂಡ ಒಂದು ಸಮಾಜ ಒಪ್ಪಿತ ಸಂಸ್ಥೆಯಾಗಿದೆ. ಇದರ ಆಚರಣೆಗಳು ವಿವಿಧ ಸಮುದಾಯಗಳಲ್ಲಿ ಬೇರೆ ಬೇರೆಯಾಗಿಯೇ ಗೋಚರಿಸುತ್ತವೆ. ವಿವಾಹ ವ್ಯವಸ್ಥೆಯಲ್ಲಿ ಅನೇಕ ಬಗೆಗಳು, ವಿಧಗಳು, ಪ್ರಕಾರಗಳು ಅಥವಾ ಪದ್ಧತಿಗಳಿವೆ. ಅನೇಕ ಸಮಾಜ ಶಾಸ್ತ್ರಜ್ಞರು ದಾಖಲಿಸಿದ ಪ್ರಕಾರ ಎಂಟು ಬಗೆಯ ವಿವಾಹದ ಪ್ರಕಾರಗಳು ಕಂಡುಬರುತ್ತವೆ. ಹಾಗೂ ಮನುಸ್ಮೃತಿಯಲ್ಲೂ ಕೂಡಾ ಇವೆ ವಿವಾಹದ ಬಗೆಗಳು ಗೋಚರಿಸುತ್ತವೆ. ಅವು - ೧. ಬ್ರಾಹ್ಮ ವಿವಾಹ, ೨. ದೈವ ವಿವಾಹ ೩. ಆರ್ಷ ವಿವಾಹ ೪. ಪ್ರಜಾಪತ್ಯ ವಿವಾಹ ೫. ಅಸುರ ವಿವಾಹ ೬. ಗಂಧರ್ವ ವಿವಾಹ, ೭. ರಾಕ್ಷಸ ವಿವಾಹ, ೮. ಪೈಶಾಚ ವಿವಾಹಗಳೆಂದು ಕಂಡುಬರುತ್ತದೆ.[೧] ಆದರೆ ಇಂದಿನ ಸಮಾಜದಲ್ಲಿ ಪ್ರಚಲಿತದಲ್ಲಿರುವ ವಿವಾಹ ಪದ್ಧತಿಗಳೆಂದರೆ ಏಕಪತ್ನಿತ್ವ ಮತ್ತು ಏಕ ಪತಿತ್ವ.

[illegible]

ಈ ಕುಂಚಿಕೊರವ ಸಮುದಾಯವೂ ಇವುಗಳನ್ನೇ ಆಚರಣೆಯ ಮುಖ್ಯಭಾಗವಾಗಿಸಿ ಕೊಂಡಿದ್ದಾರೆ. ಜೊತೆಗೆ ಮಹಿಳೆಯರ ಪರವಾಗಿ ನಿಲ್ಲುವಂತಹ ವಿಧವಾ ವಿವಾಹ, ಬಹುಪತಿತ್ವ ವಿವಾಹಗಳು ಕೂಡ ಇವರ ಸಮುದಾಯದಲ್ಲಿ ಜರುಗುತ್ತವೆ. ಬುಡಕಟ್ಟಿನ ವಿವಾಹದ ಪದ್ಧತಿಗಳು ಇಂದಿಗೂ ಆಚರಣೆಯಲ್ಲಿರುವುದು ಅವರ ಸಮುದಾಯದ ಮೂಲತೆಯನ್ನು ಗುರುತಿಸುವಂತದ್ದಾಗಿದೆ.

ಕುಂಚಿ ಕೊರವ ಸಮುದಾಯದಲ್ಲಿ ವಿವಾಹಗಳು ಸಾಮಾನ್ಯವಾಗಿ ಹೆಣ್ಣಿನ ಮನೆಯಲ್ಲೇ ಜರುಗುತ್ತವೆ. ಅವರದೇ ಆದ ಸಾತಪಡಿ ಮಾನಪಾಡಿ ಎಂಬ ಎರಡು ಮುಖ್ಯ ಬೆಡಗುಗಳಲ್ಲಿ ವೈವಾಹಿಕ ಸಂಬಂಧಗಳು ಏರ್ಪಡುತ್ತಿದ್ದು ವಧು ಮತ್ತು ವರರ ಮನೆಯವರ ಖರ್ಚಿನಲ್ಲಿಯೇ ವಿವಾಹಗಳು ಜರುಗುತ್ತವೆ. ಒಂದು ವೇಳೆ ಆರ್ಥಿಕವಾಗಿ ಸ್ವಲ್ಪ ಕೆಳಮಟ್ಟದಲ್ಲಿ ಯಾರಾದರೂ ಇದ್ದರೆ ಆರ್ಥಿಕವಾಗಿ ಸಬಲರಿರುವವರು ಮದುವೆಯ ಎಲ್ಲಾ ಖರ್ಚನ್ನು ಬರಿಸುತ್ತಾರೆ. ವರದಕ್ಷಿಣೆ ಅಥವಾ ವಧುದಕ್ಷಿಣೆಯ ಪದ್ಧತಿ ಇವರಲ್ಲಿಲ್ಲ. ಇಲ್ಲಿ ಮಹಿಳೆಯರನ್ನು ವಸ್ತು ಮೂಲವಾಗಿ ಗುರುತಿಸುವ ಜೊತೆಗೆ ಆದಾಯ ತರುವ ಮೂಲವಾಗಿ ಗುರುತಿಸುತ್ತಾರೆ. ಸಾಮಾನ್ಯವಾಗಿ ಇವರಲ್ಲಿ ದುಡಿಯುವವರು ಮಹಿಳೆಯರೇ ಆಗಿರುವುದರಿಂದ ವರದಕ್ಷಿಣೆ ಕೇಳುವುದಿಲ್ಲ. ವಿವಾಹದ ನಂತರ ಹೆಣ್ಣಿನ ವಾಸಸ್ಥಳ ಗಂಡನ ಮನೆ ಹಾಗೇ ಆಕೆಯ ದುಡಿಮೆಯೂ ಅವರಿಗೆ ಸೇರಿದ್ದಾಗಿರುತ್ತದೆ. ಬಹು ದೊಡ್ಡ ಆದಾಯದ ಮೂಲವನ್ನು ವರದಕ್ಷಿಣೆ ನಿರಾಕರಣೆಯ ದೊಡ್ಡಸ್ಥಿಕೆಯಿಂದ ತಮ್ಮದಾಗಿಸಿಕೊಳ್ಳುತ್ತಾರೆ. ಇದು ಪುರುಷ ಪ್ರಧಾನ ವ್ಯವಸ್ಥೆಯ ಅಂಶವಾಗಿ ಗೋಚರಿಸುತ್ತದೆ. ಜೊತೆಗೆ ವಧುವಿನ ಮನೆಯವರಿಗೆ ಚಿಕ್ಕ ಗಂಡುಮಕ್ಕಳಿದ್ದರೆ (ವಧುವಿನ ಸಹೋದರರು ಅಥವಾ ಅಣ್ಣನ ಮಕ್ಕಳು) ವಿವಾಹದ ಸಂದರ್ಭದಲ್ಲಿ ಆಕೆಯ ಸೆರಗಿಗೆ ಚಿಲ್ಲರೇ (ಸಮುದಾಯ ನಿಗಧಿಪಡಿಸಿದ ಕಾಸು) ಕಾಸು ಕಟ್ಟಿ ನಿಮಗೆ ಹೆಣ್ಣು ಮಕ್ಕಳಾದರೆ ಮೊದಲೆರಡು ಹೆಣ್ಣು ಮಕ್ಕಳನ್ನು ನಮಗೆ ಕೊಡಬೇಕೆಂದು ನಿರ್ಧರಿಸುತ್ತಾರೆ. ಈ ಮೂಲಕ ಹುಟ್ಟುವ ಮೊದಲೇ ಹೆಣ್ಣು ಮಕ್ಕಳ ವಿವಾಹದ ಆಯ್ಕೆ ಸ್ವಾತಂತ್ರ್ಯ ಕಿತ್ತುಕೊಳ್ಳುವ ಜೊತೆಗೆ ಆಕೆಯನ್ನು ಕೊಂಡುಕೊಳ್ಳುವಿಕೆಯ ವಸ್ತುವಾಗಿ ಗುರುತಿಸುತ್ತಾರೆ. ಈ ಒಂದು ಮೂಲವೂ ಕೂಡ ವರದಕ್ಷಿಣೆ ತೆಗೆದುಕೊಳ್ಳದೆ ಇರಲು ಕಾರಣ ಎಂದು ಹೇಳಬಹುದು.

ವಿಧವಾ ವಿವಾಹ

ಹೆಣ್ಣು ಮಕ್ಕಳು ವಿಧವೆಯರಾದಾಗ, ಗಂಡ ತ್ಯಜಿಸಿದ ಸಂದರ್ಭದಲ್ಲಿ ಮರು ಮದುವೆಗೆ ಅವಕಾಶವಿದೆ. ಇದು ಇವರ ಸಂಸ್ಕೃತಿಯ ಹಿರಿಮೆ ಎಂದು ಹೇಳಿದರೆ ಬಹುಶಃ ತಪ್ಪಾಗಲಾರದು. ಬಹುವಾಗಿ ಕಾಡುವ ಪಾತಿವ್ರತ್ಯದ ಕಲ್ಪನೆ ಇವರಲ್ಲಿ ಕಂಡುಬರುವುದಿಲ್ಲ ಹಾಗೆಂದ ಮಾತ್ರದಲ್ಲಿ ಹೆಣ್ಣು ಮಕ್ಕಳು ಬೇರೆಯವರೊಂದಿಗೆ ಅನೈತಿಕ ಸಂಬಂಧಗಳನ್ನು ಇರಿಸಿಕೊಳ್ಳುವಂತಿಲ್ಲ. ಒಂದು

ವೇಳೆ ಗಂಡೆ ಆಗಲಿ ಅನೈತಿಕ ಸಂಬಂಧಗಳನ್ನು ಇರಿಸಿಕೊಂಡಿದ್ದೇ ಆದರೆ ಪಂಚಾಯತಿ ಸೇರಿಸಿ ನ್ಯಾಯ ತೀರ್ಮಾನಗಳನ್ನು ಮಾಡುತ್ತಾರೆ.

ವಿವಾಹ ಬಾಹಿರ ಸಂಬಂಧಗಳಲ್ಲಿನ ನ್ಯಾಯ ತೀರ್ಮಾನಗಳು

ವಿಶೇಷವಾಗಿ ಈ ಸಮುದಾಯದಲ್ಲಿ ಗಮನಿಸಿರುವ ಅಂಶ ಎಂದರೆ ಅನೈತಿಕ ಸಂಬಂಧಗಳು ಅವರ ಜಾತಿಯ ಹೆಂಗಸು-ಗಂಡಸರ ಮಧ್ಯೆಯೇ ನಡೆಯುತ್ತವೆ. ಅನೈತಿಕ ಸಂಬಂಧಗಳ ಬಗ್ಗೆ ನ್ಯಾಯ ನಿರ್ಣಯವನ್ನು ಸಮುದಾಯದ ಪಂಚಾಯತಿ ಮಾಡುತ್ತದೆ. ಅನೈತಿಕ ಸಂಬಂಧಗಳ ವಿಚಾರಣಾ ಸಂದರ್ಭದಲ್ಲಿ ಗಂಡು ಹೆಣ್ಣಿಬ್ಬರು ಅಂತಹ ಕಾರ್ಯದಲ್ಲಿ ತೊಡಗಿರುವುದು ರುಜುವಾತಾದರೆ ಅಲ್ಲಿ ಹೆಣ್ಣಿಗೆ ಯಾವುದೇ ದಂಡ ವಿಧಿಸುವುದಿಲ್ಲ. ಆದರೆ ಗಂಡಿಗೆ ದಂಡ ಹಾಕುತ್ತಾರೆ. ದಂಡದ ಹಣವನ್ನು ಆ ಹೆಣ್ಣಿನ ಗಂಡನಿಗೆ ನೀಡತಕ್ಕದ್ದು, ಒಂದು ವೇಳೆ ನಿಗಧಿ ಪಡಿಸಿದ ದಂಡ ನೀಡುವಲ್ಲಿ ವಿಫಲನಾದರೆ ಆ ಹೆಣ್ಣಿನ ಗಂಡನ ಮನೆಯಲ್ಲಿ ನಿಗಧಿಪಡಿಸಿದಷ್ಟು ಕಾಲ ಜೀತ ಮಾಡಬೇಕು. ಇಂತಹ ಸಂಬಂಧಗಳಲ್ಲಿ ಭಾಗಿದಾರಳಾದ ಹೆಣ್ಣನ್ನು ಗಂಡನಾದವನು ಮತ್ತೆ ಸ್ವೀಕರಿಸುತ್ತಾನೆ. ಹೆಣ್ಣನು ಪಾತಿವ್ರತ್ಯದ ಕಲ್ಪನೆಯಲ್ಲಿ ಇಟ್ಟು ಕಾಣದೆ ಆಕೆಯನ್ನು ಸ್ವೀಕರಿಸುವ ನೆಲೆ ಒಂದೆಡೆ ಆದರೆ, ಹೆಣ್ಣನ್ನು ತನ್ನ ಆಸ್ತಿ ಎಂದು ಪರಿಭಾವಿಸಿ, ಆಕೆಯನ್ನು ಬೇರೆಯವರು ಉಪಯೋಗಿಸಿಕೊಂಡಿದ್ದೇ ಆದರೆ ತನಗೆ ದಂಡ ನೀಡಬೇಕು ಎಂದು ಹೇಳುವ ಬಗೆ ಇನ್ನೊಂದೆಡೆ ಕಾಣುತ್ತದೆ. ಹೆಣ್ಣಿಗೆ ರಿಯಾಯಿತಿ ನೀಡುವ ತಂತ್ರ ಹೂಡಿ ತನ್ನ ಸ್ವತ್ತೆಂದು ಪರಿಭಾವಿಸುವ ರೀತಿ ಪುರುಷ ಪ್ರಧಾನ ನೆಲೆಯ ಅಥವಾ ಅಸ್ತಿತ್ವದ ಇನ್ನೊಂದು ಚಹರೆ ಎಂದು ಹೇಳಬಹುದು.

ಕೆಳ ದಶಕಗಳ ಹಿಂದೆ (೨ ಅಥವಾ ೩) ಹೀಗೆ ಅನೈತಿಕ ವ್ಯವಹಾರಗಳಲ್ಲಿ ನಿಗಧಿಪಡಿಸಿದ ಹಣಕ್ಕಿಂತ ಹೆಚ್ಚಿಗೆ ಕೊಡುವುದಾದರೆ ಆ ಹೆಣ್ಣನ್ನು ಗಂಡ ಆದವನು ಅವನಿಗೆ ಕೊಟ್ಟುಬಿಡುವ ಪದ್ಧತಿಯೂ ಕೂಡ ಇತ್ತಂತೆ. ಇದನ್ನು ಗಮನಿಸಿದಾಗ ಮಹಿಳೆಯರು ಮಾರಾಟದ ವಸ್ತುವಾಗಿ ಗಂಡನ ಅಂತಸ್ತಿನ ಪ್ರತೀಕವಾಗಿ ಇದ್ದಳೆಂಬುದು ಕಂಡುಬರುತ್ತದೆ. ಇದು ಕೂಡಾ ಒಂದು ಹೆಣ್ಣಿನ ವ್ಯವಸ್ಥಿತ ಶೋಷಣೆಯ ಹಾದಿಗಳಲ್ಲೊಂದು ಎಂದು ಹೇಳಬಹುದು.

ಬೇರೆ ಸಮುದಾಯದೊಂದಿಗೆ ವೈವಾಹಿಕ ಸಂಬಂಧಗಳು

ಕುಂಚಿ ಕೊರವರಲ್ಲಿ ಬೇರೆ ಸಮುದಾಯಗಳೊಂದಿಗೆ ವಿವಾಹ ಸಂಬಂಧಗಳು ಏರ್ಪಡುವುದಿಲ್ಲ ಎಂಬ ಮಾತು ಕೇವಲ ಹೆಣ್ಣು ಮಕ್ಕಳ ಮದುವೆ ವಿಷಯಕ್ಕೆ ಸಂಬಂಧಿಸಿದಂತೆ ಮಾತ್ರ ಅನ್ವಯವಾಗುತ್ತದೆ. ಆದರೆ ಬೇರೆ ಯಾವುದೇ ಸಮುದಾಯದ ಹುಡುಗಿಯರು ಈ ಸಮುದಾಯ ಹುಡುಗರನ್ನು ಮದುವೆಯಾದರೆ ಅವರನ್ನು ತಮ್ಮ ಸಮುದಾಯಕ್ಕೆ ಸೇರಿಸಿಕೊಳ್ಳುತ್ತಾರೆ. ಜೊತೆಗೆ ಅವರು ತಮ್ಮ ಸಮುದಾಯದ

ಸಂಪ್ರದಾಯ ಮತ್ತು ಆಚರಣೆಗಳನ್ನು ಪಾಲಿಸುವಂತೆ ನಿರ್ದೇಶಿಸುತ್ತಾರೆ. ಆದರೆ ತಮ್ಮ ಜನಾಂಗದ ಮಹಿಳೆಯರು ಬೇರೆ ಜಾತಿಯವರೊಂದಿಗೆ ಮದುವೆ ಆಗಿ ಹೋದರೆ ಆ ಹೆಣ್ಣು ಎಲ್ಲೇ ಇದ್ದರೂ ಪುನಃ ಕರೆ ತರುತ್ತಾರೆ. ಆಕೆಗೆ ಮಕ್ಕಳಾಗಿದ್ದರೂ ಮಕ್ಕಳೊಂದಿಗೆ ತಂದು ತಮ್ಮ ಸಮುದಾಯದ ಪುರುಷರೊಂದಿಗೆ ಮತ್ತೆ ವಿವಾಹ ಮಾಡುತ್ತಾರೆ. ಇಂತಹ ಮಹಿಳೆಯರನ್ನು ಸಮುದಾಯದ ಗಂಡಸರು ಕೂಡಾ ಸ್ವೀಕರಿಸುತ್ತಾರೆ. ಕಾರಣ ಹಿಂದೆ ಇದ್ದ ಕಡಿಮೆ ಪ್ರಮಾಣದ ಹೆಣ್ಣು ಮಕ್ಕಳ ಸಂಖ್ಯೆ ಇರಬಹುದು ಅಥವಾ ಹೆಣ್ಣು ಮಕ್ಕಳನ್ನು ತಮ್ಮ ಸಂಪತ್ತೆಂದು ಪರಿಗಣಿಸಿ ಅವರನ್ನು ಬಿಟ್ಟುಕೊಡದೆ ಇರುವುದು ಕೂಡಾ ಮತ್ತೊಂದು ಕಾರಣ ಎಂದು ಹೇಳಬಹುದು. ಒಟ್ಟಿನಲ್ಲಿ ಏನೇ ಇದ್ದರೂ ಅದು ಪುರುಷ ಪ್ರಧಾನತೆಯ ಕುತಂತ್ರವೇ ಸರಿ ಎಂದು ಹೇಳಿದರೆ ತಪ್ಪಾಗಲಾರದು.

೨. ಕುಟುಂಬ

ಮನುಷ್ಯ ಸಾಮಾನ್ಯವಾಗಿ ಕುಟುಂಬದಲ್ಲೇ ಹುಟ್ಟುತ್ತಾನೆ; ಕುಟುಂಬದ ಚೌಕಟ್ಟಿನಲ್ಲಿ ಸಹಜವಾಗಿ ಬೆಳೆಯುತ್ತಾನೆ. ಕುಟುಂಬದ ನೆರವಿಲ್ಲದೆ ಹುಟ್ಟಿದ ಮಗು ಉಳಿಯಲಾರದು. ಉಳಿದರೂ ಅದು ಮನುಷ್ಯನಾಗಿ ಬೆಳೆಯಲಾರದು. ಒಂದು ವೇಳೆ ಅಂತಹ ಮಕ್ಕಳು ಸಹ ಹೇಗೋ ಬೆಳೆದರೆನ್ನಿ, ಆಗ ಅವು ಅನಾಥರಾಗಿ ಸಮಾಜಕ್ಕೊಂದು ಸಮಸ್ಯೆಯಾಗಿ ಪರಿಣಮಿಸುತ್ತವೆಂಬುದಕ್ಕೆ ಪಾಶ್ಚಾತ್ಯ ದೇಶಗಳೇ ನಿದರ್ಶನಗಳಾಗಿವೆ. ಕುಟುಂಬವನ್ನು ತೊರೆದು ಹೊರಬಂದವರಿಗೆ ಗಂಡಾಗಲಿ, ಹೆಣ್ಣಾಗಲಿ ಸಮಾಜದಲ್ಲಿ ಸ್ಥಾನಮಾನಗಳಿದೆಯೇ?

ಹುಟ್ಟಿದ ಕುಟುಂಬ ಮನುಷ್ಯನ ಜೀವನಕ್ಕೆ ಮೂಲ ಹಾಗೂ ಮುಖ್ಯ ಘಟಕ. ಇದರ ಆಧಾರದ ಮೇಲೆಯೇ ನೆರೆಹೊರೆ, ಗ್ರಾಮ, ಜಿಲ್ಲೆ, ಪ್ರಾಂತ್ಯ, ರಾಷ್ಟ್ರ ಎಲ್ಲವೂ ಅವಲಂಬಿತವಾಗಿರುತ್ತದೆ. ಇದು ನಿಸರ್ಗ ನಿರ್ಮಿಸಿದ ವ್ಯವಸ್ಥೆಯೆಂದರೆ ತಪ್ಪಾಗಲಾರದು. ಇಂತಹ ಕುಟುಂಬಕ್ಕೆ ಮದುವೆಯೇ ಮಹಾದ್ವಾರ. ಈ ತರಹದ ಕುಟುಂಬ ಸಂರಚನೆಯಲ್ಲಿ ಮಹಿಳೆಯರ ಪಾತ್ರ ನಗಣ್ಯವಾದದ್ದಾಗಿದ್ದೆ ಪ್ರತಿಯೊಂದು ಸಮುದಾಯಗಳಲ್ಲೂ ಸಾಮಾನ್ಯವಾಗಿ ವಿಭಕ್ತ ಮತ್ತು ಅವಿಭಕ್ತ ಕುಟುಂಬಗಳು ಕಂಡುಬರುತ್ತವೆ. ಸಾಮಾನ್ಯವಾಗಿ ಮಹಿಳೆಯರಿಗೆ ಎರಡು ಕುಟುಂಬದ ನೆಲೆಗಳಿರುತ್ತವೆ. ಒಂದು ಹುಟ್ಟಿದ ಮನೆ ತವರು ಮನೆ, ಮತ್ತೊಂದು ಕೊಟ್ಟ ಮನೆ ಗಂಡನ ಮನೆ. ಈ ಎರಡು ಕುಟುಂಬಗಳಲ್ಲಿಯೂ ಅತಿ ನಾಜೂಕಿನಿಂದ ಜೀವನ ನಡೆಸುವಂತಹ ಪಾತ್ರಗಳನ್ನು ಸೃಷ್ಟಿಮಾಡಿ, ಪಾತ್ರಗಳಿಗೆ ತಕ್ಕಂತಹ ನಡಾವಳಿಗಳನ್ನು ಅವರ ಮೇಲೆ ಹೇರಲಾಗಿರುತ್ತದೆ. ಮತ್ತು ಅದು ಸಮಾಜ ಒಪ್ಪಿತವಾಗಿರುತ್ತದೆ. ಇದಕ್ಕೆ ಈ ಕುಂಚಿ ಕೊರವ ಸಮುದಾಯವು ಹೊರತಾಗಿಲ್ಲ. ಆದರೆ ಕುಟುಂಬ ಕಟ್ಟುವಲ್ಲಿ ಈ ಸಮುದಾಯದ ಮಹಿಳೆಯರ ಪಾತ್ರ ತುಂಬಾ ಮುಖ್ಯವಾಗಿದೆ. ಹಾಗೆ ಅದನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗುವಲ್ಲಿಯ ಸಂಪೂರ್ಣ ಜವಾಬ್ದಾರಿಯೂ ಈ ಮಹಿಳೆಯರದ್ದೇ

[illegible]

ಆಗಿದೆ. ಕುಟುಂಬದ ಜವಾಬ್ದಾರಿ, ಸದಸ್ಯರ ಪಾಲನೆ-ಪೋಷಣೆ ಇಡಿಯಾಗಿ ಅದರ ಸಂರಚನೆ ಮಹಿಳೆಯರದ್ದೇ ಆಗಿದ್ದರೂ, ಅದರ ಯಜಮಾನಿಕೆ ಮಾತ್ರ ಮನೆಯ ಗಂಡಸರದ್ದೆ ಆಗಿರುತ್ತದೆ. ಪಿತೃ ಪ್ರಧಾನತೆಯ ಎಲ್ಲಾ ಅಂಶಗಳು ಇಲ್ಲಿ ಆಳವಾಗಿ ಬೇರುರಿರುವುದನ್ನು ಕಾಣಬಹುದಾಗಿದೆ. ಇಂದಿನ ನಾಗರೀಕ ಸಮುದಾಯಗಳ ಕರಿನೆರಳು ಈ ಸಮುದಾಯದ ಮೇಲೆ ಬಿದ್ದಿದೆ. ಇಲ್ಲಿ ಪುರುಷರ ದುಡಿಮೆ ಶೂನ್ಯ, ಅಧಿಕಾರದ ಭಾವ ನೂರು ಪ್ರತಿಶತದಷ್ಟು ಗೋಚರಿಸುತ್ತದೆ.

೩. ರಕ್ತ ಸಂಬಂಧಿಗಳನ್ನು ಸಂಬೋಧಿಸುವ ರೀತಿ

ಪ್ರತಿಯೊಂದು ಸಮುದಾಯದ ವ್ಯಕ್ತಿಯೂ ಕುಟುಂಬಗಳ ರಚನೆ ಮಾಡಿಕೊಂಡು ಅದರೊಳಗಿರುವ ಸದಸ್ಯರನ್ನು ಸಂಬೋಧಿಸುವ ರೀತಿಯೂ ಬೇರೆ ಬೇರೆಯಾಗಿರುತ್ತದೆ. ಅವರನ್ನು ಸಂಬೋಧಿಸುವ ಹೆಸರುಗಳಿಗೆ ತಕ್ಕಂತೆ ಅವರ ಪಾತ್ರ ಜವಾಬ್ದಾರಿಗಳು ಬೇರೆಯೇ ಆಗಿರುತ್ತದೆ. ಇದಕ್ಕೆ ಕುಂಚಿಕೊರವರು ಹೊರತಾಗಿಲ್ಲ. ಇವರು ತಮ್ಮದೇ ಆದ ಭಾಷೆಯಲ್ಲಿ ಸಂಬಂಧಿಕರನ್ನು ಸಂಬೋಧಿಸುತ್ತಾರೆ. ಆದರೆ ಇವರ ಭಾಷೆಯ ಬಗ್ಗೆ ಅಧ್ಯಯನಗಳು ಸಂಪೂರ್ಣವಾಗಿ ನಡೆಯದೆಯೇ ಇರದ ಕಾರಣ ಅವರು ಸಂಬೋಧನೆ ಲಿಂಗ ಪಕ್ಷಪಾತದಿಂದ ಕೂಡಿವೆಯೋ ಅಥವಾ ಬೇರೆ ಯಾವ ಬಗೆಯಲ್ಲಿದೆಯೋ ಎಂಬುದನ್ನು ಅರಿಯುವುದು ಕಷ್ಟಸಾಧ್ಯವಾಗಿದೆ.

ಕೆಲವೊಂದು ಉದಾಹರಣೆಗಳೆಂದರೆ

ತಂದೆ-ಯಾವ	ತಾಯಿ-ಯಮ್ಮ
ಚಿಕ್ಕಪ್ಪ-ಸಣವ	ಚಿಕ್ಕಮ್ಮ-ಸಣಮ್ಮ
ಹೆಂಡತಿ-ಕುಳಸಿ	ಅತ್ತಿಗೆ-ನಂಗ
ಅಳಿಯ-ಮರಮಗ	ನಾದಿನಿ-ಮುಚ್ಚಿನ್ಸ್
ಭಾವಮೈದ-ಮುಚ್ಚಾದಿ	ಇತ್ಯಾದಿ

ಇಲ್ಲಿ ಸ್ತ್ರೀ ಪುರುಷರಿಗೆ ಸಂಬೋಧಿಸುವ ಬಗೆ ಮಾತ್ರ ಬೇರೆ ಬೇರೆಯಾಗಿಯೇ ಗೋಚರವಾಗುತ್ತದೆ. ವಿಭಿನ್ನವಾದ ಭಾಷಾಶೈಲಿ ಇವರ ಸಂಸ್ಕೃತಿಯನ್ನು ಎತ್ತಿ ಹಿಡಿದು, ಉಳಿಸಿಕೊಂಡು ಬಂದಿರುವುದಕ್ಕೆ ಸಾಕ್ಷಿಯಾಗಿದೆ.

೪. ಅಂತ್ಯ ಸಂಸ್ಕಾರ

ಎಲ್ಲ ಸಮುದಾಯಗಳಲ್ಲಿ ನಡೆಯುವ ಹಾಗೆ ಇಲ್ಲಿ ಕೂಡ ಅಂತ್ಯ ಸಂಸ್ಕಾರಗಳು ನಡೆಯುತ್ತವೆ. ಸಾಯುವ ವ್ಯಕ್ತಿಯನ್ನು ಜೀವ ಹೋಗುವುದಕ್ಕೆ ಮುಂಚಿತವಾಗಿಯೇ ಮನೆಯಿಂದ ಹೊರಕ್ಕೆ ತರುತ್ತಾರೆ. ಇವರಲ್ಲಿ ಯಾರೇ ಸಾಯಲಿ, ಯಾವ ವಯಸ್ಸಿನಲ್ಲಿಯೇ ಸಾಯಲಿ ಅವರನ್ನು ಮಲಗಿಸುತ್ತಾರೆ

ಮತ್ತು ಶವಸಂಸ್ಕಾರಕ್ಕೂ ಹಾಗೇ ಒಯ್ಯುತ್ತಾರೆ. ಬಿಸಿ ನೀರಿನಿಂದ ಶವಕ್ಕೆ ಸ್ನಾನ ಮಾಡಿಸಿ ಗಂಡಸಾದರೆ ಹಣೆಗೆ ನಾಮ, ಹೆಂಗಸಾದರೆ ಕುಂಕುಮ ಇಡುತ್ತಾರೆ. ಗಂಡ ಸತ್ತಾಗ ಆತನ ಹೆಂಡತಿಯನ್ನು ಶವದ ಪಕ್ಕದಲ್ಲಿ ಕೂರಿಸಿ ಮಡಿಲಕ್ಕಿ ಹಾಕುತ್ತಾರೆ. ತವರಿನವರು ಹೊಸ ಬಟ್ಟೆಗಳನ್ನು ಕೊಡುತ್ತಾರೆ. ಹೆಂಡತಿ ಸತ್ತಾಗ ಆಕೆಯ ಗಂಡ ಶವದ ಪಕ್ಕದಲ್ಲಿರುತ್ತಾನೆ. ಆ ಸಮಯದಲ್ಲಿ ಶವಕ್ಕೆ ಪೂಜೆಯನ್ನು ಮಾಡುತ್ತಾರೆ. ಅದಕ್ಕೆ ಹೊಸ ಬಟ್ಟೆ ತೊಡಿಸುತ್ತಾರೆ. ಅನಂತರ ಶವದ ಜವಾಬ್ದಾರಿಯನ್ನು ಸತ್ತವನ ತಾಯಿಯ ತಮ್ಮ ಅಥವಾ ಸತ್ತವನ ಹೆಂಡತಿಯ ಅಣ್ಣ ತಮ್ಮಂದಿರು ಹೊರುತ್ತಾರೆ. ಇವರಿಗೆ ಹೊರೆ ಹೊರುವವರು ಎಂದು ಕರೆಯುತ್ತಾರೆ. ಈತ ಶವ ಮುಟ್ಟಿದ ನಂತರವೇ ಉಳಿದವರು ಶವ ಮುಟ್ಟುತ್ತಾರೆ. ಹೆಣವನ್ನು ಚಟ್ಟದ ಮೇಲಿಟ್ಟು ಸ್ಮಶಾನದ ಕಡೆ ಹೊತ್ತು ನಡೆಯುತ್ತಾರೆ. ಆ ದಿನ ಸಾವಿನ ಮನೆಯಲ್ಲಿ ಮತ್ತು ಆ ಮನೆಯ ಸೋದರ ಸಂಬಂಧಿಗಳ ಮನೆಗಳಲ್ಲಿ ಅಡುಗೆ ಮಾಡುವುದಿಲ್ಲ. ನೆಂಟರಿಷ್ಟರು ಊಟ ತಂದು ಕೊಡುತ್ತಾರೆ. ಇವರಲ್ಲಿ ಹೆಣವನ್ನು ಹೂಳುವ ಮತ್ತು ಸುಡುವ ಪದ್ಧತಿ ಜಾರಿಯಲ್ಲಿದೆ.

ಹೆಣವನ್ನು ಸ್ಮಶಾನಕ್ಕೆ ಸಾಗಿಸುವಷ್ಟರಲ್ಲಿ ಮೊದಲೇ ನಾಲ್ಕು ಜನ ಹೋಗಿ ಗುಂಡಿ ತೆಗೆದಿರುತ್ತಾರೆ. ಹೆಣವನ್ನು ಸ್ಮಶಾನಕ್ಕೆ ತೆಗೆದುಕೊಂಡು ಹೋಗುವ ಮೊದಲೇ ಮನೆಯ ಮುಂದೆ ಹಾಕಿದ ಬೆಂಕಿಯ ಪಕ್ಕದಲ್ಲಿ ಒಲೆಹೂಡಿ, ಹೊಸ ಮಡಿಕೆಯಲ್ಲಿ ಅನ್ನ ಮಾಡುತ್ತಾರೆ. ಇದನ್ನು ಕೂಳು ಎನ್ನುತ್ತಾರೆ. ಈ ಕೂಳಿನ ಮಡಿಕೆಯನ್ನು ತಂದೆ ಸತ್ತಾಗ ಹಿರಿಯ ಮಗನೂ, ತಾಯಿ ಸತ್ತಾಗ ಕಿರಿಯ ಮಗನೂ ಹಿಡಿದು ಹೆಣದ ಮುಂದೆ ನಡೆಯುತ್ತಾರೆ. ಉಳಿದವರು ಹೆಣವನ್ನು ಮುಟ್ಟುವುದಿಲ್ಲ. ಹೆಣವನ್ನು ಹೊತ್ತು ಬಂದವರು ಗುಂಡಿ ಸ್ವಲ್ಪ ದೂರ ಇರುವಾಗಲೇ ಹೆಣದ ಚಟ್ಟವನ್ನು ನೆಲಕ್ಕೆ ಇಳಿಸುತ್ತಾರೆ. ಚಟ್ಟ ಬಿದಿರಿನಿಂದ ಮಾಡಿದ್ದು, ಏಣಿಯಾಕಾರದಲ್ಲಿರುತ್ತದೆ. ಹೆಣದ ತಲೆಯ ಭಾಗದಲ್ಲಿ ಮೂರು ಕಲ್ಲುಗಳನ್ನಿಟ್ಟು ಅದರ ಮೇಲೆ ಕೂಳಿನ ಮಡಕೆಯನ್ನಿಟ್ಟು, ಕೂಳಿನ ಮಡಿಕೆ ಹಿಡಿದು ಬಂದವನು ತನ್ನ ಕೈಯಲ್ಲಿರುವ ಕೊಳ್ಳಿಯಿಂದ ಒಡೆಯುತ್ತಾನೆ. ನಂತರ ಕೂಳನ್ನು ನಾಲ್ಕು ದಿಕ್ಕಿಗೂ ಚೆಲ್ಲುತ್ತಾನೆ.[೨] ಹೀಗೆ ಈ ಅಂತ್ಯ ಸಂಸ್ಕಾರದ ಕ್ರಿಯೆಯನ್ನು ಗಮನಿಸಿದಾಗ ಸಂಸ್ಕೃತಿಯ ಅಪೇಕ್ಷೆ ಗಂಡು ಸಂತಾನವನ್ನು ಬಯಸುತ್ತದೆ. ತಂದೆ-ತಾಯಿಯರು ಸತ್ತಾಗ ಗಂಡು ಮಕ್ಕಳೇ ಕ್ರಿಯೆ ವಿಧಿಗಳನ್ನು ನಡೆಸತಕ್ಕದೆಂದು ನಿರ್ಧರಿಸುವ ಸಂಸ್ಕೃತಿ ಹೆಣ್ಣನ್ನು ಎರಡನೇ ಸ್ಥಾನದಲ್ಲಿ ಇಡುತ್ತದೆ ಹೀಗಿರುವಾಗ ಸಂಸ್ಕೃತಿ ಹೇಗೆ ಮಹಿಳೆಯರ ಪರವಾಗಿ ಕಾರ್ಯನಿರ್ವಹಿಸುತ್ತದೆ ಎಂದು ಹೇಳಲು ಹೇಗೆ ಸಾಧ್ಯ. ಗಂಡು ಮಕ್ಕಳು ಪ್ರಧಾನ ಎಂದು ಹೇಳುವುದಾದರೆ ಸಂಸ್ಕೃತಿಯು ಸಂಪೂರ್ಣವಾಗಿ ಪುರುಷ ಪ್ರಧಾನ ನೆಲೆಯಲ್ಲಿಯೇ ರೂಪಿತಗೊಂಡಿದೆ ಎಂದು ಹೇಳಬಹುದು. ಸಾಮಾನ್ಯವಾಗಿ ಹೆಣ್ಣು ಮಕ್ಕಳು ಗಂಡನ ಮನೆಯಲ್ಲಿರುತ್ತಾರೆ ಗಂಡು ಮಕ್ಕಳ ಹತ್ತಿರ ಇರುತ್ತಾರೆ. ತಂದೆ-ತಾಯಿಗಳಿಗೆ ಹಾಗಾಗಿ ಅವರೆ ಎಲ್ಲ ಮಾಡುವುದು

[illegible]

[illegible]

ಅನಿವಾರ್ಯವೆಂದು ಪರಿಗಣಿಸಿದರೂ ಈ ಗಂಡು ವಾಸಸ್ಥಾನ ಪುರುಷ ಪ್ರಧಾನ ನೆಲೆಯಲ್ಲೇ ರೂಪಿತಗೊಂಡಿರುವುದರಿಂದ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಯಾವ ಮೂಲದಿಂದಲಾದರೂ ತೆಗೆದುಕೊಂಡಾಗ ಇಡೀ ಆಚರಣೆಗಳು ಲಿಂಗ ತಾರತಮ್ಯದಿಂದಲೇ ಕೂಡಿರುವುದನ್ನು ಕಾಣಬಹುದು.

೫. ಆಸ್ತಿ ವ್ಯವಸ್ಥೆ

ಕುಂಚಿ ಕೊರವರು ಅತ್ಯಂತ ಬಡತನದ ರೇಖೆಗಿಂತ ಕೆಳಗಿರುವವರಾದ್ದರಿಂದ ಇವರು ಆಸ್ತಿಯ ಒಡೆತನ ಹೊಂದಿರುವವರು ಎಂಬುದು ಸಲ್ಲದ ಮಾತು. ಒಂದು ವೇಳೆ ತುಂಡು ತುಣುಕು, ಚರ ಅಥವಾ ಸ್ಥಿರ ಆಸ್ತಿಗಳನ್ನು ಹೊಂದಿದ್ದರೆ ಅವು ಗಂಡು ಸಂತಾನಕ್ಕೆ ಮೀಸಲಾಗಿರುತ್ತವೆ. ಮತ್ತು ಮನೆಯ ಯಜಮಾನ ಎಂದು ಕರೆಯಿಸಿಕೊಳ್ಳುವ ವ್ಯಕ್ತಿಯ ಹೆಸರಿನಲ್ಲೇ ಇರುತ್ತವೆ(ಇವರು ಸಾಕುವ ಹಂದಿಗಳು ಕೂಡಾ ಇವರ ಚರ ಆಸ್ತಿಗೆ ಸೇರಿಕೊಳ್ಳುತ್ತವೆ). ಹೆಣ್ಣು ಮಕ್ಕಳು ದುಡಿದರೂ ಕೂಡ ಯಾವ ಆಸ್ತಿಯನ್ನು ಅವರ ಹೆಸರಿನಲ್ಲಿ ದಾಖಲಿಸಿಲ್ಲ. ಆಸ್ತಿಯ ಒಡೆತನ ಗಂಡುಮಕ್ಕಳಿಗೆ ಸೇರುವುದು ಕೂಡ ಪುರುಷ ಪ್ರಧಾನತೆಯ ಬಹುಮುಖ್ಯ ಅಂಶವಾಗಿದೆ.

ಇತ್ತೀಚೆಗೆ ಕೆಲವೊಬ್ಬರಿಗೆ ಸರ್ಕಾರದ ಯೋಜನೆಯಡಿಯಲ್ಲಿ ಮನೆಗಳು ಲಭ್ಯವಾಗಿದ್ದು, ಅವು ಕೂಡ ಪುರುಷರ ಹೆಸರಿನಲ್ಲಿವೆ. ಇಲ್ಲಿ ಸಂವಿಧಾನ ನಮಗೆ ನೀಡಲಾದ ಆಸ್ತಿ ಹಕ್ಕು ಮೊಟಕುಗೊಂಡಿರುವುದನ್ನು ಕಾಣಬಹುದು. ಸ್ತ್ರೀ-ಪುರುಷರಿಬ್ಬರಿಗೂ ಆಸ್ತಿಯಲ್ಲಿ ಸಮಪಾಲಿದೆ ಎಂದು ಕಾನೂನು ಹೇಳಿದಾಗ್ಯೂ, ಅದು ತಾನೇ ನೇರವಾಗಿ ಕಾರ್ಯಾಂಗದ ಮೂಲಕ ಪಾಲಿಸದೇ ಹೋಗಿದೆ. ಪುನಃ ಇಡೀ ಈ ಸಮುದಾಯ ಮಾತ್ರವಲ್ಲ ಇಡೀ ಸಮಾಜ, ಕಾಯ್ದೆ, ಕಾನೂನುಗಳು ಪುರುಷರ ಪರವಾಗಿ ಕಾರ್ಯನಿರ್ವಹಿಸುವುದನ್ನು ಕಾಣಬಹುದಾಗಿದೆ.

೬. ಪಂಚಾಯತ್ ವ್ಯವಸ್ಥೆಯಲ್ಲಿ ಮಹಿಳೆಯರ ಭಾಗವಹಿಸುವಿಕೆ

ಕುಂಚಿ ಕೊರವರು ತಮ್ಮದೇ ಆದ ಪಂಚಾಯತಿಯನ್ನು ಮಾಡಿಕೊಂಡಿರುತ್ತಾರೆ. ಹಿರಿಯ ಅನುಭವಿಗಳು ಈ ಪಂಚಾಯತಿಯ ಮುಖ್ಯ ನ್ಯಾಯ ತೀರ್ಪುಗಾರರಾಗಿರುತ್ತಾರೆ. ತಮ್ಮ ಸಮುದಾಯದಲ್ಲಿ ಗಿಡದ ಕೆಳಗೆ ಓಕಾಳಿಯ ಸಮಕ್ಷಮದಲ್ಲಿ ತೀರ್ಮಾನ ಕೈಗೊಳ್ಳುತ್ತಾರೆ. ನ್ಯಾಯ ನಿರ್ಣಯದ ಸಭೆಯು ಒಂದು ದಿನದಿಂದ ೭ ದಿನದವರೆಗೆ ನಡೆಯುತ್ತದೆ. ಹೀಗೆ ನಡೆಯುವ ಪಂಚಾಯಿತಿಯೂ ಜನರಹಿತ ಪ್ರದೇಶಗಳಲ್ಲಿ ನಡೆಯುತ್ತದೆ. ಸಾಮೂಹಿಕ ನ್ಯಾಯ ನಿರ್ಣಯದ ಮೂಲಕ ನ್ಯಾಯ ತೀರ್ಮಾನಗಳು ಜರುಗುತ್ತವೆ. ಇವರಲ್ಲಿ ಬಹುತೇಕ ಜನರು ಕೋರ್ಟು ಕಛೇರಿಗೆ ಹೋಗುವುದಿಲ್ಲ. ಏಕೆಂದರೆ ಅಲ್ಲಿಂದ ತೀರ್ಪುಗಳನ್ನು ತಂದರು ಈ ಸಮುದಾಯ ಅದನ್ನು ಒಪ್ಪುವುದಿಲ್ಲ ಎಂದು ಹೇಳುತ್ತಾರೆ. ತಮ್ಮ ಸಮುದಾಯ ತೆಗೆದುಕೊಂಡ ತೀರ್ಪೆ ಅಂತಿಮ ಎಂದು ಹೇಳುತ್ತಾರೆ. ನಮ್ಮ

ಭಾರತದ ಸಂವಿಧಾನ ಮತ್ತು ಕಾನೂನನ್ನು ಪ್ರತಿಯೊಬ್ಬ ಭಾರತೀಯನು ಪಾಲಿಸಬೇಕು. ಆದರೆ ಇವರು ತಮ್ಮದೇ ಆದ ಸಂಸ್ಕೃತಿ, ಆಚಾರಗಳನ್ನು ರೂಪಿಸಿಕೊಂಡಿದ್ದರಿಂದ ಎಲ್ಲರೂ ಸಮುದಾಯದ ರೂಪುರೇಷೆಗಳಿಗೆ ಬದ್ಧರಾಗಿಯೇ ಇರುತ್ತಾರೆ. ಎಂತಹ ಸಮಸ್ಯೆಗಳನ್ನೇ ಆಗಲಿ ತಮ್ಮಲ್ಲಿಯೇ ಬಗೆಹರಿಸಿ ಕೊಳ್ಳುತ್ತಾರೆ. ಕೋರ್ಟು, ಕಛೇರಿಗಳ ಗೋಜಿಗೆ ಇವರು ಹೋಗುವುದಿಲ್ಲ.

ಪಂಚಾಯತಿಗಳನ್ನು ನಡೆಸುವ ಸಂದರ್ಭದಲ್ಲಿ ಇಲ್ಲಿ ಮಹಿಳೆಯರು ಕೂಡ ತೀರ್ಪುಗಾರರಾಗಿ ಭಾಗವಹಿಸುತ್ತಾರೆ. ಹಿರಿಯ ಮಹಿಳೆಯರು ಅನುಭವದ ಆಧಾರದ ಮೇಲೆ ನ್ಯಾಯ ತೀರ್ಮಾನಗಳನ್ನು ನೀಡಲು ಅವಕಾಶವಿದೆ. ಆದರೆ ಕೇವಲ ಒಬ್ಬಿಬ್ಬರು ಮಾತ್ರ ಕಂಡುಬರುತ್ತಾರೆ. ಹೆಚ್ಚಿನ ಪಾಲು ಪುರುಷರೆ ಎಲ್ಲಾ ಸ್ಥಾನಗಳನ್ನು ಆವರಿಸಿಕೊಂಡಿರುತ್ತಾರೆ. ತಮ್ಮ ಸಮುದಾಯದ ಕಲಹಗಳನ್ನು ಇತರೇ ಸಮುದಾಯಗಳಿಗೆ ತಿಳಿಯದಂತೆ ಗೌಪ್ಯತೆಯನ್ನು ಕಾಪಾಡಿಕೊಳ್ಳುತ್ತಾರೆ. ಹೆಣ್ಣೆ ಆಗಲಿ, ಗಂಡೇ ಆಗಲಿ ತಪ್ಪು ಮಾಡಿದವರಿಗೆ ಶಿಕ್ಷೆ ಕಟ್ಟಿಟ್ಟ ಬುತ್ತಿಯಾಗಿರುತ್ತದೆ. ಆತ ಗಂಡು ಅಥವಾ ಈಕೆ ಹೆಣ್ಣು ಎಂಬ ಯಾವ ರಿಯಾಯಿತಿಗಳು ಇವರಲ್ಲಿ ಕಂಡುಬರುವುದಿಲ್ಲ. ಹಾಗೂ ಪಂಚಾಯತಿಯ ತೀರ್ಮಾನಕ್ಕೆ ಎಲ್ಲರೂ ಬದ್ಧರಾಗಿರುತ್ತಾರೆ.

೩.೦.೧. ಭೌತಿಕ ಸಂಸ್ಕೃತಿ

೧. ಉದ್ಯೋಗ

ಇವರು ತಮ್ಮ ಕುಲಕಸುಬನ್ನೇ ಇಂದಿಗೂ ಉಳಿಸಿಕೊಂಡು ಬಂದಿದ್ದಾರೆ. ಆದರೆ ಅದನ್ನು ಬೆಳೆಸಿಕೊಂಡು ಹೋಗುತ್ತಾರೋ ಅಥವಾ ಇಲ್ಲವೋ ಗೊತ್ತಿಲ್ಲ. ಸಾಂಪ್ರದಾಯಿಕ ಉದ್ಯೋಗಗಳಿಂದ ಬರುವ ಆದಾಯ ಕಡಿಮೆ ಇದ್ದು ಇವು ನಶಿಸಿ ಹೋಗುವ ಸಾಧ್ಯತೆಗಳು ಇವೆ ಎಂದು ಹೇಳಬಹುದು. ಸಾಮಾನ್ಯವಾಗಿ ಈ ಸಮುದಾಯದ ಪುರುಷರು ಹಂದಿ ಹಿಡಿದು ಸಾಕಾಣಿಕೆ ಮಾಡುತ್ತಾರೆ. ಇವುಗಳನ್ನು ಆಹಾರವಾಗಿ ಬಳಸುತ್ತಾರೆ. ಹಾಗೂ ಹೊರ ರಾಜ್ಯಗಳಿಗೆ ಮಾರಾಟ ಮಾಡುತ್ತಾರೆ. ಮತ್ತು ಮಹಿಳೆಯರು ಕುಲಕಸುಬುಗಳಾದ ಕಸಬರಿಗೆ ಮಾಡುವುದು, ಸಿಂಬಿ, ಚಾಪೆ, ಹಗ್ಗ, ಕುಂಚ ಮುಂತಾದವುಗಳನ್ನು ಮಾಡುತ್ತಾರೆ. ಇವರ ಉದ್ಯೋಗವು ಸಂಪೂರ್ಣವಾಗಿ ನೈಸರ್ಗಿಕ ಸಂಪತ್ತನ್ನು ಅವಲಂಬಿಸಿದೆ. ವಿವಿಧ ಕಾರಣಗಳಿಂದ ಸಂಪತ್ತು ನಶಿಸಿದಂತೆ ಹಾಗೂ ಆಧುನಿಕ ವಸ್ತುಗಳ ಭರಾಟೆಯಿಂದ ಈ ಮಹಿಳೆಯರು ಕೆಲಸ ಇಲ್ಲದೆ ಒದ್ದಾಡುವಂತಾಗಿದೆ.

ಉದ್ಯೋಗದಲ್ಲಿ ತೊಡಗಿ ಇಡೀ ಕುಟುಂಬದ ನಿರ್ವಹಣೆಯ ಜವಾಬ್ದಾರಿ ಮಹಿಳೆಯರು ಹೊರುತ್ತಾರೆ. ಗಂಡಸರು ಹಂದಿ ಮಾರಿ ಬಂದ ಹಣವನ್ನು ಕುಡಿದು, ಜೂಜು ಆಡಿ ಕಳೆಯುತ್ತಾರೆ. ಇಡೀ ಈ ಸಮುದಾಯದ ಉಳಿವಿಗೆ ಮಹಿಳೆಯರೇ ಕಾರಣರಾಗಿದ್ದಾರೆ. ಮಹಿಳೆಯರನ್ನು ಕೇವಲ

ಪೂರೈಕೆಯ ಸ್ಥಾನದಲ್ಲಿಟ್ಟು ಕಾಣುತ್ತಾರೆ. ಸಂಸ್ಕೃತಿಯ ಪ್ರತೀಕ ಮಹಿಳೆ ಎಂದು ಹೇಳುವ ನೆಪದಲ್ಲಿ ಎಲ್ಲಾ ಹೊರೆಯನ್ನು ಮಹಿಳೆಯರ ಮೇಲೆ ಹಾಕಿ ಪುರುಷರು ಐಷಾರಾಮಿ ಜೀವನವನ್ನು ಸಾಗಿಸುತ್ತಾರೆ.

೨. ಆಹಾರ

ಬಹಳ ಹಿಂದಿನಿಂದಲೂ ಈ ಕುಂಚಿ ಕೊರವ ಜನಾಂಗದವರು ಊಟೋಪಚಾರಗಳ ಬಗೆಗೆ ಅಷ್ಟಾಗಿ ಗಮನ ಕೊಡುವುದಿಲ್ಲ(ಇವರು ಸಸ್ಯ ಮತ್ತು ಮಾಂಸಹಾರಿಗಳಾಗಿದ್ದಾರೆ). ದಿನವಿಡೀ ಅವಿಶ್ರಾಂತ ವಾಗಿ ದುಡಿಯುವ ಮಹಿಳೆಯರು ಆಹಾರದ ಸಂಸ್ಕರಣೆಯಲ್ಲಿ ತೊಡಗುವುದು ಕಷ್ಟವಾಗುತ್ತದೆ. ದುಡಿಯಲು ಹೋದಲ್ಲೇ ಭಿಕ್ಷೆ ಬೇಡಿ ತಿನ್ನುತ್ತಾರೆ. ಮನೆಯಲ್ಲಿರುವ ಚಿಕ್ಕ ಮಕ್ಕಳು ಭಿಕ್ಷೆ ಬೇಡಿಯೇ ತಮ್ಮ ಹೊಟ್ಟೆ ತುಂಬಿಸಿಕೊಳ್ಳುತ್ತಾರೆ. ಪುರುಷರು ಮನೆಯಲ್ಲಿಯ ಇತರೇ ಸದಸ್ಯರು ಬೇಡಿ ತಂದ ಆಹಾರವನ್ನೇ ತಿನ್ನುತ್ತಾರೆ. ಇಲ್ಲವೇ ಹೋಟೆಲ್, ಖಾನಾವಳಿಗಳಲ್ಲಿ ತಿಂದು ಹೊತ್ತು ಕಳೆಯುತ್ತಾರೆ.

ಹಂದಿಗಳನ್ನು ಬೇಟೆಯಾಡುವುದರಿಂದ ಇದನ್ನು ತಿನ್ನುವ ಮುಖ್ಯ ಮಾಂಸದ ಆಹಾರವಾಗಿಸಿ ಕೊಂಡಿದ್ದಾರೆ. ಹಾಗೇ ಬೆಕ್ಕು, ಹುಂಜ, ಕೋಳಿ, ಮೀನು, ಹಂದಿ, ಕರಿಕೋತಿ, ನರಿ, ಇಲಿ, ಜಿಂಕೆ, ಮೊಲ, ಏಡಿ, ಕುರಿ, ಆಮೆ ಮುಂತಾದವುಗಳನ್ನು ಕೂಡ ತಿನ್ನುತ್ತಾರೆ. ಸಸ್ಯ ಆಹಾರಗಳಾದ ರಾಗಿ ರೊಟ್ಟಿ, ಮುದ್ದೆ, ಸಾರು, ಪಲ್ಲೆ ಹಾಗೂ ವಿಶೇಷ ಹಬ್ಬ ಹರಿದಿನಗಳ ಸಂದರ್ಭದಲ್ಲಿ ಅನ್ನವನ್ನು ಸಹ ಸಸ್ಯಾಹಾರವಾಗಿ ಸೇವಿಸುತ್ತಾರೆ.

ಮನೆಯ ಗಂಡಸರು ಉಂಡ ನಂತರವೇ ಮಹಿಳೆಯರು ಊಟ ಮಾಡುವ ಪದ್ಧತಿ ಸಾಮಾನ್ಯವಾಗಿ ಇವರಲ್ಲಿಯೂ ರೂಢಿಯಲ್ಲಿದೆ. ಅಳಿದುಳಿದುದ್ದನ್ನು ಉಣ್ಣುವುದರಿಂದ ಪೌಷ್ಠಿಕಾಂಶದ ಕೊರತೆ ಮಹಿಳೆಯರಲ್ಲಿ ತಲೆದೋರುತ್ತದೆ. ದುಡಿದು ತರುವುದರ ಜೊತೆ ಆಹಾರವನ್ನು ಸಂಸ್ಕರಿಸಿ ಉಣಬಡಿಸುವವರು ಮಹಿಳೆಯರೇ ಆದರೂ ಮನೆಯ ಪುರುಷರಿಗೆ ಮೊದಲ ಪ್ರಾಶಸ್ತ್ಯ. ಇವು ಪುರುಷ ಪ್ರಧಾನತೆಯನ್ನು ಸ್ಥಾಪಿತಗೊಳಿಸಿರುವ ಅಂಶಗಳಲ್ಲೊಂದಾಗಿದೆ.

೩. ವಾಸಸ್ಥಳ

ಕುಂಚಿ ಕೊರವರು ಸಾಮಾನ್ಯವಾಗಿ ನಗರದ ಹೊರವಲಯದಲ್ಲಿ ಗುಡಿಸಲುಗಳನ್ನು ಹಾಕಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಇತ್ತೀಚೆಗೆ ಸರ್ಕಾರದ ಸವಲತ್ತಿನಿಂದ ತುಸು ಜನ ಮಾತ್ರ ಸಿಮೆಂಟಿನ ಮನೆಗಳನ್ನು ಕಟ್ಟಿಸಿಕೊಂಡಿದ್ದಾರೆ. ಆರ್ಥಿಕವಾಗಿ ಸ್ವಲ್ಪ ಸುಧಾರಿಸಿದವರು ತಗಡಿನ ಮನೆಗಳನ್ನು ಹಾಕಿಕೊಂಡು ಜೀವನ ಸಾಗಿಸುತ್ತಿದ್ದಾರೆ, ಇವರಲ್ಲಿ, ಗಂಡಿಗೆ ಹುಟ್ಟಿದ ಮನೆಯೇ ಶಾಶ್ವತವಾದರೆ ಹೆಣ್ಣಿಗೆ ಹುಟ್ಟಿದ ಮನೆ ಮತ್ತು ಗಂಡನ ಮನೆಯೆಂದು ಭಾಗಗಳಾಗಿ ಗಂಡನ ಮನೆಯೇ ಶಾಶ್ವತ

ನೆಲೆಯಾಗಿ ರೂಪುಗೊಳ್ಳುತ್ತದೆ. ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗಿ ನೆಲೆಯೂರುವ ಅನಿವಾರ್ಯತೆಯನ್ನು ಕೇವಲ ಮಹಿಳೆಯರಿಗೆ ಮಾತ್ರ ಸಂಸ್ಕೃತಿ ನಿರ್ದೇಶಿಸಿದೆ. ತಾನು ಹುಟ್ಟಿದ ಮನೆಯನ್ನು ಮರೆತು ಕೊಟ್ಟ ಮನೆಯಲ್ಲಿ(ಗಂಡನ ಮನೆ) ಅಲ್ಲಿಯ ಎಲ್ಲಾ ಸದಸ್ಯರು ತನ್ನವರೆಂದು ಹೊಂದಿಕೊಂಡು ಬಾಳುವಂತೆ ಹೇಳುತ್ತದೆ. ಈ ಸ್ಥಳಾಂತರ ಮಹಿಳೆಯರ ಮೇಲೆ ಯಾವ ರೀತಿಯ ಪರಿಣಾಮಗಳನ್ನು ಸಹ ಬೀರಲು ಕಾರಣವಾಗಬಹುದು. ಆದರೆ ಗಂಡಿಗೆ ಇಂತಹ ಯಾವ ಅನಿವಾರ್ಯತೆಗಳು ಕಂಡುಬರುವುದಿಲ್ಲ.

೪. ಉಡುಗೆ-ತೊಡುಗೆ

ಈ ಕೊರವರ ಉಡುಗೆ ತೊಡುಗೆಗಳ ಬಗ್ಗೆ ಶ್ರೀ ಮಲ್ಲೆ ಎಂಬುವವರು "ಮಹಿಳೆಯರು ಎಲ್ಲ ತರಹದ ಬಣ್ಣದ ಮಣಿಗಳನ್ನು ನಡುನಡುವೆ ಪೋಣಿಸಿ ಕವಡೆ ಮತ್ತು ಕಪ್ಪೆ ಚಿಪ್ಪಿನ ಸರಗಳನ್ನು ಎದೆಯವರೆಗೂ ತೂಗು ಹಾಕಿಕೊಳ್ಳುತ್ತಾರೆ. ಮುಂಗೈನಿಂದ ಮೊಣಕೈವರೆಗೂ ಹಿತ್ತಾಳೆ ಬಳೆಗಳನ್ನು ತೊಟ್ಟುಕೊಳ್ಳುತ್ತಾರೆ. ಹಿತ್ತಾಳೆ, ಸೀಸ ಮತ್ತು ಬೆಳ್ಳಿಯಿಂದ ತಯಾರಿಸಿದ ಒರಟಾದ ಉಂಗುರಗಳನ್ನು ತಮ್ಮ ಮಧ್ಯದ ಬೆರಳಿನ ಹೊರತು ಉಳಿದೆಲ್ಲಾ ಬೆರಳುಗಳಿಗೂ ಹಾಕಿಕೊಳ್ಳುತ್ತಾರೆ"[೩] ಎಂದು ಹೇಳಿದ್ದಾರೆ. ಆದರೆ ಇಂದಿನ ಕುಂಚಿ ಕೊರವ ಸಮುದಾಯದ ಮಹಿಳೆಯರು ಇಂತಹ ಯಾವ ಆಭರಣಗಳನ್ನು ತೊಡುವುದಿಲ್ಲ. ಇವರು ಆಧುನಿಕತೆಯ ಸೊಂಕಿಗೆ ಈಡಾಗಿದ್ದಾರೆ. ಇತರೇ ಎಲ್ಲಾ ಸಮುದಾಯದವರು ತೊಡುವಂತಹ ಉಡುಗೆ-ತೊಡುಗೆಗಳನ್ನು ತೊಡುತ್ತಾರೆ. ಇದಕ್ಕೆ ಕಾರಣ ನಗರದ ಪ್ರಭಾವ ಮತ್ತು ಒಡೆತನ ಎಂದು ಹೇಳಬಹುದು. ನೈಸರ್ಗಿಕ ಸಂಪನ್ಮೂಲಗಳ ಲಭ್ಯತೆ ಇಲ್ಲದಂತಾದಾಗ ಇಂತಹ ಆಭರಣಗಳನ್ನು ಧರಿಸುವುದು ಕಷ್ಟವಾಗುತ್ತದೆ. ಇತರೇ ಎಲ್ಲಾ ಸಮುದಾಯದವರು ತೊಡುವಂತೆ ಸೀರೆ, ಕುಪ್ಪಸಗಳನ್ನು ತೊಡುತ್ತಾರೆ ಹಾಗೂ ಓಲೆ, ಮೂಗುತಿ, ಬಳೆ ಇಂತವುಗಳನ್ನು ಮಾತ್ರ ಹಾಕಿಕೊಳ್ಳುವ ಪದ್ಧತಿಯು ಇಂದು ನಮಗೆ ಕಂಡುಬರುತ್ತದೆ.

೩.೦.೨. ಧಾರ್ಮಿಕ ಜೀವನ

೧. ಸೂತಕಗಳ ಕೇಂದ್ರ ಬಿಂದುವಾಗಿ ಕುಂಚಿ ಕೊರವ ಮಹಿಳೆ

ಸಾಮಾನ್ಯವಾಗಿ ಸೂತಕಗಳನ್ನು ಮಡಿ-ಮೈಲಿಗೆಯ ದೃಷ್ಟಿಯಲ್ಲಿಟ್ಟು ಕಾಣುತ್ತಾರೆ. ಮರಣ, ಹೆಣ್ಣು ಮಕ್ಕಳು ಋತುಮತಿಯರಾದಾಗ, ತಿಂಗಳಮಟ್ಟಿನ ಸಂದರ್ಭದಲ್ಲಿ ಸೂತಕದ ಆಚರಣೆಗಳು ಕಂಡುಬರುತ್ತವೆ. ಜನನ ಅಥವಾ ಹೆರಿಗೆಯನ್ನು ಶ್ರೇಷ್ಠ ಎಂದು ಭಾವಿಸುತ್ತಾರೆ. ಆದರೆ ಸತ್ತಾಗ ಮನೆಯನ್ನು ಸೂತಕದ ಕೊಂಪೆ ಎಂದು ಭಾವಿಸುತ್ತಾರೆ(ಹೆಣ್ಣೆ ಸತ್ತಿರಲಿ ಅಥವಾ ಗಂಡೆ ಸತ್ತಿರಲಿ). ೩ ಅಥವಾ ೫ ದಿನಗಳವರೆಗೆ ಇವರು ಯಾರ ಮನೆಗೂ ಹೋಗುವುದಿಲ್ಲ. ಮನೆಯನ್ನು ಶುದ್ಧ

ಮಾಡಿಕೊಂಡು(ಸಾರಿಸುವುದು, ಗೋಮುತ್ರ ಸಿಂಪಡನೆ, ಮುಂತಾದವುಗಳ ಮೂಲಕ) ಸತ್ತವರ ಆತ್ಮಕ್ಕೆ ಪೂಜೆ ಸಲ್ಲಿಸಿದಾಗ ಸೂತಕ ನಿವಾರಣೆಯಾಗುತ್ತದೆ ಎಂದು ತಿಳಿಯುತ್ತಾರೆ.

ಹೆಣ್ಣು ಮಕ್ಕಳು ಋತುಮತಿಯರಾದಾಗ ಸೂತಕ ಆಚರಣೆ ಕಂಡುಬರುತ್ತದೆ. ಇದನ್ನು ಜೈವಿಕ ಕ್ರಿಯೆ ಎಂದು ಭಾವಿಸದೆ ಹೆಣ್ಣು ಮಕ್ಕಳನ್ನು ಮಡಿ ಮಾಡಿ ಮನೆಯೊಳಗೆ ಕರೆದುಕೊಳ್ಳುತ್ತಾರೆ. ಈ ಕುಂಚಿ ಕೊರವರಲ್ಲಿ ಹಿಂದೆ ಮೈನೆರೆದವಳು ಗುಡಿಸಲಲ್ಲಿ ಇರುವವರೆಗೆ ಊಟ ಮಾಡಲು ತಟ್ಟೆ, ನೀರು ಕುಡಿಯಲು ಲೋಟ ಕೊಡುತ್ತಿರಲಿಲ್ಲ. ಕಲ್ಲಿನ ಮೇಲೆ ಅಥವಾ ಕೈಯಲ್ಲಿ ಆಹಾರವನ್ನು ಹಿಡಿದು ತಿನ್ನಬೇಕಾಗಿತ್ತು. ನೀರು ಕುಡಿಯಲು ತೆಂಗಿನ ಚಿಪ್ಪು ಕೊಡುತ್ತಿದ್ದರಂತೆ, ಊಟ ಮಾಡಿದ ಕೈ, ಬಾಯನ್ನು ಗುಡಿಸಲಿನೊಳಗೆ ಮಾಡಿಕೊಂಡ ಗುಂಡಿಯಲ್ಲಿಯೇ ತೊಳೆಯಬೇಕಾಗಿತ್ತು. ಕೊನೆಯ ದಿನ (೧೧, ೨೧, ೨೫ ದಿನ ಎಂದು ನಿಗಧಿಪಡಿಸಿರುತ್ತಾರೆ) ಆ ಗುಂಡಿಯನ್ನು ಮಣ್ಣಿನಿಂದ ಆಕೆಯೇ ಮುಚ್ಚಬೇಕಾಗಿತ್ತು. ಏಕೆಂದರೆ ಕೋಳಿ, ನಾಯಿಗಳು ಆಕೆಯ ಎಂಜಲನ್ನು ತಿಂದು ಮನೆಯೊಳಗೆ ಬರುತ್ತವೆ ಆಗ ಮನೆ ಮೈಲಿಗೆ ಆಗುತ್ತದೆ ಎಂದು ಭಾವಿಸುತ್ತಿದ್ದರು. ಇವುಗಳನ್ನು ಕಟ್ಟುನಿಟ್ಟಾಗಿ ಆಚರಿಸದಿದ್ದರೆ ಕೆಟ್ಟದಾಗುತ್ತದೆ ಎಂದು ನಂಬುತ್ತಾರೆ. ಇದು ಇಂದಿಗೂ ಪ್ರಚಲಿತದಲ್ಲಿದೆ. ಆದರೆ ಇಷ್ಟೊಂದು ಕಟ್ಟುನಿಟ್ಟಾಗಿ ಪಾಲಿಸುವುದಿಲ್ಲ ಕಾರಣ ನಗರೀಕರಣ ಅಥವಾ ಆಧುನಿಕತೆಯ ಪ್ರಭಾವವೆಂದು ಹೇಳಬಹುದು. ತಿಂಗಳ ಮುಟ್ಟಿನ ಸಂದರ್ಭದಲ್ಲಿ ಕೂಡ ಗುಡಿಗಳ ಪ್ರವೇಶ ನಿಷಿದ್ಧ. ಹಾಗೂ ದೀಪ ಮುಡಿಸುವ ಹಾಗಿಲ್ಲ ತಲೆ ಮೇಲೆ ನೀರು ಹಾಕಿಕೊಂಡು ಪರಿಶುದ್ಧರಾಗಬೇಕು. ಇವನ್ನೆಲ್ಲ ಗಮನಿಸಿದಾಗ ಅಸ್ಪೃಶ್ಯತೆ ಎನ್ನುವುದು ಯಾವುದೋ ಒಂದು ಜಾತಿ, ಸಮುದಾಯಕ್ಕೆ ಅಂಟಿದ ಪಿಡುಗಲ್ಲ, ಇಡೀ ಮಹಿಳಾ ಸಂಕುಲಕ್ಕೆ ಅಂಟಿದ ಪಿಡುಗಾಗಿದೆ. ವಿಶೇಷ ದೈಹಿಕ ಶಕ್ತಿ ಹೊಂದಿದ ಮಹಿಳೆಯನ್ನು ಸೂತಕದ ನೆಪದಲ್ಲಿ ದೌರ್ಬಲ್ಯಳು ಎಂಬಂತೆ ಪ್ರತಿಬಿಂಬಿಸುವುದು ಪುರುಷ ಪ್ರಧಾನತೆಯ ಹುನ್ನಾರು ಎಂದು ಹೇಳಿದರೆ ತಪ್ಪಾಗಲಾರದು. ದೇಹದಲ್ಲಿ ಎಂದು ಕಾಣದ ವೈಪರಿತ್ಯಗಳು ಕಾಣಿಸಿಕೊಂಡಾಗ ಆಕೆಗೆ ಬೇಕಾಗುವುದು ಆರೈಕೆಯೇ ಹೊರತು ಸೂತಕ ನೆಪದಲ್ಲಿ ಆಕೆಯನ್ನು ದೂರ ಇಡುವ ಪದ್ಧತಿಯಲ್ಲ ಎಂಬುದನ್ನು ಮನಗಾಣಬೇಕು.


೨. ಮಾತೃ ದೇವತೆಗಳ ಆರಾಧನೆ

ಆದಿವಾಸಿಗಳು ಅನಾದಿಕಾಲದಿಂದಲೂ ಆಹಾರ ಸಂಗ್ರಹಣೆ, ಬೇಟೆ, ಕೃಷಿ, ಪಶುಪಾಲನೆ ಈ ನಾಲ್ಕು ಹಂತಗಳನ್ನು ತುಂಬಾ ಪ್ರಮುಖವಾಗಿ ಅಳವಡಿಸಿಕೊಂಡಿದ್ದಾರೆ. ಈ ಎಲ್ಲಾ ಕೆಲಸಗಳಲ್ಲಿ ಮಹಿಳೆಯ ಪಾಲೇ ಅಧಿಕವಾಗಿದ್ದು ಇಂತಹ ವ್ಯವಸ್ಥೆಯ ಹಿನ್ನೆಲೆಯಲ್ಲೇ ಸ್ತ್ರೀ ಅಥವಾ ಹೆಣ್ಣನ್ನು ಪೂಜ್ಯನೀಯ ಮತ್ತು ದೇವರ ಸಮಾನಳನ್ನಾಗಿ ಕಾಣಲಾಗುತ್ತಿತ್ತು. ಹೀಗಾಗಿ ಹೆಣ್ಣನ್ನು ದೈವ

[illegible]

ಸ್ವರೂಪಳನ್ನಾಗಿ ಪೂಜಿಸಲು ಆರಂಭಿಸಿದರು ಮತ್ತು ಹೆಣ್ಣು ರಕ್ಷಕಳು ಕೂಡ ಆಗಿದ್ದರಿಂದ ದುಷ್ಟ ಶಕ್ತಿಗಳಿಂದ ತಮ್ಮನ್ನು ರಕ್ಷಿಸಿ, ಕಷ್ಟಗಳನ್ನು ಪಾರುಮಾಡಬಲ್ಲಳೆಂದು ಹೆಣ್ಣು ದೇವತೆಗಳ ಆರಾಧನೆಗೆ ಮುಂದಾದರು. ಅಲೆಮಾರಿ ಆದಿವಾಸಿಗಳಾದ ಈ ಕುಂಚಿ ಕೊರವ ಸಮುದಾಯದವರು ಇದನ್ನೆ ಪಾಲಿಸಿ, ರೂಪಿಸಿಕೊಂಡು ಬಂದವರಾಗಿದ್ದಾರೆ. ಸಾಮಾನ್ಯವಾಗಿ ಗಾಳೆವ್ವ, ಚೌಡವ್ವ, ದ್ಯಾಮವ್ವ, ದುರ್ಗಮ್ಮ, ಕೊರಮ ದೇವಿ ಹೀಗೆ ಮುಂತಾದ ದೇವತೆಗಳ ಆರಾಧನೆ ಮಾಡುತ್ತಿದ್ದು, ತಮ್ಮ ಸಮುದಾಯಗಳಲ್ಲಿ ಇಂತಹ ದೇವತೆಗಳ ಗರ್ಭಗುಡಿಯನ್ನು ಸ್ಥಾಪಿಸಿಕೊಂಡು ಪೂಜೆ ಸಲ್ಲಿಸುತ್ತಾರೆ. ಈ ಕುಂಚಿ ಕೊರವರು ತಮ್ಮ ಸಮುದಾಯದಲ್ಲಿ ಸ್ಥಾಪಿಸಿಕೊಂಡಿರುವ ಕೊರಮ ದೇವಿಯ ಬಗ್ಗೆ ಒಂದು ಐತಿಹಾಸಿಕವಾದ ಕತೆಯನ್ನು ಹೇಳುತ್ತಾರೆ.

ಕಥೆ : ತಮ್ಮ ಸಮುದಾಯದಲ್ಲಿ ಮನೆ ಕಟ್ಟುವ ಸಂದರ್ಭದಲ್ಲಿ ಒಡ್ಡನೊಬ್ಬ ಕಲ್ಲು ಒಡಿಯುವಾಗ ಆತನ ಕೈ ಹಾಗೂ ಕೈಯಲ್ಲಿ ಹಿಡಿದ ಸುತ್ತಿಗೆ ಮೇಲೆಯೆ ನಿಂತಿತಂತೆ. ಕೈ ಕೆಳಗಿಳಿಸಲು ಎಷ್ಟೇ ಪ್ರಯತ್ನಿಸಿದಾಗ್ಯೂ ಬರದಿದ್ದಾಗ ಈ ಕಲ್ಲಿನಲ್ಲಿ ಏನೋ ವಿಶೇಷತೆ ಇದೆ, ಇದು ಕೊರಮ ದೇವಿಯೇ ಇರಬೇಕೆಂದು ಊಹಿಸಿ ದೇವಿಯನ್ನು ಮನದಲ್ಲಿ ನೆನೆದು ನಿನಗೆ ಇನ್ನು ಒಂದೇ ಒಂದು ಉಳಿ ಪೆಟ್ಟು ಕೂಡ ನೀಡುವುದಿಲ್ಲ, ನಿನ್ನ ಈ ದೈವಿ ಶಕ್ತಿ ಇರುವ ಕಲ್ಲಿನ ರೂಪದ ಆತ್ಮ ಶಕ್ತಿಯನ್ನು ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸುತ್ತೇನೆ ಎಂದು ಬೇಡಿಕೊಂಡಾಗ ಆತನ ಕೈ ಕೆಳಗೆ ಬಂತಂತೆ. ಇದನ್ನೆಲ್ಲಾ ಕಂಡ ಕುಂಚಿ ಕೊರವ ಸಮುದಾಯದ ಜನರು ಒಡ್ಡನ ಮನಸ್ಸಿನ ಮಾತಿನಂತೆ ಸಮುದಾಯದ ಮಧ್ಯದಲ್ಲಿ ಕೊರಮ ದೇವಿಯ ಗುಡಿಯನ್ನು ಸ್ಥಾಪಿಸಿದ್ದಾರೆ. ಇಂದಿಗೂ ಈ ದೇವಿಯ ಆರಾಧನೆಯನ್ನು ಕಾಣಬಹುದು.



ಕುಂಚಿ ಕೊರಮರ ಆರಾಧ್ಯ ದೈವ(ಕೊರಮ ದೇವಿ)



ದೇವತೆಗಳ ಆರಾಧನೆ ಜೊತೆಗೆ ತಿರುಪತಿ ತಿಮ್ಮಪ್ಪನ ಆರಾಧನೆಯನ್ನು ಕೂಡ ಮಾಡುವುದು ಕಂಡುಬರುತ್ತದೆ. ಈ ಕೊರಮ ದೇವಿಗೆ ವರ್ಷಕ್ಕೊಮ್ಮೆ ಜಾತ್ರೆ, ಪ್ರಾಣಿ ಬಲಿ ನಡೆಯುತ್ತದೆ. ಇವರು ಮೂಲತಃ ಬೇಟೆಯನ್ನೇ ಅವಲಂಬಿಸಿದ್ದರಿಂದ ಬೇಟೆಯನ್ನು ಹುಡುಕಿಕೊಂಡು ಹೋಗುವ ಸಂದರ್ಭದಲ್ಲಿ ಇವರು ದೇವರಿಗೆ ಮೊರೆ ಹೋಗುತ್ತಿದ್ದರು. ಅದನ್ನು ನೈವೇದ್ಯ ರೂಪದಲ್ಲಿ ದೇವರಿಗೆ ಅರ್ಧಪಾಲು ಇರಿಸಿ ಉಳಿದ ಭಾಗವನ್ನು ತಮ್ಮ ಆಹಾರಕ್ಕಾಗಿ ಬಳಸಿಕೊಳ್ಳುತ್ತಿದ್ದರು. ಬೇಟೆ ಸಿಗುವುದು ಕೂಡ ದೇವಿಯ ಕೃಪೆ ಹಾಗಾಗಿ ದೇವರಿಗೆ ಅದನ್ನು ಅರ್ಪಿಸಿ ಕೃತಜ್ಞತೆ ಸಲ್ಲಿಸಿ ನಂತರ ತಾವು ತಿನ್ನುತ್ತಿದ್ದರು. ಈ ಪರಿಪಾಟವನ್ನು ಇಂದಿಗೂ ಬೆಳೆಸಿಕೊಂಡು ಬಂದಿದ್ದಾರೆ. ಈ ದೃಷ್ಟಿಯಲ್ಲಿ ಹೆಣ್ಣಿಗೆ ಮಹತ್ವ ನೀಡುತ್ತಾರೆ. ಆದರೆ ತಮ್ಮಂತೆ ಇವರು ಎಂದು ಸರಿಸಮಾನ ಸ್ಥಾನ ಕಲ್ಪಿಸಿಕೊಡುವುದಿಲ್ಲ. ದೇವಿಯ ಅಧೀನದಲ್ಲಿ ತಾವು, ತಮ್ಮ ಅಧೀನದಲ್ಲಿ ಮನೆಯ ಹೆಣ್ಣು ಮಕ್ಕಳು ಎಂದು ಒಂದೆಡೆ ವೈಭವೀಕರಿಸಿ ಮತ್ತೊಂದೆಡೆ ಆಳಾಗಿ ಕಂಡು ಹೆಣ್ಣನ್ನು ದ್ವಿತ್ವ ನೆಲೆಯಲ್ಲಿ ಗುರುತಿಸುವುದು ಕಂಡುಬರುತ್ತದೆ. ಇದನ್ನು ಗಮನಿಸಿದಾಗ ಈ ಕುಂಚಿ ಕೊರವ ಸಮುದಾಯದ ಉಳಿವಿಗೆ ಸಂಪೂರ್ಣವಾಗಿ ಮಹಿಳೆಯರೇ ಕಾರಣ ಎಂದು ಹೇಳಬಹುದು.

ಇಡಿಯಾಗಿ ಕುಂಚಿ ಕೊರವರ ಸಂಸ್ಕೃತಿಯನ್ನು ಗಮನಿಸಿದಾಗ ಅದು ಪುರುಷರ ಪರವಾಗಿಯೇ ರೂಪಿತವಾಗಿರುವುದು ಕಂಡುಬರುತ್ತದೆ. ಮೇಲು ನೋಟಕ್ಕೆ ಸಂಸ್ಕೃತಿಯನ್ನು ಗ್ರಹಿಸಿದಾಗ ಅದು ಎರಡು ಲಿಂಗದ ಪರವಾಗಿ ಕಾರ್ಯನಿರ್ವಹಿಸುವಂತೆ ಗೋಚರಿಸುತ್ತದೆ. ಆದರೆ ಒಳಾರ್ಥವನ್ನು ಸೂಕ್ಷ್ಮವಾಗಿ ಗ್ರಹಿಸಿದಾಗ ಅದು ಏಕ ಲಿಂಗೀಯವಾಗಿ ಅಥವಾ ಪುರುಷನ ಪರವಾಗಿ ಕಾರ್ಯ ನಿರ್ವಹಿಸುತ್ತಿರುವುದು ಕಂಡುಬರುತ್ತದೆ. ಮಾನವನ ಸಮಗ್ರ ಜೀವನದ ಒಳಾರ್ಥ ಮತ್ತು ಹೊರಾರ್ಥವನ್ನು ಸಂಸ್ಕೃತಿಯು ಅಳವಡಿಸಿಕೊಂಡಿರುತ್ತದೆ. ಸಂಸ್ಕೃತಿಯ ಒಂದೊಂದು ಭಾಗಗಳನ್ನು ಎಳೆ ಎಳೆಯಾಗಿ ಬಿಡಿಸುವ ಕಾರ್ಯ ಮಾಡಿದಾಗ ಮಾತ್ರ ಅದು ಹೇಗೆ ಸ್ತ್ರೀ-ಪುರುಷರಿಗೆ ವೈರುಧ್ಯಗಳನ್ನು ಸೃಷ್ಟಿಸಿದೆ ಎಂದು ತಿಳಿಯಬಹುದು. ಇವುಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಕುಂಚಿ ಕೊರವರ ಸಂಸ್ಕೃತಿ ಪುರುಷ ಪ್ರಧಾನ ನೆಲೆಯಲ್ಲಿ ಕಾರ್ಯನಿರ್ವಹಿಸುತ್ತಿದೆ ಎಂಬುವುದು ಗೋಚರವಾಗುತ್ತದೆ. ಇದನ್ನು ಇಡಿಯಾಗಿ ಕುಂಚಿ ಕೊರವ ಸಂಸ್ಕೃತಿ ಎಂದು ಪರಿಭಾವಿಸುವುದಕ್ಕಿಂತ, ಕುಂಚಿ ಕೊರವ ಪುರುಷ ಸಂಸ್ಕೃತಿ ಎಂದು ಭಿನ್ನವಾಗಿ ಗುರುತಿಸುವುದು ಸೂಕ್ತ ಎಂದು ಹೇಳಬಹುದು. ಹಾಗೇ ಮಹಿಳೆಯರಿಗೂ ಸರಿಸಮಾನ ಅವಕಾಶ, ಶ್ರೇಷ್ಠತೆಯನ್ನು ಕಲ್ಪಿಸುವ ಮಹಿಳಾ ಸಂಸ್ಕೃತಿಯನ್ನು ಸೃಷ್ಟಿಸಬೇಕು ಹಾಗೂ ಅದು ಪಾಲಿತವಾಗಬೇಕು ಅಂದಾಗ ಮಾತ್ರ 'ಸಂಸ್ಕೃತಿ' ಎಂಬ ಪದಕ್ಕೆ ಪರಿಪೂರ್ಣ ಅರ್ಥ ಸಿಕ್ಕಂತಾಗುತ್ತದೆ.

ಅಡಿ ಟಿಪ್ಪಣಿಗಳು

೧. ಭೈರಪ್ಪ ಕೆ., **ಸಮಾಜ ಶಾಸ್ತ್ರ,** ಪು.೮೫

೨. ಮಲ್ಲಿಕಾರ್ಜುನ ಬಿ ಮಾನ್ಪಡೆ, **ಕೊರಮ,** ಪು.೫೧

೩. ಬರಗೂರು ರಾಮಚಂದ್ರಪ್ಪ, **ಕೊರವರ ಸಂಸ್ಕೃತಿ,** ಪು.೪೫

ಅಧ್ಯಾಯ ೪

ಕುಂಚಿ ಕೊರವ ಮಹಿಳೆಯರ ಸಮಸ್ಯೆಗಳು

೪

ಕುಂಚಿ ಕೊರವ ಮಹಿಳೆಯರ ಸಮಸ್ಯೆಗಳು

೪.೦. ಸಾಮಾಜಿಕ ಸಮಸ್ಯೆಗಳು

ಮಾನವ ಸಮಾಜ ಜೀವಿ, ತನ್ನದೇ ಆದ ಸಮುದಾಯವೊಂದನ್ನು ಸೃಷ್ಟಿಸಿಕೊಂಡು ಎಲ್ಲರೊಂದಿಗೆ ಬದುಕಲು ಇಚ್ಛಿಸುತ್ತಾನೆ. ಸಮಾಜ ಗಂಡು ಹೆಣ್ಣು ಇಬ್ಬರನ್ನು ಒಳಗೊಂಡಿದ್ದು, ಇವರು ಗಾಳಿ, ನೀರು, ಜಲ, ನೆಲ, ಆಕಾಶ ಸೇರಿದಂತೆ ಸಮಸ್ತ ಪ್ರಕೃತಿಯಲ್ಲಿ ಸಮಪಾಲುದಾರರಾಗಿದ್ದಾರೆ. ಆದರೆ ಸಾಮಾಜಿಕ ಸ್ಥಾನಮಾನಗಳ ವಿಶ್ಲೇಷಣೆಯಲ್ಲಿ ಪುರುಷ ಪ್ರಧಾನ ವ್ಯವಸ್ಥೆ ರೂಪಿತವಾಗಿರುವುದು ಕಂಡುಬರುತ್ತದೆ. ಬಹುತೇಕ ಸಮುದಾಯಗಳು ಈ ವ್ಯವಸ್ಥೆಯಿಂದ ಬಂದಿಸಲ್ಪಟ್ಟಿವೆ. ಹಾಗೂ ಇದನ್ನೇ ಲೋಕಾರೂಢಿ ಎಂದು ವಾದಿಸುವರು ಉಂಟು. ಇದಕ್ಕೆ ಕುಂಚಿ ಕೊರವ ಮಹಿಳೆ ಮತ್ತು ಪುರುಷರು ಕೂಡಾ ಹೊರತಾಗಿಲ್ಲ. ಸಾಮುದಾಯಿಕವಾಗಿಯೇ ಅತ್ಯಂತ ಹಿಂದುಳಿದ ಸಮುದಾಯದಲ್ಲಿ ಇನ್ನು ಮಹಿಳೆಯರ ಸ್ಥಾನಮಾನಗಳು, ಸಮಸ್ಯೆಗಳು ಹೇಗೆ ಸೃಷ್ಟಿಗೊಂಡಿರಬಹುದು ಎಂಬುದನ್ನು ಅರಿಯುವುದು ಕೂಡಾ ತುಂಬಾ ಅವಶ್ಯಕವಾಗಿದೆ.

೪.೦.೦. ಅನಕ್ಷರತೆ

ಸಾಕ್ಷರತೆ ಮತ್ತು ವಿದ್ಯಾವಂತಿಕೆ ಎರಡು ಬೇರೆ ಬೇರೆಯಾಗಿ ಗುರುತಿಸಿಕೊಂಡರು ಒಂದರ ಹಿಂದೊಂದು ಹೆಜ್ಜೆ ಹಾಕುತ್ತವೆ. ಈ ಎರಡರಿಂದಲೂ ಕುಂಚಿ ಕೊರವ ಮಹಿಳೆಯರು ಬಳಲುತ್ತಿದ್ದಾರೆ. ಒಂದಾನೊಂದು ಕಾಲಘಟ್ಟದಲ್ಲಿ ಎಂದು ಹೇಳುವ ಹಿನ್ನೆಲೆಯಲ್ಲಿ ಈ ಸಮುದಾಯವನ್ನು ಗುರುತಿಸಿದಾಗ ಶೂನ್ಯ ಪ್ರಮಾಣದ ಸಾಕ್ಷರತೆ ಇರುವುದನ್ನು ಕಾಣಬಹುದು. ಆದರೆ ಇವರು ಇತ್ತೀಚಿನ ದಿನಗಳಲ್ಲಿ ಸಾಕ್ಷರತೆ ಪಡೆಯಲು ಹಂಬಲಿಸುತ್ತಿದ್ದಾರೆ. ಮುಂದಿನ ತಲೆಮಾರು ಎಂದು ಕರೆಸಿಕೊಳ್ಳುವ ಮಕ್ಕಳು ವಿದ್ಯಾಭ್ಯಾಸ ಹೊಂದಲು ಮುಂದಾಗಿದ್ದಾರೆ. ಆದರೆ ಇದು ಹೆಚ್ಚು ಗಂಡು ಸಂತಾನಕ್ಕೆ ಮೀಸಲಾಗಿದೆ. ಹೆಣ್ಣು ಮಕ್ಕಳಿಗೆ ಕೇವಲ ೭ನೇ ತರಗತಿವರೆಗೆ ಹೆಚ್ಚೆಂದರೆ ಪ್ರೌಢ ಶಿಕ್ಷಣದವರೆಗೆ ಮಾತ್ರ ವಿದ್ಯಾಭ್ಯಾಸ ಕೊಡಿಸಿ ದುಡಿಮೆಗೆ ಕಳಿಸುತ್ತಾರೆ. ಇದಕ್ಕೆ ಕಾರಣ ಆರ್ಥಿಕ ಮುಗ್ಗಟ್ಟು ಮತ್ತು ಹೆಣ್ಣು ಮಕ್ಕಳು ಕೊಟ್ಟ ಮನೆಗೆ ಹೋಗುತ್ತಾರೆ ಅವರಿಗ್ಯಾಕೆ ವಿದ್ಯಾಭ್ಯಾಸ ಎಂಬ ಮನೋಧೋರಣೆಯಾಗಿದೆ. ಅನಕ್ಷರತೆ

[illegible]

[illegible]

[illegible]

[illegible]

[illegible]

ಯಿಂದಾಗಿಯೇ ಇವರು ಸಮಾಜದ ಅಂಚಿಗೆ ತಳಲ್ಪಟ್ಟ ಜನರಾಗಿರುವುದು ಕಂಡುಬರುತ್ತದೆ. ಇಡೀ ಕುಂಚಿ ಕೊರವ ಮಹಿಳೆಯರ ಅದೋಗತಿಗೆ ಈ ಅನಕ್ಷರತೆಯೇ ಮುಖ್ಯ ಕಾರಣವಾಗಿದೆ. ಅವಿದ್ಯಾವಂತಿಕೆ ತಲೆದೋರಿ ಇಡೀ ಸಮುದಾಯದ ಮಹಿಳೆಯರು ಶಿಕ್ಷಣದಿಂದ ವಂಚಿತರಾಗುತ್ತಿರುವುದು ಮೇಲ್ನೋಟಕ್ಕೆ ಗೋಚರಿಸುತ್ತದೆ.

ಚಿಕ್ಕಂದಿನಿಂದಲೇ ಬಡತನದ ನೋವನ್ನುಂಡ ಇವರಲ್ಲಿ ದುಡಿಮೆಯ ವ್ಯಾಮೋಹ ಹೆಚ್ಚೆತ್ತು ಒಂದೋ, ಎರಡೋ, ಹತ್ತೊ ರೂ ಒಟ್ಟು ಎಷ್ಟೇ ಹಣ ಕೈಗೆ ಬಂದರೆ ಸಾಕು ಎಂಬಂತ ಮನೋಧೋರಣೆ ಬೆಳೆಸಿಕೊಂಡುಬಿಟ್ಟಿದ್ದಾರೆ. ಆದರೆ ಇದು ಪುರುಷರಿಗೆ ಕಾಡುವುದಿಲ್ಲ ಅವರು ದುಡಿಮೆಯಿಂದ ಬಹುದೂರ. ಹಾಗಾಗಿ ಅವರ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಬಿಡುವು ದೊರೆತು ಶಿಕ್ಷಣ ಪಡೆಯುತ್ತಾರೆ. ಹೆಣ್ಣು ಮಕ್ಕಳು ಇದರಿಂದ ವಂಚಿತರಾಗುತ್ತಲೇ ಇದ್ದಾರೆ. ಅನಕ್ಷರತೆಯಿಂದಲೂ ಯಶಸ್ವಿ ಜೀವನ ಸಾಧ್ಯವಾದಿತೆ? ಎಂದು ಕುಂಚಿ ಕೊರವ ಮಹಿಳೆಯರನ್ನು ಕೇಳಿದಾಗ ಅವರು ಹೇಳಿದ್ದು ಹೀಗೆ "ಜೀವನ ಸಾಗುತ್ತಲೇ ಇದೆಯಲ್ಲ, ಆದರೆ ಅದು ಸಮರ್ಪಕವಾಗಿಲ್ಲ" ಎಂದು ಹೇಳುತ್ತಾರೆ. ಈ ವಾಕ್ಯವನ್ನು ಗಮನಿಸಿದಾಗ ಆಧುನಿಕ ಭಾಷೆಯ ಸ್ಪರ್ಶ ಪಡೆದಂತೆ ಕಾಣುತ್ತದೆ.

೪.೦.೧. ಅರೇ ಕಾಲಿಕ ನಿರುದ್ಯೋಗ

ಸಾಮಾನ್ಯವಾಗಿ ದುಡಿಯಲು ಸಾಮರ್ಥ್ಯ ಹಾಗೂ ಇಚ್ಛೆ ಇದಾಗ್ಯೂ ಉದ್ಯೋಗ ಇಲ್ಲದಿರುವವರನ್ನು ನಿರುದ್ಯೋಗಿ ಎನ್ನುತ್ತೇವೆ. ಆದರೆ ಈ ಕುಂಚಿ ಕೊರವ ಮಹಿಳೆಯರಿಗೆ ನಿರುದ್ಯೋಗ ಸಮಸ್ಯೆಯೇ ಇಲ್ಲ. ಆದರೆ ಅರೆ ಕಾಲಿಕ ನಿರುದ್ಯೋಗ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ದುಡಿಮೆಯ ಆಕಾಂಕ್ಷೆ ಹಾಗೂ ದುಡಿಮೆಯ ಸಾಧನಗಳು ಮಹಿಳೆಯರೇ. ಹಾಗಾಗೀ ದುಡಿಮೆ ಎನ್ನುವುದು ಮಹಿಳೆಯರಾದರೆ ಅರೇಕಾಲಿಕ ನಿರುದ್ಯೋಗ ಎನ್ನುವುದು ಆಕೆಗೆ ಅಂಟಿಕೊಂಡ ಸಮಸ್ಯೆಯಾಗಿದೆ ಎಂದು ಹೇಳಬಹುದು.

ಸಾಂಪ್ರದಾಯಿಕ ದುಡಿಮೆಯಲ್ಲಿ ತೊಡಗಿಕೊಂಡ ಈ ಮಹಿಳೆಯರು ನೈಸರ್ಗಿಕ ಸಂಪನ್ಮೂಲಗಳನ್ನು ಹೆಚ್ಚು ಆಶ್ರಯಿಸಿದ್ದಾರೆ. ಒಣ ಹುಲ್ಲು, ಗಿಡದ ಬೇರು, ಜಂಬೆ ಇಂತಹುಗಳನ್ನೇ ನಂಬಿ ಜೀವನ ನಡೆಸುತ್ತಿದ್ದಾರೆ. ಇವು ಪ್ರಕೃತಿ ನೀಡಿದರೆ ವರವೆಂದು ಭಾವಿಸಿ ಕೆಲಸ ಮಾಡುತ್ತಾರೆ. ಇಲ್ಲದೇ ಹೋದರೆ ಖಾಲಿ ಕೂಡುತ್ತಾರೆ. ಹಾಗೆ ಮಳೆಗಾಲದ ಸಂದರ್ಭದಲ್ಲಿ ಮನೆ ಮನೆ ಸುತ್ತಿ ಮಾರಲಾಗದೆ, ಅಂತಹ ಸಮಯದಲ್ಲಿ ಕೂಡಖಾಲಿ ಕೂಡುತ್ತಾರೆ. ಇವೆಲ್ಲವುಗಳಿಂದ ಈ ಮಹಿಳೆಯರು ಜರ್ಜರಿತರಾಗಿರುವುದು ಕಂಡುಬರುತ್ತದೆ. ಮನೆಯಲ್ಲಿ ದುಡಿಯುವವರು ಮಹಿಳೆಯರೇ ಆಗಿರುವುದರಿಂದ ಇಂತಹ ಸಂದರ್ಭಗಳಲ್ಲಿ ಅವರೇ ಭಿಕ್ಷಾಟನೆಗೆ ಇಳಿಯುತ್ತಾರೆ. ಒಟ್ಟಿನಲ್ಲಿ ಏನಾದರೂ ಮಾಡಿ ಇಡೀ ಮನೆಯವರ ಹೊಟ್ಟೆಪಾಡನ್ನು ನೋಡಿಕೊಳ್ಳುತ್ತಾರೆ.

[illegible]

ಸಾಂಪ್ರದಾಯಿಕ ಕಸುಬುಗಳನ್ನು ಬಿಟ್ಟು ಅವರಿಗೆ ಬೇರೆ ಕೆಲಸವೇ ಗೊತ್ತಿಲ್ಲ. 'ಬೊಂಬಾಯಿ ಮಿಠಾಯಿ' ಎನ್ನುವ ವಸ್ತುವನ್ನು ಮಾರುತ್ತಾರೆ. ಆದರೆ ಅದು ಮಳೆ, ಚಳಿಗಾಲದ ಸಂದರ್ಭದಲ್ಲಿ ಕೆಟ್ಟು ಹೋಗುತ್ತದೆ. ಹೀಗೆ ಯಾವ ಉದ್ಯೋಗವು ಸಂಪೂರ್ಣವಾಗಿ ಕೈಗೆ ಹತ್ತದೇ ತೊಳಲಾಡುತ್ತಿದ್ದಾರೆ. ಬೇರೆಯವರ ಕೈಕೆಳಗೆ ದುಡಿಯಬಹುದಲ್ಲ ಎಂದರೆ, ನಾವು ಇನ್ನೊಬ್ಬರ ಕೈಕೆಳಗೆ ದುಡಿಯಲು ಇಚ್ಛಿಸುವುದಿಲ್ಲ, ಏಕೆಂದರೆ ಆಳ್ವಿಕೆ ನಮಗೆ ಸಲ್ಲದು ಎನ್ನುತ್ತಾರೆ. ಅರೆಕಾಲಿಕ ಉದ್ಯೋಗವು ಬಡತನವನ್ನು ಹೆಚ್ಚಿಸಿ ಅನ್ಯಮಾರ್ಗಗಳಿಗೆ ಇಳಿಯುವಂತೆ ಮಾಡುತ್ತದೆ. ದುಡ್ಡು ಇದ್ದಾಗ, ಚಂಗಣ್ಣ ಇಲ್ಲದಾಗ ಮಂಗಣ್ಣ ಎಂಬಂತೆ ಅನ್ನದ ಅಗುಳಿನ ಮುಖ ಕೂಡ ನೋಡದೆ ಎಷ್ಟೋ ದಿನಗಳನ್ನು ಹಸಿವಿನಿಂದ ಕಳೆಯುತ್ತಾರೆ. ಈ ಸಮುದಾಯದ ಪುರುಷರಿಗೆ ಉದ್ಯೋಗ ಸಮಸ್ಯೆ ಕಾಡುವುದಿಲ್ಲ ಕಾರಣ ಅವರು ಕೆಲಸ ಮಾಡುವುದೆ ಇಲ್ಲ. ಮಹಿಳೆಯರ ಹತ್ತಿರ ದುಡ್ಡಿದ್ದಾಗ ಕಿತ್ತು ತಿಂದು ಇಲ್ಲದಿದ್ದಾಗ ಮನೆ ವಸ್ತುಗಳನ್ನು ಮಾರಿ ಕುಡಿಯುತ್ತ ಐಷಾರಾಮಿ ಜೀವನ ಸಾಗಿಸುತ್ತಿರುವುದು ಕಂಡುಬರುತ್ತದೆ.

೪.೦.೨. ಬಡತನದ ಮಹಿಳೀಕರಣ

ಬಡತನ ಎಂಬುವುದು ಅತ್ಯಂತ ಕೆಟ್ಟ ಸ್ಥಿತಿ. ಇದು ಆಯ್ಕೆಯೂ ಅಲ್ಲ ಅನಿವಾರ್ಯವೂ ಅಲ್ಲ. ಇಂತಹ ಬಡತನದಿಂದ ಅನೇಕ ಸಂಕಷ್ಟಗಳು ಜೀವನದಲ್ಲಿ ಎದುರಾಗುತ್ತಲೆ ಇರುತ್ತವೆ. ಅದರಲ್ಲೂ ಬಡತನದ ಮಹಿಳೀಕರಣ ಉಂಟಾಗುತ್ತದೆ. ಅಂದರೆ ಮಹಿಳೆಯರು ಮೂಲಭೂತ ಅವಶ್ಯಕತೆಗಳನ್ನು ಈಡೇರಿಸಿಕೊಳ್ಳಲಾಗದಂತಹ ಸ್ಥಿತಿಯನ್ನು ಅಥವಾ ಕನಿಷ್ಠ ಪ್ರಮಾಣದ ಬಡತನದ ಹೊರೆಯನ್ನು ಹೊರಲಾರದಂತಹ ಸ್ಥಿತಿಯನ್ನು ಬಡತನದ ಮಹಿಳೀಕರಣ ಎನ್ನಲಾಗುತ್ತದೆ.। ಈ ಕುಂಚಿ ಕೊರವ ಮಹಿಳೆಯರು ಇಂತಹ ಸ್ಥಿತಿಗೆ ತತ್ತರಿಸಿ ಹೋಗುತ್ತಿದ್ದಾರೆ. ಗಂಡ-ಹೆಂಡಿರಿಬ್ಬರು ದುಡಿದು ಹಣ ತಂದರೂ ಜೀವನಕ್ಕೆ ಸಾಕಾಗದಂತ ಇಂದಿನ ದುಬಾರಿ ಕಾಲಘಟ್ಟದಲ್ಲೂ ಕೂಡ ಮಹಿಳೆಯಷ್ಟೇ ದುಡಿದು ಮನೆಯನ್ನು ನಡೆಸಬೇಕಾದಂತಹ ಸಂದರ್ಭ ಇನ್ನೆಷ್ಟು ಸಂಕಷ್ಟ ತಂದೊಡ್ಡಬಲ್ಲದು. ಈ ಸ್ಥಿತಿಯಿಂದ ಆಹಾರ, ಅನಕ್ಷರತೆ ಆರೋಗ್ಯ, ಅಭದ್ರತೆ, ಆಶ್ರಯ ಎಲ್ಲವೂಗಳಿಂದಲೂ ವಂಚಿತರಾಗುತ್ತಿರುವುದು ಕಂಡುಬರುತ್ತದೆ. ಇಷ್ಟೆಲ್ಲಾ ತೊಂದರೆಗಳ ನಡುವೆಯೇ ಸ್ವಾಭಿಮಾನ, ಹಸಿವು, ಮಾನವಂತಿಕೆ ಯಾವುದನ್ನು ಲೆಕ್ಕಿಸದೆ ಕುಟುಂಬದ ಜವಾಬ್ದಾರಿಯನ್ನು ತನ್ನ ಹೆಗಲ ಮೇಲೆ ಹೊತ್ತು ಯಶಸ್ವಿಯಾಗಿ ಸಾಗಿಸಲು ಹೆಣಗುತ್ತಲೇ ಇರುತ್ತಾಳೆ. ಮಳೆ, ಬಿಸಿಲು, ಚಳಿ ಎನ್ನದೆ ವರ್ಷದ ಎಲ್ಲಾ ತಿಂಗಳಲ್ಲೂ ಊರೂರು, ಓಣಿ-ಓಣಿ, ಮನೆ-ಮನೆ ಸುತ್ತಿ ತನ್ನ ಮಾರಾಟದ ವಸ್ತುಗಳನ್ನು ಮಾರುತ್ತಲೇ ಇರುತ್ತಾಳೆ. ಇಷ್ಟೆಲ್ಲಾ ಶ್ರಮ ವಹಿಸಿದಾಗ್ಯೂ ಆಕೆಗೆ ಸಿಗುವುದೂ ಅಲ್ಪ ಹಣ ಮಾತ್ರ. ಇವರ ಮನೆಯ ಪುರುಷರ ಐಷಾರಾಮಿ ಜೀವನವು ಇವರ ದುಡಿಮೆಯಿಂದಲೇ ಆಗಬೇಕು. ಇಂತಹ ಸ್ಥಿತಿ ಕುಂಚಿ ಕೊರವ ಮಹಿಳೆಯರಿಗೆ ಬಡತನದ ಮಹಿಳೀಕರಣವನ್ನು ತಂದೊಡ್ಡದೆ ಇರಲಾರದು.

ದೈಹಿಕ ಶ್ರಮವನ್ನು ಲೆಕ್ಕಿಸದೆ ಹೊಟ್ಟೆಪಾಡಿಗಾಗಿ ದುಡಿಯುವ ಕುಂಚಿ ಕೊರವ ಮಹಿಳೆಯರ ಕಸರತ್ತು ಒಂದು ಸಾಹಸವೇ ಸರಿ. ಈ ಮಹಿಳೆಯರು ದಿನವಿಡಿ ಅಡ್ಡಾಡಿದರೂ ಬರುವ ಆದಾಯ ೪೦-೫೦ರೂ ಮಾತ್ರ. ಮನೆಯ ಇಡೀ ಜವಾಬ್ದಾರಿ ಗಂಡಸರ ದುರಭ್ಯಾಸಗಳು ಈ ಹಣದಲ್ಲೇ ನಡೆಯಬೇಕು. ಮಕ್ಕಳಿಗೆ ಹೊಟ್ಟೆ ತುಂಬಾ ಊಟ ದೊರಕಿಸಲು ಕೂಡ ಆಗುವುದಿಲ್ಲ. ಅಂದು ದುಡಿದದ್ದು ಅಂದಿಗೆ ಸಾಕಾಗದ ದಿನದಲ್ಲಿ ಮುಂದಿನ ಜೀವನ ನಡೆಸುವುದಾದರೂ ಹೇಗೆ ಎಂಬ ಚಿಂತೆ ಇವರನ್ನು ಕಾಡದಿರದು.

ನಿಮ್ಮ ಈ ಕೆಳಮಟ್ಟದ ಜೀವನ ನಿರ್ವಹಣೆಗೆ ಕಾರಣವೇನು? ಎಂದು ಕೇಳಿದಾಗ

ಕ್ರ.ಸಂ	ಕಾರಣಗಳು	ಮಹಿಳೆಯರ ಸಂಖ್ಯೆ	ಪ್ರತಿಶತ
೧.	ಬಡತನ	೬೦	೭೫
೨.	ಜಾತೀಯತೆ	೪	೫
೩.	ಪುರುಷ ಪ್ರಧಾನತೆ	೧	೧.೨೫
೪.	ಶಿಕ್ಷಣ ಹೊಂದದೆ ಇರುವುದು	೧೫	೧೮.೭೫
	ಒಟ್ಟು	೮೦	೧೦೦

ಈ ಕೋಷ್ಠಕವನ್ನು ಗಮನಿಸಿದಾಗ ಶೇ.೭೫ರಷ್ಟು ಮಹಿಳೆಯರು ಬಡತನವೇ ನಮ್ಮ ಕೆಳಮಟ್ಟದ ಜೀವನ ನಿರ್ವಹಣೆಗೆ ಕಾರಣ ಎಂದು ಹೇಳುತ್ತಾರೆ. ಶೇ.೫ರಷ್ಟು ಮಹಿಳೆಯರು ಜಾತೀಯತೆ ಎಂದರೆ, ಶೇ.೧.೨೫ರಷ್ಟು ಮಹಿಳೆಯರು ಪುರುಷ ಪ್ರಧಾನತೆ ಎಂದು ಹಾಗೂ ಶೇ.೧೮.೭೫ರಷ್ಟು ಮಹಿಳೆಯರು ಶಿಕ್ಷಣ ಪಡೆಯದೆ ಇರುವುದು ನಮ್ಮ ಈ ಕೆಳಮಟ್ಟದ ಜೀವನ ನಿರ್ವಹಣೆಗೆ ಕಾರಣ ಎಂದು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಬಹುತೇಕರು ಬಡತನ ಎಂದು ಹೇಳುತ್ತಾರೆ. ಬಡತನ ನಿವಾರಣೆಯಾದರೆ ಶಿಕ್ಷಣ ಹೊಂದಿ ಎಲ್ಲಾ ಕ್ಷೇತ್ರಗಳಲ್ಲಿ ಮುಂದುವರೆಯಬಹುದು ಎಂಬುದು ಅವರ ಅನಿಸಿಕೆಯಾಗಿದೆ.

೪.೦.೩. ಸಂಪ್ರದಾಯ ಮತ್ತು ಮೂಢನಂಬಿಕೆಗಳು

ಜನ ಜೀವನದಲ್ಲಿ ಸಂಪ್ರದಾಯಗಳ ಪಾತ್ರ ಪ್ರಮುಖವಾದದ್ದು. ಇವು ಜನರ ಬದುಕಿನೊಂದಿಗೆ ಅವಿಭಾಜ್ಯ ಸಂಬಂಧವನ್ನು ಸ್ಥಾಪಿಸಿಕೊಂಡಿರುತ್ತವೆ. ಮನುಷ್ಯನ ಮಾತು ವ್ಯಕ್ತಿತ್ವ ಸಂಪ್ರದಾಯದಲ್ಲಿ ರೂಪುಗೊಳ್ಳುತ್ತದೆ. ಹೀಗಿರುವಾಗ ಈ ಕುಂಚಿ ಕೊರವ ಮಹಿಳೆಯರನ್ನು ನೋಡಿದಾಗ ಅವರ ಸಂಪ್ರದಾಯಗಳು ಪುರುಷರಿಂದ ಅಥವಾ ಪುರುಷ ಪ್ರಧಾನ ವ್ಯವಸ್ಥೆಯಿಂದ ಹೇರಲ್ಪಟ್ಟಂತವುಗಳಾಗಿವೆ. ಪುರುಷರನ್ನು ಮೇಲ್ ದರ್ಜೆಯಲ್ಲಿಟ್ಟು ಮಹಿಳೆಯರನ್ನು ಅವರ ಅಡಿಯಾಳಾಗಿಡುವುದು ಸಂಪ್ರದಾಯವಾದರೆ

ಅದು ಈ ಸಮುದಾಯದ ಒಪ್ಪಿತ ನೆಲೆ ಅಷ್ಟೇ. ಇದಕ್ಕೆ ಮಹಿಳೆಯರು ಒಪ್ಪಿತರಾಗಿ ನಡೆದುಕೊಂಡು ಹೋಗುತ್ತಿರುವುದು, ಪುರುಷ ಪ್ರದಾನ ವ್ಯವಸ್ಥೆ ಕಾಣದ ಕೈಯಂತೆ ಕೆಲಸ ಮಾಡುತ್ತಿರುವುದರ ನಿದರ್ಶವಾಗಿದೆ. ಅನೇಕ ಬಗೆಯ ಸಂಪ್ರದಾಯಗಳು ಮಹಿಳೆಯರಿಗೆ ಸಮಸ್ಯೆಗಳಿಗೀಡು ಮಾಡುತ್ತವೆ. ಇಲ್ಲಿ ಒಂದನ್ನು ಉದಾಹರಿಸಬಹುದಾದರೆ ವಿವಾಹವಾದ ನಂತರ ಮನೆ ತುಂಬಾ ಮಕ್ಕಳಿರಲೇಬೇಕು ಅದರಲ್ಲಿ ಪ್ರತ್ಯೇಕವಾಗಿ ಗಂಡು ಸಂತಾನ ಬೇಕೆ ಬೇಕು ಎಂಬುದು ಸಂಪ್ರದಾಯವಾದರೆ, ಮಹಿಳೆಯರು ಇದಕ್ಕೆ ಬದ್ಧರಾಗಿ ಯಂತ್ರಗಳಾಗಿ ದೈಹಿಕವಾಗಿ ಕುಗ್ಗುತ್ತಾರೆ. ಜೊತೆಗೆ ಆ ಎಲ್ಲಾ ಮಕ್ಕಳನ್ನು ಬೆಳೆಸುವ ಜವಾಬ್ದಾರಿ ಮಹಿಳೆಯರದ್ದೇ ಆಗಿರುತ್ತದೆ. ಇಂತಹ ಬಹು ಒತ್ತಡಗಳಿಂದ ಮಹಿಳೆಯರು ವ್ಯವಸ್ಥಿತವಾಗಿ ಶೋಷಣೆಗೆ ಒಳಗಾಗುತ್ತಲೇ ಇದ್ದಾರೆ.

ಕುಂಚಿ ಕೊರವರಲ್ಲಿ ಕುಟುಂಬ ಯೋಜನೆ ಮಾಡಿಸಿಕೊಳ್ಳುವುದನ್ನು ನಿರಾಕರಿಸುತ್ತಾರೆ. ಅದು ನಮ್ಮ ಸಂಪ್ರದಾಯ ಅಲ್ಲ ಎಂದು ಹೇಳುತ್ತಾರೆ. ಸಾಕುವ ಯೋಗ್ಯತೆ ಇಲ್ಲದಿದ್ದರೂ ಮನೆಯಲ್ಲಿ ಮಕ್ಕಳಿರಬೇಕು. ಇಂತಹ ಸಂಪ್ರದಾಯ ಹೆಚ್ಚಿನ ಹೊರೆಯನ್ನು ಮಹಿಳೆಯರ ಮೇಲೆ ಹೇರದೆ ಇರಲಾರರು.

ಸಂಪ್ರದಾಯಗಳ ಜೊತೆ ಅನೇಕ ಮೂಢನಂಬಿಕೆಗಳು ಈ ಕುಂಚಿ ಕೊರವ ಸಮುದಾಯದ ಮಹಿಳೆಯರನ್ನು ಕಾಡುತ್ತಿವೆ. ಇಂತಹ ಹಲವಾರು ಮೂಢನಂಬಿಕೆಗಳನ್ನು ಇವರು ಬೆಳೆಸಿಕೊಂಡು ಬಂದಿದ್ದಾರೆ. ಮಹಿಳೆಯರಿಗೆ ಸಂಬಂಧಿಸಿದಂತ ಒಂದು ಮೂಢನಂಬಿಕೆಯನ್ನು ಹೇಳುವುದಾದರೆ ಶುಭ ಕಾರ್ಯಗಳಿಗೆ ಹೊರಟಾಗ ವಿಧವೆಯರನ್ನು ಕರೆದುಕೊಂಡು ಹೋಗಬಾರದು ಅಥವಾ ವಿಧವೆ ಎದುರಿಗೆ ಬರಕೂಡದು, ಬಂದರೆ ಹೋಗುವ ಕಾರ್ಯ ಕೈಗೂಡುವುದಿಲ್ಲ ಎಂದು ನಂಬಿದ್ದಾರೆ. ವೈಧವ್ಯ ಪರಿಪಾಲನೆ ಪುರುಷ ಪ್ರಧಾನ ಸಮಾಜ ಆಕೆಗೆ ಹೇರಲ್ಪಟ್ಟಂತದ್ದು ಅವುಗಳ ಆಚರಣೆಯ ಪರಿಪಾಲನೆ ಒಂದು ಬಗೆಯಲ್ಲಿ ಹಿಂಸೆಯನ್ನುಂಟು ಮಾಡಿದರೆ ಇಂತಹ ಮೂಢ ವಿಚಾರಗಳಿಂದ ಆಕೆಯ ವ್ಯಕ್ತಿತ್ವವನ್ನು ಕುಗ್ಗಿಸುವ ಮತ್ತೊಂದು ಕಾರ್ಯವನ್ನು ಸಮುದಾಯ ಮಾಡುತ್ತದೆ.

ಸಂಪ್ರದಾಯ ಮತ್ತು ಮೂಢನಂಬಿಕೆಗಳ ಬೀಡಿನಲ್ಲಿ ಮಹಿಳೆಯರು ಹೇಗೆ ಸುವ್ಯವಸ್ಥಿತವಾಗಿ ನಲುಗಿ ಹೋಗಿದ್ದಾರೆ ಎಂಬುದು ಮೇಲ್‌ನೋಟಕ್ಕೆ ತಿಳಿಯುತ್ತದೆ. ಆದರೆ ಇವೆಲ್ಲ ಸಮಾಜ ಒಪ್ಪಿತ ಆಚರಣೆಗಳೆಂದು ಹೇಳಿ ಪುರುಷ ಪ್ರಧಾನ ಸಮಾಜ ಇವುಗಳಿಗೆ ಪರದೆ ಎಳೆದಿದೆ.

೪.೦.೪. ಭಿಕ್ಷಾಟನೆ

ಭಿಕ್ಷಾಟನೆ ಒಂದು ಸಾರ್ವತ್ರಿಕ ಸಾಮಾಜಿಕ ಸಮಸ್ಯೆಯಾಗಿದ್ದು, ನಮ್ಮ ಭಾರತದಲ್ಲಿ ಇದು ಒಂದು ವಿಶಿಷ್ಟ ಸಾಮಾಜಿಕ ಸಮಸ್ಯೆಯಾಗಿ ಕಾಡುತ್ತಿದೆ. ಭಿಕ್ಷಾಟನೆಯು ವೈಯಕ್ತಿಕ ಹಾಗೂ ಸಾಮಾಜಿಕ ವಿಘಟನೆಯ ಕುರುಹಾಗಿದೆ ಎಂದು ಸಮಾಜಶಾಸ್ತ್ರೀಯ ಅಧ್ಯಯನಗಳು ತಿಳಿಸುತ್ತವೆ. ಆದರೆ ಕುಂಚಿ

ಕೊರವರು ಇದು ನಮ್ಮ ವೃತ್ತಿ ಧರ್ಮ ಎಂದೇ ಭಿಕ್ಷಾಟನೆಯನ್ನು ಸಮರ್ಥಿಸಿಕೊಳ್ಳುತ್ತಾರೆ. ನಮ್ಮ ಸಮುದಾಯಕ್ಕೆ ಅಂಟಿದ ಬಡತನ ಈ ಹಾದಿಯನ್ನು ತುಳಿಯುವಂತೆ ಮಾಡಿದೆ ನಾವೇನು ಆಸೆಬುರುಕರಲ್ಲ ಎಂದು ಸರಳವಾಗಿ ಹೇಳಿಕೆ ನೀಡುತ್ತಾರೆ.

ಭಿಕ್ಷಾಟನೆಯನ್ನು ಸಮಾಜಶಾಸ್ತ್ರೀಯ ಅಧ್ಯಯನದ ಪ್ರಕಾರ ವ್ಯಾಖ್ಯಾನಿಸುವುದಾದರೆ, ೧೯೪೦ರ ಹೈದರಾಬಾದ್ ಭಿಕ್ಷಾಟನಾ ನಿಷೇಧ ಕಾಯಿದೆ ಪ್ರಕಾರ "ತನ್ನ ಜೀವನ ನಿರ್ವಹಣೆಗಾಗಿ ಇಲ್ಲವೇ ಅವಲಂಬಿಸಿರುವವರಿಗಾಗಿ ರಸ್ತೆಗಳಲ್ಲಿ ಇಲ್ಲವೇ ಬಾಗಿಲಿನಿಂದ ಬಾಗಿಲಿಗೆ ನಿಂತು ಇಲ್ಲವೇ ಅಲೆದು, ಇಲ್ಲವೇ ವಾಸದ ಮನೆಯನ್ನು ಪ್ರವೇಶಿಸಿ, ಇಲ್ಲವೇ ವ್ಯಾಪಾರ ಕೇಂದ್ರದ ಬಳಿ ಬೇಡುವುದನ್ನು ಭಿಕ್ಷಾಟನೆ ಎನ್ನುತ್ತೇವೆ"[೧] ಎಂದು ಹೇಳಿದ್ದಾರೆ.

ಈ ಮೇಲಿನ ವ್ಯಾಖ್ಯಾಕ್ಕೆ ಸಂಪೂರ್ಣವಾಗಿ ಬದ್ಧರಾಗಿದ್ದು ಜೊತೆಗೆ ಗಟ್ಟಿ ಮುಟ್ಟಾಗಿದ್ದು ಒಳ್ಳೆಯ ಬಟ್ಟೆಗಳನ್ನು ಹಾಕಿಕೊಂಡರೆ ಯಾರೂ ಭಿಕ್ಷೆ ಹಾಕುವುದಿಲ್ಲ ಎಂಬ ಕಾರಣಕ್ಕೆ ನೋಡಿದವರಿಗೆ ಮರುಕ ಹುಟ್ಟುವಂತೆ ತಲೆಗೆ ಎಣ್ಣೆ ಇಲ್ಲದೆ, ಹರಕು ಬಟ್ಟೆ, ವಾಸನೆಯಿರುವ ಮೈ ಹಾಗೂ ಚಿಕ್ಕ ಮಕ್ಕಳನ್ನು ಬೆನ್ನಿಗೆ ಕಟ್ಟಿಕೊಂಡು ಭಿಕ್ಷೆ ಬೇಡುತ್ತಾರೆ. ಇದು ಭಿಕ್ಷೆ ಪಡೆಯಲು ಅನುಸರಿಸುವ ಚಾಣಾಕ್ಷತನದ ತಂತ್ರ ಜೊತೆಗೆ ಸತ್ಯವೂ ಆಗಿದೆ. ಇರುವ ಸ್ಥಿತಿಯನ್ನು ಮತ್ತಷ್ಟು ಹದಗೆಡಿಸಿಕೊಂಡು ಕುಂಚಿ ಕೊರವ ಮಕ್ಕಳು ಮತ್ತು ಮಹಿಳೆಯರು ಭಿಕ್ಷೆಗೆ ಇಳಿಯುತ್ತಾರೆ.

ಭಿಕ್ಷಾವೃತ್ತಿಯನ್ನು ತಮ್ಮ ಕುಲಕಸುಬು ಎಂದು ಆಚರಿಸಿಕೊಂಡು ಬರುತ್ತಿರುವ ಈ ಕುಂಚಿ ಕೊರವ ಮಹಿಳೆಯರು ಹೊಟ್ಟೆಯ ಜೊತೆ ಹೋರಾಟ ಮಾಡುವವರಾಗಿದ್ದಾರೆ. ನಾವೇನು ಕದ್ದು ತಿನ್ನುವುದಿಲ್ಲ. ಕೊಲೆ ಸುಲಿಗೆ ಮಾಡುವುದಿಲ್ಲ ಬೇಡಿ ಪಡೆದು ತಿನ್ನುತ್ತೇವೆ ಎಂದು ಸ್ವಾಭಿಮಾನಕ್ಕೆ ಧಕ್ಕೆ ಬರದ ರೀತಿಯಲ್ಲಿ ಹೇಳಿಕೊಳ್ಳುತ್ತಾರೆ. ಮಹಿಳೆಯರು ತಾವು ದುಡಿದು ತಂದ ಹಣ ಮನೆಗೆ ಸಾಕಾಗದೆ ಇದ್ದಾಗ ದುಡಿಮೆ ಜೊತೆಗೆ ಭಿಕ್ಷಾಟನೆಗೆ ಇಳಿಯುವುದು ಅನಿವಾರ್ಯ ಎಂಬಂತೆ ಕಾಣುತ್ತದೆ. ಜೊತೆಗೆ ಚಿಕ್ಕ ಮಕ್ಕಳು ಭಿಕ್ಷೆ ಬೇಡಿ ತಂದ ಆಹಾರವನ್ನು ಮನೆಯಲ್ಲಿ ಎಲ್ಲರೂ ತಿನ್ನುತ್ತಾರೆ. ಸಾಮಾನ್ಯವಾಗಿ ಭಿಕ್ಷಾಟನೆಗೆ ಹುಡುಗ-ಹುಡುಗಿಯರಿಬ್ಬರು ಹೋಗುತ್ತಾರೆ. ಆದರೆ ಮಕ್ಕಳು ಬೆಳೆದಂತೆ ಹುಡುಗರು ಆ ವೃತ್ತಿಯಿಂದ ಹಿಂದೆ ಸರಿಯುತ್ತಾರೆ ಮತ್ತು ಹೆಣ್ಣು ಮಕ್ಕಳು ಮಾತ್ರ ಎಲ್ಲಾ ವಯಸ್ಸಿನಲ್ಲೂ ಭಿಕ್ಷೆ ಬೇಡುತ್ತಾರೆ. ಏಕೆ ಹೀಗೆ ಎಂದು ಗಮನಿಸಿದಾಗ ಬೆಳೆದಂತೆ ಹುಡುಗರಲ್ಲಿ ಸ್ವಾಭಿಮಾನದ ಪ್ರಶ್ನೆ ಕಾಡುತ್ತದೆ ಹಾಗೂ ಶಿಕ್ಷಣ ಪಡೆಯಲು ಮುಂದಾಗುತ್ತಾರೆ. ಹುಡುಗಿಯರು ಶಿಕ್ಷಣಕ್ಕಿಂತ ಭಿಕ್ಷಾಟನೆಗೆ, ದುಡಿಮೆಗೆ ಹೆಚ್ಚಿನ ಮಹತ್ವ ನೀಡುತ್ತಾರೆ. ಕಾರಣ ಇಡೀ ಕುಟುಂಬ ನಿರ್ವಹಣೆಯ ಜವಾಬ್ದಾರಿ ಮುಂದೆ ಅವರದ್ದಾಗಿರುತ್ತದೆ. ಭಿಕ್ಷೆ ಬೇಡುವುದರಲ್ಲೂ ಲಿಂಗ ತಾರತಮ್ಯ ಮಾಡುವುದು ಇಲ್ಲಿ ಕಂಡುಬರುತ್ತದೆ.

[illegible]

[illegible]

[illegible]

[illegible]

[illegible]

ಹೆರಿಗೆ ಆದಂತ ಸಂದರ್ಭದಲ್ಲಿ ಹಸು-ಗೂಸುಗಳನ್ನು ಬೆನ್ನಿಗೆ ಸೀರೆಯಲ್ಲಿ ಕಟ್ಟಿಕೊಂಡು ಬೇಡಿ ತಿನ್ನುತ್ತಾರೆ. ಬಾಣಂತಿ ಆರೈಕೆಯೂ ಇಲ್ಲದೆ ಹೊಟ್ಟೆ ಪಾಡಿಗಾಗಿ ಮನೆ ಮನೆ ಅಲೆಯುತ್ತಾರೆ. ಮಹಿಳೆಯರೆ ದುಡಿದು ಮನೆ ನಡೆಸುವಾಗ ಅವರೆ ನೆಲ ಹಿಡಿದರೆ ತಂದು ಹಾಕುವವರು ಯಾರು? ಎಂದು ದುಡಿಮೆಗೆ ಪರ್ಯಾಯವಾಗಿ ಭಿಕ್ಷೆ ಬೇಡಿ ಹೊಟ್ಟೆಯ ಜೊತೆಗೆ ಮನೆಯವರ ಹೊಟ್ಟೆ ಕೂಡ ಭರಿಸುವುದು ಕಂಡುಬರುತ್ತದೆ. ಅವಿಭಕ್ತ ಕುಟುಂಬಗಳಲ್ಲೋ ಹೇಗೋ ನಡೆಯುತ್ತದೆ. ಆದರೆ ವಿಭಕ್ತ ಕುಟುಂಬದಲ್ಲಿ ಮಹಿಳೆಯರು ಹೆರಿಗೆ ಆದರೆ, ಅವರ ಹಸುಗೂಸಿನ ಕೂಗು ಹೇಳತೀರದು. ಆಗ ದುಡಿಯುವ ಚೈತನ್ಯ ಇಲ್ಲದೆ ಭಿಕ್ಷೆ ಬೇಡುವುದನ್ನು ಅನಿವಾರ್ಯವಾಗಿಸಿಕೊಳ್ಳುತ್ತಾರೆ. ಮಹಿಳೆಯರು ಇಷ್ಟೊಂದು ಸಂಕಷ್ಟದ ಸ್ಥಿತಿಯಲ್ಲೂ ಮನೆಯ ಪುರುಷರು ಸಂಬಂಧವಿಲ್ಲದವರಂತೆ ನಿರ್ಲಕ್ಷ ತೋರುವುದು ಅಥವಾ ತನ್ನ ಜವಾಬ್ದಾರಿ ಅವುಗಳಲ್ಲ ಎಂಬಂತೆ ನುಣುಚಿಕೊಳ್ಳುವುದು ಕಂಡುಬರುತ್ತದೆ.

೪.೦.೫. ಅಸ್ಪೃಶ್ಯತೆ

ಭಾರತೀಯ ಜನತೆಯಲ್ಲಿ ಅನಿಷ್ಠ ಪದ್ಧತಿಯಾಗಿ ಕಾಡುವ ಸಮಸ್ಯೆ ಎಂದರೆ ಅಸ್ಪೃಶ್ಯತೆ, ಇದಕ್ಕೆ ಎಲ್ಲಾ ಕೆಳಜಾತಿ ಎಂದು ಕರೆಯಿಸಿಕೊಳ್ಳುವ ಜನರು (ಸ್ತ್ರೀ ಪುರುಷರಿಬ್ಬರೂ) ಒಳಗಾಗಿದ್ದಾರೆ. ಸಂಪ್ರದಾಯಾನುಸರಣೆಯ ಅಥವಾ ವೃತ್ತಿಗೆ ಸಂಬಂಧಿಸಿದಂತಹ ಪರಿಶುದ್ಧ ಮತ್ತು ಅಪರಿಶುದ್ಧತೆಯ ವಿಚಾರಗಳೇ ಅಸ್ಪೃಶ್ಯತೆಯ ಕಲ್ಪನೆ ಮತ್ತು ಆಚರಣೆಗೆ ಕಾರಣವಾಗಿವೆ. ಅತ್ಯಂತ ಕೀಳೆಂದು ತಿಳಿದ ಹಂದಿಯನ್ನು ಸಾಕುವ, ತಿನ್ನುವ ಮತ್ತು ಮನೆಯ ಹೊರಗಿನ ಸ್ಥಾನ ಕೊಟ್ಟಿರುವ ಕಸಬರಿಗೆಗಳ ತಯಾರಿಕೆಯನ್ನು ಕುಂಚಿ ಕೊರವರು ಮಾಡುತ್ತಿರುವುದರಿಂದ, ವೃತ್ತಿಗೆ ಸಂಬಂಧಿಸಿದ ಅಪರಿಶುದ್ಧತೆಯ ವಿಚಾರಗಳು ಇವಾದ್ದರಿಂದ ಈ ಕುಂಚಿ ಕೊರವರನ್ನು ಸಹ ಅಸ್ಪೃಶ್ಯತೆಗೆ ತಳ್ಳಲ್ಪಡಲಾಗಿದೆ ಎಂದು ಹೇಳಬಹುದು.

ಅಸ್ಪೃಶ್ಯತೆಯ ಚಹರೆ ಕೂಡಾ ಇಲ್ಲದಂತೆ ಕಿತ್ತು ಹಾಕಲು ಶ್ರಮವಹಿಸಿದ ಮಹಾತ್ಮ ಗಾಂಧೀಜಿಯವರು ಅಭಿಪ್ರಾಯ ಪಟ್ಟಿರುವಂತೆ -

"ಅಸ್ಪೃಶ್ಯತೆಯು ಹಿಂದೂ ಸಮಾಜದ ಶರೀರವನ್ನು ಪೀಡಿಸುತ್ತಿರುವ ಕುಷ್ಠರೋಗದ ಹುಣ್ಣಿನಂತಿದೆ" ಜೊತೆಗೆ "ಅಸ್ಪೃಶ್ಯತೆಯು ಜಾತಿಯ ಅತ್ಯಂತ ತಿರಸ್ಕಾರಾರ್ಹವಾದ ಅಭಿವ್ಯಕ್ತಿಯಾಗಿದೆ"[೨] ಎಂದು ವ್ಯಕ್ತಪಡಿಸುತ್ತಾರೆ.

ಇಂತಹ ಕಾರಣಗಳಿಂದಾಗಿಯೇ ಕುಂಚಿ ಕೊರವರು ನಗರದ ಹೊರ ವಲಯದಲ್ಲಿ ವಾಸಿಸುತ್ತಿದ್ದಾರೆ. ಅಸ್ಪೃಶ್ಯತೆಯಿಂದ ಶಿಕ್ಷಣ ಪಡೆಯುವಲ್ಲಿ ಹಿಂದೇಟಾಕುತ್ತಿದ್ದಾರೆ. ಇಂದಿನ ಆಧುನಿಕ ಯುಗದಲ್ಲೂ ಕೂಡ ಅಸ್ಪೃಶ್ಯತೆ ಚಾಲ್ತಿಯಲ್ಲಿದೆ ಎಂದರೆ ಅದು ನಮ್ಮೆಲ್ಲರಿಗೂ ನಾಚಿಗೇಡಿನ ಸಂಗತಿಯಾಗಿದೆ. ಕುಂಚಿ ಕೂರವ

ಮಹಿಳೆಯರು ದುಡಿಯಲೆಂದು ಹೋದ ಸಂದರ್ಭದಲ್ಲಿ ಅವರನ್ನು ನೋಡುವ ರೀತಿಯೇ ಬೇರೆ. ಅಂಗಳದಲ್ಲಿ ಸಾಮಾನುಗಳನ್ನು ಇಳಿಸಿ ಖರೀದಿ ಮಾಡಿದ ವಸ್ತುಗಳನ್ನು ನೀರಿನಿಂದ ತೊಳೆದು ಒಳಗೆ ತೆಗೆದುಕೊಳ್ಳುತ್ತಾರೆ. ಅನ್ನ ನೀರನ್ನು ಕೊಡಬೇಕಾದರೂ ಎತ್ತರದಿಂದ ಅವರಿಗೆ ತಾಗದಂತೆ ಹಾಕುತ್ತಾರೆ. ಬಡತನ, ಅನಕ್ಷರತೆ ಒಂದೆಡೆಯಾದರೆ ಸ್ವಾಭಿಮಾನಕ್ಕೆ ಧಕ್ಕೆ ನೀಡುವ ಅಸ್ಪೃಶ್ಯತೆ ಇನ್ನೊಂದೆಡೆ. ಕುಂಚಿ ಕೊರವ ಪುರುಷರು ಅಲ್ಪಸ್ವಲ್ಪ ಶಿಕ್ಷಣ ಪಡೆದು ಒಳ್ಳೆಯ ಬಟ್ಟೆಗಳನ್ನು ಹಾಕಿಕೊಂಡು ಹೋಗುವುದರಿಂದ ಸಾಮಾನ್ಯವಾಗಿ ಕುಂಚಿ ಕೊರವರೆಂದು ಗುರುತಿಸಿಕೊಳ್ಳುವುದಿಲ್ಲ. ತಮ್ಮ ಸಾಂಪ್ರದಾಯಿಕ ದುಡಿಮೆಯನ್ನೂ ಸಹ ಇವರು ಮಾಡದೇ ಇರುವುದರಿಂದ ಕುಂಚಿ ಕೊರವರೆಂದು ಗುರುತಿಸಿಕೊಳ್ಳದೆ ಎಲ್ಲರೊಂದಿಗೆ ಬೆರೆತು ಹೋಗುತ್ತಾರೆ. ಹಾಗೆಂದು ಪುರುಷರು ಅಸ್ಪೃಶ್ಯತೆಯಿಂದ ಮುಕ್ತರಾಗಿದ್ದಾರೆಂದು ಅರ್ಥವಲ್ಲ. ಅದನ್ನು ಅನುಭವಿಸುವ ಪ್ರಮಾಣ ಮಹಿಳೆಯರಿಗಿಂತ ಕಡಿಮೆಯೇ ಇದೆ ಎಂದು ಹೇಳಬಹುದು.

ಸಾಮಾನ್ಯವಾಗಿ ಜಾತ್ರೆ, ಸಂತೆಯ ಸಂದರ್ಭಗಳಲ್ಲಿ ದೇವಸ್ಥಾನಗಳಲ್ಲಿ ಇವರು ಇತರೇ ಎಲ್ಲಾ ವರ್ಗಗಳ ಜನರೊಂದಿಗೆ ಬೆರೆತು ಹೋಗುತ್ತಾರೆ. ಆದರೆ ಪ್ರತ್ಯೇಕವಾಗಿ ಜನಾಂಗಿಕವಾಗಿ ಗುರುತಿಸಿಕೊಂಡಾಗ ಈ ಮಹಿಳೆಯರು ಅಸ್ಪೃಶ್ಯತೆಯ ಹಿಡುಗಿಗೆ ಬಲಿಯಾಗುತ್ತಿರುವುದು ಕಂಡುಬರುತ್ತದೆ.

೪.೦.೬. ವಲಸೆ

ಯಾವುದೇ ಒಂದು ಸಮುದಾಯಕ್ಕೆ ಭದ್ರತೆ ನೆಲೆ ಬೇಕು. ಅದಿಲ್ಲದೆ ಹೋದಾಗ ಸಾಮಾನ್ಯವಾಗಿ ಭದ್ರತೆ, ಸ್ಥಿರತೆ ಮಾಯವಾಗಿ ಅಲೆಮಾರಿತನ ಪ್ರಾರಂಭವಾಗುತ್ತದೆ. ಮನುಷ್ಯನಿಗೆ ಮುಖ್ಯವಾಗಿ ಬೇಕಾಗಿರುವುದು ಒಂದು ಮನೆ, ಊಟ, ಉಡಲು ಬಟ್ಟೆ ಇವೆ ಮೂಲಭೂತ ಅವಶ್ಯಕತೆಗಳು. ಇದು ಕೂಡ ದೊರಕದಿದ್ದಾಗ ಇವುಗಳ ಪೂರೈಕೆಗಾಗಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಲಸೆ ಹೋಗುವುದು ಅನಿವಾರ್ಯವಾಗುತ್ತದೆ. ಇದಕ್ಕೆ ಗಂಡಸರು, ಹೆಂಗಸರು, ಮಕ್ಕಳು ಯಾರು ಹೊರತಲ್ಲ. "Migration is a Shift in the place of residence for some length of time." ಅಂದರೆ ಈ ಸ್ಥಾನಾಂತರ ಎಂಬುದು ಸ್ವಲ್ಪ ಕಾಲಾವಾದರೂ ಆಗಿರಬಹುದು, ಅನುಕೂಲ ಪರಿಸ್ಥಿತಿಯ ಮೂಲಕ ಈ ಕಾಲಾವಧಿ ಮುಂದಕ್ಕೆ ಬೆಳೆದು ಸ್ಥಿರವಾಗಲೂಬಹುದು[೩] ಎಂದು ಹೇಳುತ್ತಾರೆ. ವಲಸೆ ಹೋದ ಸ್ಥಳ ಖಾಯಂ ಸ್ಥಳವಾಗಿ ಕೂಡ ರೂಪುಗೊಳ್ಳಬಹುದು. ಆದರೆ ಕುಂಚಿ ಕೊರವರಲ್ಲಿ ವಲಸೆ ಹೋಗುವವರು ಮಹಿಳೆಯರಿದ್ದು, ತನ್ನ ಗಂಡನ ಮನೆಯನ್ನು ಬಿಟ್ಟು ತಾನು ಹೋದ ಕಡೆ ನೆಲೆಸಿದರೆ ಗಂಡ ಬಂದು ಅಲ್ಲಿ ನೆಲೆಸಲು ನಿರಾಕರಿಸುತ್ತಾನೆ. ಕಾರಣ ಸಮುದಾಯದಲ್ಲಿ ಮಹಿಳೆಯ ನೆಲೆ ಪುರುಷ ರೂಪಿತ ವ್ಯವಸ್ಥೆಯಾಗಿದೆ. ಗಂಡಸರು ಇಲ್ಲದ ಕುಟುಂಬಗಳು ಮಾತ್ರ ಬೇರೆಡೆ ನೆಲೆಸುವ ಯೋಚನೆ ಮಾಡಬಹುದು. ಇದು ಕುಂಚಿ ಕೊರವ ಸಮುದಾಯದ ನಡಾವಳಿಗಳಾಗಿವೆ.

ಕುಂಚಿ ಕೊರವ ಸಮುದಾಯದ ಮಹಿಳೆಯರು ಸಂಪೂರ್ಣ ಅಲೆಮಾರಿಗಳೇ ಆಗಿದ್ದಾರೆ. ಇದಕ್ಕೆ ಕಾರಣ ಕಿತ್ತು ತಿನ್ನುವ ಬಡತನ, ನಿರಕ್ಷರತೆ, ತಮ್ಮ ಮನೆ ಗಂಡಸರಿಂದ ಅನುಭವಿಸುವ ದೌರ್ಜನ್ಯ, ಜಾತೀಯತೆ ಮುಂತಾದವುಗಳೆಂದು ಹೇಳಬಹುದು. ತಮ್ಮ ಉಪಜೀವನಕ್ಕೆ ಕುಲ ಕಸುಬನ್ನೇ ಆಧಾರವಾಗಿಟ್ಟುಕೊಂಡು ಪರಂಪರಾಗತವಾಗಿ ನಂಬಿ ಮಾಡುತ್ತಿದ್ದ ಕಸುಬುಗಳಿಂದ ಜೀವನ ನಿರ್ವಹಣೆ ಕಷ್ಟದಾಯಕವಾದಾಗ ವಲಸೆ ಪ್ರಾರಂಭಿಸಿದರು. ಕುಲಕಸುಬನ್ನೇ ರೂಢಿಸಿಕೊಂಡು ಜೀವನ ನಡೆಸುವವರು ಈ ಕುಂಚಿ ಕೊರವ ಮಹಿಳೆಯರಾಗಿದ್ದಾರೆ. ಇದರಿಂದ ಹೊಟ್ಟೆ ತುಂಬದಿದ್ದಾಗ ಬದುಕನ್ನು ಸುಧಾರಿಸಿಕೊಳ್ಳುವ ಕನಸುಗಳನ್ನು ಹೊತ್ತು ಬೇರೆಡೆ ವ್ಯಾಪಾರಕ್ಕೆ ಹೋಗುತ್ತಾರೆ. ಅಲೆಮಾರಿ ಜೀವಿಗಳಾಗಲು ಗಟ್ಟಿತನ ಬೇಕು ತನ್ನದಲ್ಲದ ಪರಿಸರಕ್ಕೆ ಹೊಂದಿಕೊಂಡು ಪರಿಸ್ಥಿತಿಗನುಗುಣವಾಗಿ ಜೀವನ ನಿರ್ವಹಣೆ ಮಾಡಬೇಕು. ಕುಂಚಿ ಕೊರವ ಮಹಿಳೆಯರು ಇದಕ್ಕೆ ಒಗ್ಗಿದ್ದಾರೆ. ತಮ್ಮದಲ್ಲದ ಸಮುದಾಯ, ಭಾಷೆ, ಸಂಸ್ಕೃತಿಗಳೊಂದಿಗೆ ಇವರಿಗೆ ಹೊಂದಾಣಿಕೆ ಕಷ್ಟಸಾಧ್ಯವಾಗುತ್ತದೆ. ಇಂತದರ ನಡುವೆಯೂ ಸಂದರ್ಭಕ್ಕನುಗುಣವಾಗಿ ಹೊಂದಿಕೊಂಡು ಬಾಳಲು ಹೋರಾಟ ನಡೆಸುತ್ತಾರೆ. ತಮ್ಮ ಜೀವನದ ಬಹುಪಾಲು ಅವಧಿಯನ್ನು ಊರೂರು ಸುತ್ತುವುದರಲ್ಲೇ ಕಳೆದುಬಿಡುತ್ತಾರೆ.

ಕುಂಚಿ ಕೊರವ ಮಹಿಳೆಯರು ತಮ್ಮ ಕುಲಕಸುಬನ್ನೇ ಆಧಾರವಾಗಿಟ್ಟುಕೊಂಡು ವಲಸೆ ಹೋದ ಕಡೆಯಲೆಲ್ಲಾ ಕಸುಬರಿಗೆ (ವಿವಿಧ ಬಗೆಯ ಪೋರಿಕೆಗಳು), ಸಿಂಬಿ, ಚಾಪೆ, ಹಣ್ಣಿ ಮಾಡಿ ಮಾರುತ್ತಾರೆ. ಹಾಗೂ ಆರ್ಥಿಕವಾಗಿ ಸ್ವಲ್ಪ ಸುಧಾರಿಸಿದವರು ರೆಡಿಮೆಡ್ ವಸ್ತುಗಳಾದ ಪ್ಲಾಸ್ಟಿಕ್ ಕೊಡ, ಬುಟ್ಟಿ ತಂದು ಮಾರುತ್ತಾರೆ. ಆರ್ಥಿಕವಾಗಿ ಸ್ವಾವಲಂಬಿಗಳಾಗಿರುವ ಇವರು ವಲಸೆಗೆ ತಾವೇ ಮುಂದಾಗುತ್ತಾರೆ. ಅಲೆಮಾರಿಗಳಲ್ಲಿರುವ ಸಾಹಸಿ ಪ್ರವೃತ್ತಿ, ಶ್ರಮ ಜೀವನದ ಬದ್ಧತೆ, ಆತ್ಮ ವಿಶ್ವಾಸ, ಬಿಕ್ಕಟ್ಟು ಬಂದಾಗ ಅದನ್ನು ಎದುರಿಸುವ ಛಲ ಹೊಂದಿದವರಾಗಿದ್ದಾರೆ. ಆದರೆ ತಮ್ಮಲ್ಲಿರುವ ಈ ಎಲ್ಲಾ ಗುಣಗಳನ್ನು ತಾವೇ ಅರಿಯದೇ ಹೋಗಿದ್ದಾರೆ.

ವಲಸೆ ಹೋದ ಸಂದರ್ಭದಲ್ಲಿ ಅವರು ಶಾಲೆ, ಗುಡಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ರಾತ್ರಿ ಮಲಗಿ ಬೆಳಗಿನ ಹೊತ್ತು ಓಣಿ ಓಣಿ ಸುತ್ತಿ ವ್ಯಾಪಾರ ಮಾಡುವುದು ಕಂಡುಬರುತ್ತದೆ. ಬೆಳಿಗ್ಗೆ ೧೦-೫ ರವರೆಗೆ ಶಾಲೆ ಮುಗಿದ ನಂತರ ಅಲ್ಲಿ ಹೋಗಿ ಮಲಗುತ್ತೇವೆ. ನೀರು ಇದ್ದ ಕಡೆ ಜಳಕ ಮಾಡಿ, ಭಿಕ್ಷೆ ಬೇಡಿದ ಅನ್ನ ತಿಂದು ಜೀವನ ಸಾಗಿಸುತ್ತೇವೆ ಎಂದು ಹೇಳುತ್ತಾರೆ. ವಲಸೆ ಹೋದ ಸಂದರ್ಭದಲ್ಲಿ ಯಾರಾದರೂ ಗಂಡಸರು ನಿಮ್ಮೊಂದಿಗೆ ಕೆಟ್ಟದಾಗಿ ನಡೆದುಕೊಂಡಾಗ ಏನೂ ಮಾಡುತ್ತೀರಾ? ಎಂದರೆ ಅಲ್ಲೇ ನಾಲ್ಕು ಹೊಡೆಯುತ್ತೇವೆ ಇಲ್ಲ ನಮ್ಮ ಮನೆಯ ಪುರುಷರನ್ನು ಕರೆದುಕೊಂಡು ಹೋಗಿ ಹೊಡೆಸುತ್ತೀವಿ ಎಂದು ನಿರ್ಭಯವಾಗಿ ನುಡಿಯುತ್ತಾರೆ. ಇದು ಗಟ್ಟಿತನ ಪ್ರವೃತ್ತಿ ಎನ್ನದೆ ಇನ್ನೇನೆಂದು ಹೆಸರಿಸಲಾದಿತು.

ಕುಂಚ ಕೊರವ ಮಹಿಳೆಯರು ಇತರೇ ಸಮುದಾಯದ ಜೀವಿಗಳಿಗಿಂತ (ಒಂದೆಡೆ ಸ್ಥಿರವಾಗಿ ನೆಲೆಯೂರಿದವರು) ವಿಭಿನ್ನ ರೀತಿಯಲ್ಲಿ ಬದುಕು ನಡೆಸುತ್ತಿರುವ ಇವರ ಜೀವನ ಒಂದು ಹೋರಾಟವೇ ಸರಿ. ಊರಿಲ್ಲದೆ, ಸೂರಿಲ್ಲದೆ, ನೆಲವಿಲ್ಲದೆ ಅತಂತ್ರತೆಯಲ್ಲೂ ಈ ಮಹಿಳೆಯರು ಜೀವನ ನಡೆಸುವುದು ಒಂದು ಸೋಜಿಗದ ಸಂಗತಿಯಾಗಿದೆ. ಮಳೆ, ಗಾಳಿ, ಎನ್ನದೆ ಜೀವನ ನಿರ್ವಹಣೆಯನ್ನು ಮುಂಚೂಣಿ ಯಲ್ಲಿಟ್ಟುಕೊಂಡು ಕ್ಷಣ-ಕ್ಷಣಕ್ಕೂ ವಿಭಿನ್ನ ಅನುಭವಗಳೊಂದಿಗೆ ಬಾಳುತ್ತಿದ್ದಾರೆ. ಏಕೆ ನಿಮ್ಮ ಕುಲ ಕಸುಬನ್ನೇ ಆಧಾರವಾಗಿಟ್ಟುಕೊಂಡು ವ್ಯಾಪಾರ ಕೈಗೊಳ್ಳುತ್ತೀರಿ, ಬೇರೆ ಬೇರೆ ರೀತಿಯ ಕೆಲಸಗಳಲ್ಲಿ ತೊಡಗಿ ನಿಮ್ಮ ಸ್ಥಿತಿ-ಗತಿ ಸುಧಾರಿಸಿಕೊಳ್ಳಬಾರದೇಕೆ ಎಂದು ಪ್ರಶ್ನಿಸಿದರೆ, "ಜೀವ ಕೊಟ್ ಜೀವನ ನಡ್ಸ್ ಕುಲಕಸ್ಬ ಮರತ್ರೆಂಗ್ರಿ' ಎಂದು ಹೊರ ಜಗತ್ತಿನ ಅರಿವಿಲ್ಲದೆ ನುಡಿದು ಬಿಡುತ್ತಾರೆ. ಕುಲಕಸುಬಿನ ಅಭಿಮಾನವಂತು ಇವರಲ್ಲಿ ಹೇಳತೀರದಾಗಿದೆ.

ವಲಸೆ ಹೋದ ಸಂದರ್ಭದಲ್ಲಿ ಈ ಮಹಿಳೆಯರ ಮುಟ್ಟು, ಬಸಿರು, ಹೆರಿಗೆಯ ಸಮಸ್ಯೆಗಳಂತೂ ಹೇಳತೀರದವು. ವಲಸೆ ಹೋದಲ್ಲೇ ಹೆರಿಗೆಗಳಾದಂತಹ ನಿದರ್ಶನಗಳೂ ಕೂಡ ಇವೆ. ಇವು ಆರೋಗ್ಯದ ಮೇಲೆ ಬಹಳ ಪರಿಣಾಮವನ್ನುಂಟು ಮಾಡಿವೆ. ಆದರೆ ಹಸಿವಿನ ಕೂಗು ಎಂತಹ ನೋವುಗಳನ್ನಾದರೂ ಸಹಿಸಿಕೊಳ್ಳುವಂತೆ ಮಾಡುತ್ತದೆ ಎಂಬುದಕ್ಕೆ ಇವರೇ ಉದಾಹರಣೆಯಾಗಿದ್ದಾರೆ. ಆಶಯಗಳ ಗೂಡಿಲ್ಲದೆ, ಹೊಟ್ಟೆಗೆ ಹಿಟ್ಟಿಲ್ಲದೆ, ನೆರಳಿಗೆ ಸೂರಿಲ್ಲದೆ, ತಮ್ಮ ಕುಲಕಸುಬಿನ ಅಭಿಮಾನಕ್ಕೆ ಸಾವಿಲ್ಲದೆ, ಹೊತ್ತೊತ್ತಿನ ಊಟಕ್ಕೂ ಪರದಾಟ ನಡೆಸುವ ಈ ಕುಂಚಿ ಕೊರವ ಮಹಿಳೆಯರ ಜೀವನ ಭಿನ್ನತೆಯಲ್ಲಿ ವಿಭಿನ್ನತೆ ಎಂದು ಹೇಳಿದರೆ ತಪ್ಪಾಗಲಾರದು.

ಕುಂಚಿ ಕೊರವ ಮಹಿಳೆಯರು ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿ ತಯಾರಿಸುವ ವಸ್ತುಗಳು



ಹಗ್ಗ




ಸಿಂಬಿ





ಬಿದರಿನ ಪುಟ್ಟಿ






ವಿವಿಧ ಬಗೆಯ ಕಸಬರಕೆಗಳು








ಚಾಪೆ

ಕುಂಚೆ ಕೊರವರ ಸಾಕು ಪ್ರಾಣಿ(ಹಂದಿ)



೪.೧. ಆರ್ಥಿಕ ಸಮಸ್ಯೆಗಳು

೪.೧.೦. ಮಹಿಳೆಯರ ಶ್ರಮದ ವಿನಿಯೋಗ ಮತ್ತು ದುಡಿಮೆಯಲ್ಲಿನ ಸಮಸ್ಯೆಗಳು

ತಾವು ಮಾಡುತ್ತಿರುವ ಕಾಯಕದಲ್ಲಿಯೇ ನಂಬಿಕೆ ಇಟ್ಟು ಜೀವನ ನಡೆಸುತ್ತಿರುವ ಮಹಿಳೆಯರ ಸ್ಥಿತಿ ಆರ್ಥಿಕವಾಗಿ ಸ್ವಾವಲಂಬನೆ ಪಡೆದಿದ್ದರೂ, ಪುರುಷ ಪ್ರಧಾನ ವ್ಯವಸ್ಥೆಯ ಮೌಲ್ಯಗಳಿಂದ ಮಾತ್ರ ಹೊರಬರಲಾಗಿಲ್ಲ. ಜೀವನ ನಿರ್ವಹಣೆಗೆ ಈ ಸಾಂಪ್ರದಾಯಿಕ ಕುಲಕಸುಬಗಳೆ ಮಾರ್ಗವಾಗಿವೆ. ಹೊಟ್ಟೆ ಬಟ್ಟೆಯನ್ನು ತುಂಬಿಸಿಕೊಳ್ಳಲು ಅಧಿಕ ಶ್ರಮದಾಯಕ ಕೆಲಸಗಳಲ್ಲಿ ತೊಡಗುವುದು ಇವರಿಗೆ ಅನಿವಾರ್ಯವಾಗಿ ಹೋಗಿದೆ. ಮನೆಯ ಗಂಡಸರ ಪಾತ್ರ ಇದರಲ್ಲಿ ಬಹಳ ಕಡಿಮೆಯೇ ಇದ್ದು ಕುಡಿತ, ಜೂಜು, ಮುಂತಾದ ಕೆಟ್ಟ ಚಟಗಳಿಗೆ ಬಲಿಯಾಗುವುದು ಕಂಡುಬರುತ್ತದೆ. ಸಂಪ್ರದಾಯಿಕ ದುಡಿಮೆ ಆಧುನಿಕತೆಯ ತಂತ್ರಜ್ಞಾನದ ಸ್ಪರ್ಶ ಪಡೆಯದೆ ಇರುವುದರಿಂದ ಶ್ರಮದ ವಿನಿಯೋಗ ಹೆಚ್ಚು ಪ್ರಮಾಣದಲ್ಲೇ ವ್ಯಯವಾಗುತ್ತದೆ.

ಒಂದು ದಿನಕ್ಕೆ ಈ ಮಹಿಳೆಯರು ದುಡಿಯುವ ಸಮಯ

ಕ್ರ.ಸಂ.	ಅವಧಿ ಮಹಿಳೆಯರ	ಸಂಖ್ಯೆ	ಪ್ರತಿಶತ
೧.	೧-೩	೮	೧೦
೨.	೩-೬	೨೬	೩೨.೫೦
೩.	೬-೯	೧೨	೧೫
೪.	೯-೧೨	೩೪	೪೨.೫೦
ಒಟ್ಟು		೮೦	೧೦೦

ಈ ಕೋಷ್ಟಕವನ್ನು ಗಮನಿಸಿದಾಗ ಶೇ.೧೦ ರಷ್ಟು ಮಹಿಳೆಯರು ೧-೮ ತಾಸುಗಳು ದುಡಿಯುವುದು ಕಂಡುಬರುತ್ತದೆ. ಇದರಲ್ಲಿ ಬಹುತೇಕ ಹುಡುಗಿಯರೇ ಇದ್ದಾರೆ. ಶಾಲೆ ಮುಗಿಸಿಕೊಂಡು ಅಥವಾ ಹೋಗುವ ಮುನ್ನ ಹಾಗೂ ರಜೆ ದಿನಗಳಲ್ಲಿ ಕಸಬರಿಗೆ ಕಟ್ಟುವುದು, ಹಾಳೆ ಚೀಲ ಆರಿಸಲು ಹೋಗುತ್ತಾರೆ. ಶೇ.೩೨.೫೦ರಷ್ಟು ಮಹಿಳೆಯರು ೩-೬ ತಾಸುಗಳ ಕಾಲ ದುಡಿಯುತ್ತಾರೆ. ಶೇ.೧೫ರಷ್ಟು ಮಹಿಳೆಯರು ೫-೯ ತಾಸು ದುಡಿಯುತ್ತಾರೆ. ಹಾಗೂ ಶೇ.೪೨.೫೦ರಷ್ಟು ಮಹಿಳೆಯರು ೯-೧೨ ತಾಸುಗಳ ಅವಧಿ ದುಡಿಮೆಯಲ್ಲಿ ತೊಡಗಿರುವುದು ಕಂಡುಬರುತ್ತದೆ. ಇವರು ಹಳ್ಳಿ ಹಳ್ಳಿಗೆ ಹೋಗಿ ವ್ಯಾಪಾರ ಮಾಡುತ್ತಾರೆ. ಹತ್ತಿರವಿದ್ದ ಹಳ್ಳಿಗಳಿಗೆ ಕಾಲುನಡಿಗೆಯಲ್ಲಿ ಸಾಗಿ ವ್ಯಾಪಾರ ಮಾಡುತ್ತಾರೆ.

[illegible]

[illegible]

[illegible]

[illegible]

ಅವರವರ ದೈಹಿಕ ಶ್ರಮಕ್ಕನುಗುಣವಾಗಿ ದುಡಿಮೆಯ ಅವಧಿಯನ್ನು ವಿಸ್ತರಿಸಿಕೊಳ್ಳುತ್ತಾರೆ. ಜೊತೆಗೆ ಮನೆಯ ಕೆಲಸ ಮತ್ತು ಸಂತಾನಾಭಿವೃದ್ಧಿ ಈ ಎಲ್ಲಾ ಕೆಲಸಗಳ ಹೊರೆ ಆಕೆಯನ್ನು ಮಾಂಸದ ಮುದ್ದೆಯನ್ನಾಗಿಸಿದೆ. ವಿಶ್ರಾಂತಿಯ ಮಾತೇ ಆಕೆಗೆ ಇಲ್ಲದಾಗಿದೆ. ಜೀವನ ಎಂಬ ನಾಲ್ಕು ದಿನಗಳ ಯಾತ್ರೆಯಲ್ಲಿ ನೋವು, ನಲಿವು, ದುಗುಡ, ದುಮ್ಮಾನಗಳು ಏಟು ಎದಿರೇಟುಗಳನ್ನು ಹಾಕಿ ಮಹಿಳೆಯರನ್ನು ಜರ್ಝರಿತಗೊಳಿಸಿಬಿಟ್ಟಿವೆ. ಆಪ್ತರ ಸಾಂತ್ವಾನಕ್ಕಾಗಿ ಅತ್ತಿತ್ತ ತಿರುಗಿ ನೋಡುತ್ತಿದ್ದಾರೆ. ತಮ್ಮ ಗೊಂದಲವನ್ನು ಯಾರಾದರೂ ಶಮನಗೊಳಿಸುವರೇ? ಎಂದು ಸಹಾಯಕ್ಕಾಗಿ ಹಾತೊರೆಯುತ್ತಿದ್ದಾರೆ. ಇವರ ಜೀವನವನ್ನು ಉತ್ತಮ ಪಡಿಸುವ ಕಾರ್ಯವನ್ನು ಇಂದು ಸರ್ಕಾರವೇ ಮಾಡಬೇಕಾಗಿದೆ. ಇವರ ದುಡಿಮೆಯಲ್ಲಿ ಬದಲಾವಣೆಗಳನ್ನು ತಂದು ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವ ಕಾರ್ಯ ಶೀಘ್ರಗತಿಯಲ್ಲಾಗಬೇಕಿದೆ.

ದುಡಿಮೆಯಲ್ಲಿನ ಸಮಸ್ಯೆಗಳು

ಸಾಮಾನ್ಯವಾಗಿ ಅನೇಕ ತೊಡಕುಗಳನ್ನು ಈ ಕುಂಚಿ ಕೊರವ ಮಹಿಳೆಯರು ದುಡಿಮೆಯಲ್ಲಿ ಅನುಭವಿಸುತ್ತಿದ್ದಾರೆ. ಅಸಂಘಟಿತರಾಗಿರುವುದರಿಂದ ತಮ್ಮ ದುಡಿಮೆಗೆ ಒಂದು ವ್ಯವಸ್ಥಿತ ಭದ್ರತೆ ಹಾಕಿಕೊಳ್ಳುವಲ್ಲಿ ವಿಫಲರಾಗಿರುವುದು ಕಂಡುಬರುತ್ತದೆ. ಹಾಗಾದರೆ ಸಂಘಟಿತ ವಲಯ ಎಂದರೇನು, ಅದರ ಲಕ್ಷಣಗಳು ಹೇಗೆ ಇರುತ್ತವೆ ಎಂದರೆ ಸಂವಿಧಾನ ಮತ್ತು ಸರ್ಕಾರದ ಕಾಯಿದೆಯ ಚೌಕಟ್ಟಿನೊಳಗೆ ಕಾರ್ಯ ನಿರ್ವಹಿಸುತ್ತ, ಉದ್ಯೋಗ ಭದ್ರತೆ ಇರುವ, ಕಾರ್ಮಿಕರು ಸಂಘಟನೆಗೊಂಡು ಜೊತೆಗೆ ಉತ್ಪಾದನೆಯಲ್ಲಿ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡಿರುವವರಾಗಿರುತ್ತಾರೆ. ಇಲ್ಲಿ ಮಹಿಳೆಯರ ಪ್ರಮಾಣ ಶೇಕಡಾ ೧೦ರಷ್ಟು ಮಾತ್ರ ಕಂಡುಬರುತ್ತದೆ. ಇದಕ್ಕೆ ವಿರುದ್ಧವಾದ ಲಕ್ಷಣಗಳನ್ನು ಹೊಂದಿರುವ ವಲಯವೇ ಅಸಂಘಟಿತ ಕ್ಷೇತ್ರ. ಈ ಕ್ಷೇತ್ರದಲ್ಲಿ ಮಹಿಳೆಯರು ಶೇಕಡಾ ೯೦ರಷ್ಟಿರುವುದು ಕಂಡುಬರುತ್ತದೆ. ಕುಂಚಿ ಕೊರವ ಮಹಿಳೆಯರು ಈ ಅಸಂಘಟಿತ ಕ್ಷೇತ್ರದ ವ್ಯಾಪ್ತಿಯೊಳಗೆ ಬರುತ್ತಾರೆ. ಇದರಲ್ಲಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅವುಗಳೆಂದರೆ-

೧. ಕುಂಚಿ ಕೊರವ ಮಹಿಳೆಯರು ಮಾಡುವ ಕೆಲಸಗಳು ಸ್ಥಳೀಯವಾಗಿದ್ದು, ಇವರು ಸಾಂಪ್ರದಾಯಿಕ ದುಡಿಮೆ ಹಾಗೂ ಸಾಂಪ್ರದಾಯಿಕ ಮನೋಭಾವಗಳಿಂದ ಬಂಧಿಸಲ್ಪಟ್ಟಿದ್ದಾರೆ.

೨. ಇವರ ದುಡಿಮೆಗೆ ಕೆಲಸದ ಭದ್ರತೆ, ಕಾನೂನಿಗೆ ರಕ್ಷಣೆ ಹಾಗೂ ಇತರ ಸೌಲಭ್ಯಗಳಾದ ವಿಮೆ, ವೈದ್ಯಕೀಯ ಸೌಲಭ್ಯ, ಪಿಂಚಣಿ ಅಪಘಾತ ಪರಿಹಾರಗಳು ಯಾವುವು ಇಲ್ಲದಾಗಿವೆ.

೩. ಇವರು ಅಸಂಘಟಿತರಾಗಿರುವುದರಿಂದ ಸಂವಿಧಾನ ನೀಡಿದ ಕೆಲಸದ ಸ್ಥಳದಲ್ಲಿಯ ಆರೋಗ್ಯಕರ ಹಾಗೂ ಮಾನವೀಯ ವಾತಾವರಣವನ್ನು ಕಲ್ಪಿಸಿಕೊಳ್ಳುವ ಮಾತೆ ಇಲ್ಲ. ಮಹಿಳೆಯರು ದುಡಿಯುವ

ಸ್ಥಳದಲ್ಲಿ ಶಬ್ದ, ಧೂಳು, ಮಾಲಿನ್ಯ ಮತ್ತು ವಿಷಪೂರಿತ ಬೇರುಗಳೊಂದಿಗಿನ ಒಡನಾಟ ಇವ್ಯಾವುದರ ರಕ್ಷಣಾ ವ್ಯವಸ್ಥೆ ಇಲ್ಲದಂತಾಗಿದೆ.

೪. ಆಧುನಿಕ ಯಂತ್ರೋಪಕರಣಗಳ ಬಳಕೆ ಇಲ್ಲದೇ ಇರುವುದರಿಂದ ಅಧಿಕ ಕೆಲಸದ ಹೊರೆ ದೈಹಿಕ ಶ್ರಮವನ್ನುಂಟು ಮಾಡಿ ಅನಾರೋಗ್ಯಕ್ಕೀಡು ಮಾಡುತ್ತದೆ.

೫. ಸರ್ಕಾರ ಇವರಿಗೆ ಯಾವುದೇ ಪ್ರತ್ಯೇಕ ಸೇವಾ ಸೌಲಭ್ಯಗಳನ್ನು ಅಥವಾ ಇಂತಹ ಸಾಂಪ್ರದಾಯಿಕ ದುಡಿಮೆಗೆ ಉತ್ತೇಜನ ನೀಡದೆ ಹೋಗಿದೆ.

೬. ಈ ಕುಂಚಿ ಕೊರವ ಮಹಿಳೆಯರು ಅನುಭವಿಸುತ್ತಿರುವ ಮತ್ತೊಂದು ಸಮಸ್ಯೆ ಎಂದರೆ ಅನಕ್ಷರತೆ ಮತ್ತು ಅಜ್ಞಾನ. ಉತ್ಪಾದನೆ, ವ್ಯಾಪಾರ, ಸ್ವಯಂ ಉದ್ಯೋಗ ಮುಂತಾದ ಚಟುವಟಿಕೆಗಳಲ್ಲಿ ತೊಡಗಲು ಅಗತ್ಯವಾದ ತರಬೇತಿ ಇಲ್ಲದಾಗಿದೆ.

೭. ಅಸಂಘಟಿತವಾಗಿ ದುಡಿಯುತ್ತಿರುವ ಈ ಮಹಿಳೆಯರು ಪ್ರತಿದಿನ ಅಧಿಕ ಗಂಟೆಗಳ ಕಾಲ ದುಡಿಮೆಯಲ್ಲಿ ನಿರತರಾಗಿರುತ್ತಾರೆ. ಹಳೆ ಕಾಲದ ಜ್ಞಾನವನ್ನುಪಯೋಗಿಸಿ ಸಾಂಪ್ರದಾಯಿಕ ದುಡಿಮೆಯಲ್ಲಿ ತೊಡಗುವುದರ ಜೊತೆ ಕೌಟುಂಬಿಕ ಜವಾಬ್ದಾರಿಯನ್ನು ಸಹ ನಿರ್ವಹಿಸುತ್ತಿರುವುದು ದೈಹಿಕವಾಗಿ ಮತ್ತು ಮಾನಸಿಕವಾಗಿ ಅಧಿಕ ಒತ್ತಡ ತರುತ್ತದೆ.

೪.೧.೧. ಮಾರುಕಟ್ಟೆ ಸಮಸ್ಯೆ

ಕುಂಚಿ ಕೊರವ ಮಹಿಳೆಯರು ತಯಾರಿಸಿದ ವಸ್ತುಗಳಿಗೆ ಮಾರುಕಟ್ಟೆ ವ್ಯವಸ್ಥೆ ಇಲ್ಲದಾಗಿದೆ. ಆದ್ದರಿಂದ ಮನೆ ಮನೆಗೆ ಹೋಗಿ ಮಾರುವಂತಹ ವ್ಯವಸ್ಥೆಯನ್ನು ರೂಢಿಸಿಕೊಂಡಿದ್ದಾರೆ. ಒಂದು ವೇಳೆ ಮಾರುಕಟ್ಟೆ ನಿರ್ಮಾಣ ಮಾಡಿ ಬೆಲೆ ನಿಗಧಿಪಡಿಸಿ ಮಾರಿದ್ದೇ ಆದರೆ ಅವುಗಳ ವ್ಯಾಪಾರ ಆಗುವುದಿಲ್ಲ ಕಾರಣ ಆಧುನಿಕತೆ. ಸಾಂಪ್ರದಾಯಿಕವಾಗಿ ಸೃಷ್ಟಿ ಮಾಡುವಂತಹ ವಸ್ತುಗಳಿಗಿಂತ ಆಧುನಿಕವಾಗಿ ತಯಾರಾದಂತಹ ಅದೇ ವಸ್ತುಗಳು ಹೆಚ್ಚು ಆಕರ್ಷಣೀಯವಾಗಿದ್ದು ಮಾರುಕಟ್ಟೆಯಲ್ಲಿ ಹೆಚ್ಚು ಸ್ಥಾನಗಳನ್ನು ಭದ್ರ ಪಡಿಸಿಕೊಳ್ಳುತ್ತವೆ. ಆದ್ದರಿಂದ ಈ ಕುಂಚಿ ಕೊರವ ಮಹಿಳೆಯರು ತಯಾರಿಸಿದ ವಸ್ತುಗಳಿಗೆ ಬೆಲೆ ಇಲ್ಲದಂತಾಗಿದೆ. ತಮ್ಮ ವಸ್ತುಗಳನ್ನು ಮನೆ ಮನೆಗೆ ಹೋಗಿ ಮಾರುವುದರ ಜೊತೆಗೆ ಕಡಿಮೆ ಬೆಲೆಗೆ ಮಾರಿ ಬರುವಂತಹ ಸ್ಥಿತಿ ನಿರ್ಮಾಣವಾಗಿದೆ.

ಮಾರುಕಟ್ಟೆಯಲ್ಲಿ ದೊರೆಯುವ ಅದೇ ವಸ್ತುಗಳ ಬೆಲೆ ಹೆಚ್ಚಿದ್ದರೂ ಅವುಗಳನ್ನೇ ಕೊಳ್ಳುತ್ತಾರೆ. ಕಾರಣ ಗುಣಮಟ್ಟ ಸಾಧಾರಣವಾಗಿದ್ದರೂ ಕೂಡ ಕೊಂಡುಕೊಳ್ಳುವವರ ಅಂತಸ್ಥಿನ ಪ್ರತೀಕ ಅದಾಗಿರುತ್ತದೆ. ಇದರಿಂದ ಹೊಡೆತ ಅನುಭವಿಸುವವರು ಮಾತ್ರ ಈ ಬಡ ಕುಂಚಿ ಕೊರವ ಮಹಿಳೆಯರಾಗಿದ್ದಾರೆ.

೪.೧.೨. ಚಿಕ್ಕ ಹಿಡುವಳಿದಾರರು

ಕೃಷಿ ಕೆಲಸ ಗೊತ್ತಿಲ್ಲವಾದರೂ ತುಂಡು ಭೂಮಿಗಳನ್ನು ಹೊಂದಿರುವುದು ಕಂಡುಬರುತ್ತದೆ. ಹೊಲದ ಕೆಲಸಗಳನ್ನು ನಿಭಾಯಿಸುತ್ತಾರೆ, ಹಾಗೆಂದು ಬೇರೆಯವರ ಹೊಲಕ್ಕೆ ದುಡಿಯಲು ಹೋಗುವುದಿಲ್ಲ. ಈ ತುಂಡು ಭೂಮಿಯಲ್ಲಿ ಏನು ತಾನೇ ಬೆಳೆದು ಉಣ್ಣಲು ಸಾಧ್ಯವಾಗುತ್ತದೆ. ವ್ಯವಸಾಯ ಎಂದರೆ ಅದಕ್ಕೆ ಪೂರಕವಾಗುವ ದನ, ಕರು, ಹೊಲದ ಉಳುಮೆಗೆ ಬೇಕಾಗುವ ಸಾಮಾನುಗಳು ಎಲ್ಲವನ್ನು ಹೊಂದಿರಬೇಕು. ಆದರೆ ಇವರು ಇವ್ಯಾವುದರ ಒಡೆತನವನ್ನು ಸಾಧಿಸಿಲ್ಲ. ಕೇವಲ ಹೆಸರಿಗೆ ಮಾತ್ರ ತುಂಡು ಹೊಲ ಇದೆ ಎಂದು ಹೇಳಿಕೊಳ್ಳುತ್ತಾರೆ.

ಹೊಲ ಹೊಂದಿದವರ ಬಗ್ಗೆ ಮಾಹಿತಿ ಪಡೆದುಕೊಳ್ಳಲು ಯಾವ ಬಗೆಯ ಆಸ್ತಿಯನ್ನು ಹೊಂದಿದ್ದೀರಿ ಎಂದು ಕೇಳಿದಾಗ

ಕ್ರ.ಸಂ.	ವಿವರ ಮಹಿಳೆಯರ	ಸಂಖ್ಯೆ	ಪ್ರತಿಶತ
೧.	ಮನೆ	೩೦	೩೭.೫೦
೨.	ಹೊಲ	೩	೩.೭೫
೩.	ಮನೆ + ಹೊಲ	೨	೨.೫೦
೪.	ಚರ ಆಸ್ತಿಗಳು	-	-
೫.	ಯಾವುದು ಇಲ್ಲ	೪೫	೫೬.೨೫
ಒಟ್ಟು		೮೦	೧೦೦

ಈ ಕೋಷ್ಠಕವನ್ನು ಗಮನಿಸಿದಾಗ ಶೇ.೩೭.೫೦ರಷ್ಟು ಮಹಿಳೆಯರು ಮನೆಯನ್ನು, ಶೇ.೩.೭೫ ರಷ್ಟು ಮಹಿಳೆಯರು ಹೊಲವನ್ನು ಶೇ.೨.೫೦ರಷ್ಟು ಮಹಿಳೆಯರು ಹೊಲ ಮತ್ತು ಮನೆಯನ್ನು ಹೊಂದಿರುವುದು ಹಾಗೂ ಶೇ.೫೬.೨೫ರಷ್ಟು ಮಹಿಳೆಯರು ಯಾವುದೇ ಆಸ್ತಿ-ಪಾಸ್ತಿ ಹೊಂದದೆ ಇರುವುದನ್ನು ಕಾಣಬಹುದು. ಇದನ್ನು ಗಮನಿಸಿದಾಗ ಕೆಲವೇ ಮಹಿಳೆಯರು ಭೂಮಿಯನ್ನು ಹೊಂದಿರುವುದು ಕಂಡುಬರುತ್ತದೆ. ಆದರೆ ಇವು ಮನೆಯ ಯಜಮಾನನ ಹೆಸರಿನಲ್ಲಿದ್ದು, ಮಹಿಳೆಯರು ಸಾಮಾನ್ಯವಾಗಿ ನನ್ನದೆಂದು ಹೇಳಿಕೊಳ್ಳುತ್ತಾರೆ. ಅವರ ಇವು ಹೆಸರಿನಲ್ಲಿರುವುದು ನಮ್ಮದೇ ಎಂದು ಹೇಳುವುದು ಪುರುಷ ಪ್ರಾಧಾನತೆಯ ಕುರುಹು ಎಂದು ಹೇಳಬಹುದು. ಪುರುಷ ಅಧೀನದಲ್ಲಿಟ್ಟು ಕೊಂಡಿದ್ದಾನೆಂದು ಅರಿಯದ ರೀತಿಯಲ್ಲಿ ಮಹಿಳೆಯರನ್ನು ಸಂಪ್ರದಾಯಗಳ ಹೆಸರಿನಲ್ಲಿ ನಂಬಿಸಿರುತ್ತಾರೆ.

೪.೧.೩. SHGಗಳ ಪಾತ್ರ (ಮಹಿಳಾ ಸ್ವ-ಸಹಾಯ ಗುಂಪುಗಳು)

ಮಹಿಳಾ ಸಬಲೀಕರಣ ಸಂದರ್ಭದಲ್ಲಿ SHGಗಳ ಪಾತ್ರ ತುಂಬ ಮಹತ್ವದ್ದಾಗಿವೆ. ೯ನೇ ಪಂಚವಾರ್ಷಿಕ ಯೋಜನೆಯಲ್ಲಿ ಹಿಂದಿನ ಡ್ವಾಕ್ರಾ ಯೋಜನೆ ಬದಲಿಯಾಗಿ ಜಾರಿಗೊಳಿಸಿದಂತೆ ಯೋಜನೆ ಇದಾಗಿದೆ. ಈ ಸಂಘಟನೆಯು (ಗುಂಪು) ಮಹಿಳಾ ಸಶಕ್ತೀಕರಣಕ್ಕೆ ಗುರುತರವಾದ ಕೊಡುಗೆ ನೀಡುವುದು ಸಾಧ್ಯವೆಂದು ತಿಳಿದು ವಿಶ್ವಬ್ಯಾಂಕ್ ಕೂಡಾ ಮಹಿಳಾ SHG(self helped group)ಗಳ ರಚನೆ, ಬೆಳವಣಿಗೆ ಮತ್ತು ಕಾರ್ಯಾಚರಣೆಯನ್ನು ಉತ್ತೇಜಿಸುತ್ತಿದೆ. ಒಂದು ನಿರ್ದಿಷ್ಟ ಪ್ರದೇಶದ, ನಗರ ಅಥವಾ ಹಳ್ಳಿಗಳಲ್ಲಿ ಸ್ವ-ಸಹಾಯ ಗುಂಪುಗಳ ರಚನೆ ಮಾಡಿಕೊಂಡು ದಕ್ಷ ಕಾರ್ಯಾಚರಣೆ ಮೂಲಕ ಮಹಿಳೆಯರು ತಮ್ಮ ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ನೆಲೆಗಳಲ್ಲಿ ತಮ್ಮ ಸ್ಥಾನ ಭದ್ರಪಡಿಸಿಕೊಳ್ಳಲು ಅನುಕೂಲವಾಗಿದೆ.

ಈ ನಿಟ್ಟಿನಲ್ಲಿ ಕುಂಚಿ ಕೊರವ ಸಮುದಾಯದಲ್ಲೂ ಒಂದೇ ಅಭಿರುಚಿಯುಳ್ಳ, ಸಮಾನ ವಯಸ್ಕರು ಸೇರಿ SHGಗಳನ್ನು ಕಟ್ಟಿಕೊಂಡಿದ್ದಾರೆ. NGOsಗಳ ಮಾರ್ಗದರ್ಶನದಲ್ಲಿ ಇವುಗಳನ್ನು ನಿರ್ಮಾಣ ಮಾಡಿಕೊಳ್ಳುತ್ತಿದ್ದಾರೆ. ಆದರೆ ಇವು ಯಾವುವು ೬ ತಿಂಗಳಿಗಿಂತ ಹೆಚ್ಚಿಗೆ ನಡೆದೆ ಇಲ್ಲ. ಇನ್ನು ಇದರಿಂದ ಬರುವ ಲಾಭಗಳ ಮಾತೆಲ್ಲಿ. ಮೊದಲನೆಯದಾಗಿ ಈ ಮಹಿಳೆಯರಿಗೆ ಓದು, ಬರಹ ಬರುವುದಿಲ್ಲ. ಈ ಗುಂಪು ರಚನೆ ಮಾಡಿಕೊಂಡರೆ ಕಡ್ಡಾಯವಾಗಿ ೯ ಪುಸ್ತಕಗಳನ್ನು ಬರೆಯಬೇಕು. ಇದು ಅಸಾಧ್ಯ ಹಾಗೂ ದುಡಿಯಲೆಂದು ವಲಸೆ ಹೋಗುವ ಇವರಿಗೆ ಪ್ರತಿವಾರ SHG ನಿಯಮದ ಪ್ರಕಾರ ಮಿಟಿಂಗ್ ಸೇರಲು ಆಗುವುದಿಲ್ಲ. ದುಡಿದು ಬಂದ ಹಣ ಮನೆಯ ಖರ್ಚಿಗೆ ಸಾಕಾಗದಂತಹ ಸಂದರ್ಭದಲ್ಲಿ ಗುಂಪಿಗೆ ನಿರ್ದಿಷ್ಟ ಹಣ ಪಾವತಿ ಮಾಡಲು ಕಷ್ಟವಾಗುತ್ತದೆ. ಇಷ್ಟು ಸಮಸ್ಯೆಗಳ ಮಧ್ಯೆ SHGಗಳು ಸರಿಯಾಗಿ ನಡೆಯಲು ಹೇಗೆ ತಾನೇ ಸಾಧ್ಯ. ಸಮಸ್ಯೆ ಏನೇ ಇದ್ದರೂ SHGಗಳನ್ನು ಕಟ್ಟುವ ಕಾರ್ಯ ನಿಂತಿಲ್ಲ. ಇವುಗಳಷ್ಟೇ ಅಲ್ಲದೇ ಬೇರೆ ಯಾವುದೇ ತರಹದ ಗುಂಪು ರಚಿಸಿಕೊಂಡಿದ್ದಾರೆ ಎಂಬುದರ ಬಗ್ಗೆ ಈ ಕೆಳಗಿನ ಕೋಷ್ಟಕ ಮಾಹಿತಿ ನೀಡುತ್ತದೆ.

ವಿವಿಧ ಬಗೆಯ ಸಂಘಗಳಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ

ಕ್ರ.ಸಂ.	ವಿವಿಧ ಸಂಘಗಳು	ಮಹಿಳೆಯರ ಸಂಖ್ಯೆ	ಪ್ರತಿಶತ
೧.	ಸ್ವ ಸಹಾಯ ಗುಂಪುಗಳು	೧೩	೧೬.೨೫
೨.	ಸ್ತ್ರೀ ಶಕ್ತಿ ಗುಂಪುಗಳು	೮	೧೦
೩.	ಮಹಿಳಾ ಸಂಘಗಳು	-	-
೪.	ಯಾವುದು ಇಲ್ಲ	೫೯	೭೩.೭೫
	ಒಟ್ಟು	೮೦	೧೦೦

[illegible]

[illegible]

[illegible]

ಈ ಕೋಷ್ಠಕವನ್ನು ಗಮನಿಸಿದಾಗ ಶೇ.೧೬.೨೫ರಷ್ಟು ಮಹಿಳೆಯರು ಸ್ವ ಸಹಾಯ ಗುಂಪುಗಳನ್ನು ನಿರ್ಮಾಣ ಮಾಡಿಕೊಂಡಿದ್ದು, ಶೇ.೧೦ರಷ್ಟು ಮಹಿಳೆಯರು ಸ್ತ್ರೀ ಶಕ್ತಿ ಗುಂಪುಗಳನ್ನು ಅಂಗನವಾಡಿ ಕಡೆಯವರಿಂದ ಮಾಡಿಕೊಂಡಿದ್ದಾರೆ. ಹಾಗೂ ಇತರೇ ಯಾವುದೇ ಮಹಿಳಾ ಸಂಘಗಳನ್ನು ಕಟ್ಟಿಕೊಳ್ಳದ ಮಹಿಳೆಯರ ಸಂಖ್ಯೆ ಶೇ.೭೩.೭೫ರಷ್ಟು ಕಂಡುಬರುತ್ತದೆ.

ಗುಂಪುಗಳ ನಿರ್ಮಾಣವೇನೊ ಆಗಿವೆ, ಆದರೆ ಇವು ಎಷ್ಟರ ಮಟ್ಟಿಗೆ ಯಶಸ್ವಿಯಾಗುತ್ತವೆ ಎಂದು ಕಾದು ನೋಡಬೇಕು. ಇದುವರೆಗೆ ಯಾವ ಗುಂಪುಗಳೂ ಯಶಸ್ವಿಯಾಗಿ ನಡೆಯದ ಕಾರಣ ಸರ್ಕಾರದ ಯಾವ ಯೋಜನೆಯ ಲಾಭವನ್ನು ಪಡೆದಿಲ್ಲ. ಇನ್ನು ಮುಂದಾದರೂ ಗುಂಪುಗಳಿಂದ ಲಾಭ ಪಡೆದುಕೊಂಡು ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಆರೋಗ್ಯದ ದೃಷ್ಟಿಯಿಂದ ಸಬಲೀಕರಣ ಹೊಂದುತ್ತಾರಾ ಎಂದು ಕಾದು ನೋಡಬೇಕು. ಇಂತಹ ಸಮುದಾಯಗಳ ಅಭಿವೃದ್ಧಿಗೆ NGOsಗಳು ಸಾಕಷ್ಟು ಶ್ರಮವಹಿಸಬೇಕಾಗಿದೆ. ತೀರಾ ಕೆಳಮಟ್ಟದ ಜೀವನ ಸಾಗಿಸುತ್ತಿರುವ ಇವರಿಗೆ ಇಂತಹ ಸಂಘ ಸಂಸ್ಥೆಗಳೇ ಆಶಾ ದೀಪವಾಗಬೇಕು.

೪.೨. ರಾಜಕೀಯ ಸಮಸ್ಯೆಗಳು

ಮಾನವ ಇತಿಹಾಸದಲ್ಲಿ, ಸಮಾಜದ ವ್ಯವಸ್ಥೆಯ ಜೊತೆಯಲ್ಲಿಯೇ ರಾಜಕಾರಣವೂ ಪ್ರಾರಂಭವಾಯಿತೆಂದು ಕಂಡುಬರುತ್ತದೆ. ಸಮಾಜದ ವಿವಿಧ ಜನ ಸಮೂಹ, ಜನರ ಜೀವನ ಶೈಲಿ, ಆಚಾರ-ವಿಚಾರ, ಆಹಾರ-ವಿಹಾರ, ನಡೆ-ನುಡಿ, ಉದ್ಯೋಗ, ವ್ಯವಸಾಯ ಹೀಗೆ ಎಲ್ಲದರ ಸಂಕೀರ್ಣವೇ ಒಂದು ದೇಶ. ಇಂತಹ ದೇಶದ ಜನಸಂಖ್ಯೆಯಲ್ಲಿ ಅರ್ಧದಷ್ಟು ಮಹಿಳೆಯರ ಸಂಖ್ಯೆಯೇ ಇದೆ. ಸ್ತ್ರೀ-ಪುರುಷರಿಬ್ಬರೂ ಸಹ ಜೀವನ ನಡೆಸುತ್ತಲೇ ಬಂದಿದ್ದಾರೆ. ಬಹಳ ಹಿಂದೆ ಮಾತೃ ಪ್ರಧಾನ ಸಮಾಜ ವ್ಯವಸ್ಥೆಯಲ್ಲಿ ಮಹಿಳೆಯರ ಸ್ಥಾನಮಾನಗಳು ಹಿರಿದಾಗಿದ್ದವು. ಆದರೆ ಕ್ರಮೇಣ ಮಾತೃ ಪ್ರಧಾನ ವ್ಯವಸ್ಥೆ ಕುಂಠಿತವಾಗುತ್ತಾ ಪುರುಷ ಪ್ರಧಾನ ವ್ಯವಸ್ಥೆಯೇ ಪ್ರಪಂಚದ ಎಲ್ಲಾ ಭಾಗದಲ್ಲಿಯೂ ಸ್ಥಿರಗೊಳ್ಳುತ್ತಾ ಬಂದಿತು. ಬೇರೆ ಎಲ್ಲಾ ರಂಗಗಳಂತೆ ರಾಜಕೀಯದಲ್ಲೂ ಮಹಿಳೆಯರ ಸ್ಥಾನ ಕ್ಷೀಣವಾಗುತ್ತಲೇ ಬಂದಿತು.

ರಾಜಕೀಯವು ಕೂಡ ಜ್ಞಾನವನ್ನು ಹೆಚ್ಚಿಸಿ ಮಹಿಳೆಯರನ್ನು ಸಶಕ್ತಗೊಳಿಸುವ ಒಂದು ಅಂಶ. ಮಹಿಳೆಯರನ್ನು ಅಭಿವೃದ್ಧಿಪಡಿಸುವುದರ ಮೂಲಕ ಅವರನ್ನು ಕಲ್ಯಾಣಕ್ಕಿಳಿಸುವುದಲ್ಲದೆ ಅವರಿಗೆ ಸ್ವಂತ ನಿರ್ಣಯಗಳನ್ನು ತೆಗೆದುಕೊಳ್ಳುವ ಕೌಶಲ್ಯವನ್ನು ರಾಜಕೀಯ ಕಲ್ಪಿಸುತ್ತದೆ. ಸಶಕ್ತೀಕರಣದ ಒಲವು ಅಭಿವೃದ್ಧಿಯ ತಾರ್ಕಿಕ ಅಂಶವಾಗಿದೆ. ಸ್ವಾತಂತ್ರ್ಯ, ಸಮಾನತೆಯ ತಳಹದಿಯಾಗಿದೆ. ಸಶಕ್ತೀಕರಣಕ್ಕೆ ಬೇಕಾಗುವ ಲಿಂಗ ಸಮಾನತೆ, ಆರ್ಥಿಕತೆ ಮತ್ತು ಸಾಮಾಜಿಕತೆ ಇತ್ಯಾದಿ ಅಂಶಗಳು ಸಂವಿಧಾನದ

[illegible]

[illegible]

[illegible]

[illegible]

[illegible]

[illegible]

ಮೂಲಭೂತ ಹಕ್ಕುಗಳಲ್ಲಿ ಕಂಡುಬರುತ್ತದೆ. ಆದರೆ ಇವುಗಳು ಪಾಲನೆ ನಡೆಯುತ್ತವೆಯೇ? ಇಲ್ಲ ಇವು ಕೇವಲ ಸಂವಿಧಾನದ ಪುಸ್ತಕದ ಪುಟಗಳ ಬರಹಗಳಾಗಿ ಮಾತ್ರ ಪೋಷಣೆಗೊಳ್ಳುತ್ತಿವೆ. ಈ ನಿಟ್ಟಿನಲ್ಲಿ ಕುಂಚಿ ಕೊರವ ಮಹಿಳೆಯರನ್ನು ನೋಡಿದಾಗ ಸಂಪೂರ್ಣವಾಗಿ ಔಪಚಾರಿಕ ಮತ್ತು ಅನೌಪಚಾರಿಕ ರಾಜಕೀಯದಿಂದ ಹಿಂದುಳಿದಿರುವುದು ಕಂಡುಬರುತ್ತಿದೆ. ಇನ್ನು ಹಲವಾರು ಅಂಶಗಳು ಈ ಮಹಿಳೆಯರನ್ನು ರಾಜಕೀಯದಿಂದ ಹೊರಗುಳಿಯುವಂತೆ ಮಾಡಿವೆ.

೪.೨.೦. ರಾಜಕೀಯ ಜ್ಞಾನದ ಕೊರತೆ

ಕೊರವ ಮಹಿಳೆಯರ ಬದುಕು ಅಂದಂದಿನ ದಿನ ದುಡಿದು ಹೊಟ್ಟೆ ತುಂಬಿಸಿಕೊಂಡರೆ ಸಾಕಾಗಿರುತ್ತದೆ. ಅದರಾಚೆಗೆ ಯಾವ ಸಂಗತಿಗಳ ಬಗ್ಗೆಯೂ ಅವರು ತಲೆ ಕೆಡಿಸಿಕೊಳ್ಳುವುದಿಲ್ಲ. ರಾಜಕೀಯದಲ್ಲಿ ಸ್ಪರ್ಧಿಸುವುದಾಗಲಿ ಅಥವಾ ಮತಚಲಾಯಿಸುವುದಾಗಲಿ ಯಾವುದರ ಪರಿವೇ ಅವರಿಗಿಲ್ಲ. ಈ ಸಮುದಾಯದ ಪುರುಷರಿಗೆ ಅಲ್ಪಸ್ವಲ್ಪ ರಾಜಕೀಯ ಜ್ಞಾನವುಂಟು. ಚುನಾವಣೆಗಳಲ್ಲಿ ಸ್ಪರ್ಧಿಸಿರುವುದುಂಟು ಆದರೆ ಗೆದ್ದ ನಿದರ್ಶನಗಳಿಲ್ಲ. ಮತ ಚಲಾಯಿಸುವಲ್ಲಿಯಾದರೂ ತುಸು ಜ್ಞಾನ ಪಡೆದುಕೊಂಡಿದ್ದಾರೆ. ಆದರೆ ಮಹಿಳೆಯರಿಗೆ ಇವುಗಳಾವುದರ ಜ್ಞಾನವೇ ಇಲ್ಲ. ರಾಜಕೀಯಕ್ಕೆ ಪ್ರಪಂಚದ ಜ್ಞಾನ ಮುಖ್ಯ ಎಂದಾದರೆ, ಕುಂಚಿ ಕೊರುವ ಮಹಿಳೆಯರು ಊರೂರು ಸುತ್ತಿ ದುಡಿಯುತ್ತಿರುತ್ತಾರಲ್ಲ ಆಗ ಜ್ಞಾನ ಪಡೆಯಬಹುದು ಎಂದು ಹೇಳಿದರೆ, ಅವರ ದುಡಿಮೆ, ಒಡನಾಟ ಕೇವಲ ವಸ್ತುಗಳ ಮಾರಟ ಹಾಗೂ ಅಂದಿನ ಊಟಕ್ಕೆ ಸೀಮತವಾಗಿರುತ್ತದೆ. ಮಹಿಳೆಯರಿಗೆ ಯಾರನ್ನು ಚುನಾಯಿಸಬೇಕು? ಏಕೆ ಚುನಾಯಿಸಬೇಕು? ಎಂಬ ಜ್ಞಾನ ಇರುವುದಿಲ್ಲ. ಚುನಾಯಿಸಿದರೆ ಅಭ್ಯರ್ಥಿಗಳು ಏನು ಆಗುತ್ತಾರೆ, ಯಾವ ಕೆಲಸ ಮಾಡುತ್ತಾರೆ ಎಂಬುದರ ಕಲ್ಪನೆ ಈ ಮಹಿಳೆಯರಿಗೆ ಇಲ್ಲದಾಗಿದೆ.

ರಾಜಕೀಯದ ಬಗ್ಗೆ ನಿಮಗೆ ತಿಳುವಳೀಕೆ ಇದೆಯೇ ಎಂದು ಕೇಳಿದಾಗ

ಕ್ರ.ಸಂ.	ವಿಷಯ	ಮಹಿಳೆಯರ ಸಂಖ್ಯೆ	ಪ್ರತಿಶತ
೧.	ಹೌದು	೩	೩.೭೫
೨.	ಇಲ್ಲ	೭೭	೯೬.೨೫
ಒಟ್ಟು		೮೦	೧೦೦

ಈ ಕೋಷ್ಟಕದ ಪ್ರಕಾರ ರಾಜಕೀಯದ ಬಗ್ಗೆ ಜ್ಞಾನ ಹೊಂದಿರುವ ಮಹಿಳೆಯರ ಸಂಖ್ಯೆ ಶೇ.೩.೭೫ರಷ್ಟು ಹಾಗೂ ಶೇ. ೯೬.೨೫ರಷ್ಟು ಮಹಿಳೆಯರು ಯಾವುದೇ ರಾಜಕೀಯ ವಿಚಾರ ಅರಿಯದೆ ಇರುವುದಾಗಿ ಕಂಡುಬರುತ್ತದೆ.

ರಾಜಕೀಯದ ಬಗ್ಗೆ ಜ್ಞಾನವಿಲ್ಲದೆ ನೀವು ಹೇಗೆ ಮತ ಚಲಾಯಿಸುತ್ತೀರಿ? ಎಂದು ಪ್ರಶ್ನಿಸಿದಾಗ ಚುನಾವಣಾ ಸಂದರ್ಭದಲ್ಲಿ ಯಾರೋ ಬಂದು (ಅಪರಿಚಿತರೆಂಬ ದಾಟಿಯಲ್ಲಿ) ಇಂತಹ ಚಿತ್ರದ ಗುರುತಿಗೆ ಇಂತಹ ದಿನ ಬಂದು ಮತ ಹಾಕಿ ಎಂದು ದುಡ್ಡು, ಸೀರೆ ಕೊಟ್ಟು ಹೋಗುತ್ತಾರೆ. ನಾವು ಹೋಗಿ ಓಟು ಹಾಕಿಬರುತ್ತೇವೆ ಅಷ್ಟೇ ಎಂದು ಹೇಳುತ್ತಾರೆ. ದುಡಿಮೆಗಾಗಿ ವಲಸೆ ಹೋಗುವ ಬಹುತೇಕರು ಇಂದಿಗೂ ಮತ ಚಲಾಯಿಸದೆ ಇರುವುದನ್ನು ಕಾಣಬಹುದು. ಎಷ್ಟೋ ಮಹಿಳೆಯರು ವಯಸ್ಕರಾದರು ತಮ್ಮ ಮತ ಚೀಟಿಯನ್ನು ಪಡೆಯದೆ ಇರುವುದು ಸಹ ಇಲ್ಲಿ ಸರ್ವೇ ಸಾಮಾನ್ಯವಾಗಿದೆ.

ರಾಜಕೀಯದಲ್ಲಿ ಅಭ್ಯರ್ಥಿಗಳಾಗಿ ಭಾಗವಹಿಸುವುದಾಗಲಿ ಅಥವಾ ಮತ ಚಲಾಯಿಸುವುದಾಗಲಿ ಇವ್ಯಾವುದರ ಪರಿವೇ ಈ ಕುಂಚಿ ಕೊರವ ಮಹಿಳೆಯರಿಗೆ ಇಲ್ಲದಾಗಿದೆ. ಇವರ ಮತದಾನಕ್ಕೆ ಅಡ್ಡಿಪಡಿಸುವ ಅಂಶಗಳೆಂದರೆ ಬಡತನ, ನಗರೀಕರಣ, ಕೈಗಾರೀಕರಣ, ಪಿತೃ ಪ್ರಧಾನತೆ ಎನ್ನಬಹುದು. ಸಾಕ್ಷರತೆ ಮತ್ತು ರಾಜಕೀಯಕ್ಕೆ ಸಂಬಂಧವಿದೆ. ಎಲ್ಲಿ ಸಾಕ್ಷರತೆ ಅಧಿಕವಾಗಿರುತ್ತದೆಯೋ ಅಲ್ಲಿ ಮಹಿಳಾ ಮತದಾರರ ಸಂಖ್ಯೆ ಆಧಿಕವಾಗಿರುತ್ತದೆ. ಈ ಕುಂಚಿ ಕೊರವ ಮಹಿಳೆಯರು ಸಾಕ್ಷರತೆಯಿಂದ ಬಹುತೇಕ ಹಿಂದುಳಿದಿರುವುದೇ ರಾಜಕೀಯ ಹಿನ್ನೆಡೆಗೆ ಪ್ರಮುಖ ಕಾರಣ ಎಂದು ಹೇಳಬಹುದು.

೪.೨.೧. ಸಂಘಟನೆಯ ಕೊರತೆ

ರಾಜಕೀಯ ಚಟುವಟಿಕೆಯಲ್ಲಿ ಭಾಗವಹಿಸಬೇಕೆಂದರೆ ಮೊದಲು ಸಂಘಟಿತರಾಗಿರಬೇಕು. ಈ ಮಹಿಳೆಯರು ಸಂಘಟಿತರಾಗಿಲ್ಲ ಸಂಘಟನೆಯ ಕಲ್ಪನೆಯೇ ಈ ಮಹಿಳೆಯರಿಗೆ ಇಲ್ಲದಾಗಿದೆ. ರಾಜಕೀಯ ಕ್ಷೇತ್ರದಲ್ಲಿ ಸ್ವಾತಂತ್ರ್ಯ ಪೂರ್ವ ಕಾಲದಲ್ಲಿ ಗಣನೀಯವಾಗಿ ಮಹಿಳೆಯರು ಇಲ್ಲದಿದ್ದರೂ ಸ್ವಾತಂತ್ರ್ಯದ ನಂತರದಲ್ಲಿ ಗಣನೀಯವಾದ ಪಾತ್ರವಹಿಸುತ್ತಿರುವುದನ್ನು ಕಾಣಬಹುದಾಗಿದೆ. ಅಧಿಕಾರದ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಈ ಶತಮಾನದಲ್ಲಿಯಾದರೂ ಮಹಿಳೆಯರಿಗೆ ರಾಜಕೀಯ ಕ್ಷೇತ್ರದಲ್ಲಿ ಹೆಚ್ಚಿನ ಸ್ಥಾನಮಾನಗಳು ದೊರೆಯಬೇಕಾದದ್ದು ಅಗತ್ಯವಿದೆ. ಇಂತಹ ಆಧುನಿಕ ಯುಗದಲ್ಲಿ ವಿಶೇಷವಾಗಿ ನಗರೀಕರಣ, ಔದ್ಯೋಗಿಕರಣ, ವ್ಯಾಪಾರೀಕರಣ, ಖಾಸಗೀಕರಣ, ಉನ್ನತೀಕರಣ, ಸರಳೀಕರಣ ಹಾಗೂ ಪಾಶ್ಚಾತೀಕರಣ ಮುಂತಾದವುಗಳು ಭಾರತೀಯ ಮಹಿಳೆಯರಿಗೆ ಸ್ವಾತಂತ್ರ್ಯವನ್ನು ಹೊಂದಲು ಪೂರಕವಾಗಿವೆ. ಆದರೆ ಪುರುಷ ಪ್ರಧಾನತೆ ಮಹಿಳೆಯರನ್ನು ಮುಂದುವರೆಯಲು ಬಿಡುತ್ತಿಲ್ಲ. ಇದಕ್ಕೆ ಕುಂಚಿ ಕೊರವ ಮಹಿಳೆಯರು ಹೊರತಾಗಿಲ್ಲ. ಮಹಿಳೆಯರನ್ನು ಸಂಘಟಿತರಾಗಿ, ಸಂಘಟನೆಯ ಬಗ್ಗೆ ಅರಿತುಕೊಳ್ಳಲು ಬಿಡದೆ ಅವಿರತ ದೈಹಿಕ ಶ್ರಮದಲ್ಲಿ ತೊಡಗುವಂತೆ ಮಾಡುತ್ತಿದೆ. ಯಾವುದೇ ಒಂದು ಕಾರ್ಯ ಸಾಧನೆಗೆ ಹೊರಟಾಗ ಒಬ್ಬಂಟಿಯಾಗಿ ಹೋರಾಡುವುದಕ್ಕಿಂತ ಗುಂಪಿ(ಸಂಘಟನೆ)ನೊಂದಿಗೆ ಹೋರಾಟಕ್ಕಿಳಿದಾಗ ಕಾರ್ಯ ಸಾಧನೆ ಅತಿ ಶೀಘ್ರವಾಗಿ ಆಗುತ್ತದೆ. ಈ ನಿಟ್ಟಿನಲ್ಲಿ ಕುಂಚಿ ಕೊರವ ಮಹಿಳೆಯರು ಸಂಘಟಿತರಾಗಿ ತಮ್ಮನ್ನು ಉನ್ನತಿಗೆ ತೆಗೆದುಕೊಂಡು

ಹೋಗುವುದರ ಜೊತೆಗೆ ಸಮಾಜದ ಪ್ರತಿನಿಧಿಗಳಾಗಿ ಗುರುತಿಸಿಕೊಂಡು ರಾಜಕೀಯದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಬೇಕಿದೆ. ಅದರೆ ಈ ಕುಂಚಿ ಕೊರಮ ಮಹಿಳೆಯರಿಗೆ ಇಂತಹ ಯಾವ ಅಂಶಗಳ ಬಗ್ಗೆಯೂ ಆಸಕ್ತಿ ಇಲ್ಲದಿರುವುದು ಕಂಡುಬರುತ್ತದೆ. ಸಂಘಟನೆಗಳನ್ನು ಮಾಡಿ ಮುಂದುವರೆಯಬೇಕೆಂಬ ಹಂಬಲವು ಇಲ್ಲದಾಗಿದೆ. ಕಾರಣ ಬಹುತೇಕ ಭಾರವಾದ ಅವರ ಕೌಟುಂಬಿಕ ಜವಾಬ್ದಾರಿಗಳು ಎಂದು ಹೇಳಬಹುದು.

ದುಡಿಮೆಗೆಂದು ಊರೂರು ಅಲೆಯುವ ನಾವು ಯಾವುದರ ಜ್ಞಾನ ಇಲ್ಲದಿರುವವರು. ಇನ್ನು ಸಂಘಟನೆ ಮಾಡಿ ಅದರ ಉಸ್ತುವಾರಿಕೆ ಮಾಡುವುದಾದರೂ ಹೇಗೆ ಎನ್ನುತ್ತಾರೆ. ಸಂಘಟನೆಯಿಂದ ಆಗುವ ಉಪಯೋಗವಾದರೂ ಏನು ಎಂದು ಅತಿ ಮುಗ್ಧತೆಯಿಂದ ನುಡಿಯುತ್ತಾರೆ. ಈ ರೀತಿಯ ಸಂಘಟನೆ ಎಂದು ಹೋದರೆ ಮನೆ ಪುರುಷರು 'ನಿನಗ್ಯಾಕೆ ಊರ ಉಸಾಬರಿ' ಎಂದು ತಮ್ಮ ಹಿಡಿತಕ್ಕೆ ತಂದುಕೊಳ್ಳುತ್ತಾರೆ ಎಂದು ತಿಳಿಸುತ್ತಾರೆ. ಬೆಂಬಲ ಒಂದೆ ರಾಜಕೀಯದಲ್ಲಿ ವ್ಯಕ್ತಿಯನ್ನು ಎಬ್ಬಿಸಿ ನಿಲ್ಲಿಸುತ್ತದೆ. ಅದೇ ಈ ಕುಂಚಿ ಕೊರವ ಮಹಿಳೆಯರಿಗಿಲ್ಲದಾಗ ಅಧಿಕಾರದ ಚುಕ್ಕಾಣಿ ಹಿಡಿಯುವುದು ಕನಿಸಿನ ಮಾತೇ ಸರಿ ಎಂದು ಹೇಳಬಹುದು. ಇದಷ್ಟೇ ಅಲ್ಲದೆ ಇತರೆ ಯಾವುದೇ ರಾಜಕೀಯ ಸಂಘಟನೆಗಳು (ಪಕ್ಷಗಳು) ಈ ಮಹಿಳೆಯರನ್ನು ಒಳಗೂಡಿಸಿಕೊಳ್ಳದೆ ಇರುವುದು ಕೂಡ ಈ ಮಹಿಳೆಯರ ರಾಜಕೀಯ ಹಿನ್ನಡೆಗೆ ಕಾರಣವಾಗಿದೆ.

೪.೨.೨. ರಾಜಕೀಯ ಮೀಸಲಾತಿ

ದುರ್ಬಲ ಅಥವಾ ಶೋಷಿತ ವರ್ಗ ಎಂದು ಕರೆಸಿಕೊಳ್ಳುವ ಮಹಿಳಾ ವರ್ಗವನ್ನು ಉನ್ನತಿಗೆ ತರಲು ಹಲವಾರು ಮಾರ್ಗೋಪಾಯಗಳನ್ನು ಸರ್ಕಾರ ಕೈಗೊಳ್ಳುತ್ತಲೇ ಇದೆ. ಇದರಲ್ಲಿ ರಾಜಕೀಯ ಮೀಸಲಾತಿಯೂ ಒಂದೆಂದು ಹೇಳಬಹುದು. ಈ ನಿಟ್ಟಿನಲ್ಲಿ ಸಂವಿಧಾನದ ೭೩ ಮತ್ತು ೭೪ನೇ(ವರ್ಷ ೧೯೯೩) ತಿದ್ದುಪಡಿ ಮೂಲಕ ಪಂಚಾಯತ್ ರಾಜ್ಯ ವ್ಯವಸ್ಥೆ ಮೂಡಿಬಂತು. ಈ ಕಾಯ್ದೆಯ ಪ್ರಕಾರ ಗ್ರಾಮ, ತಾಲೂಕು, ಜಿಲ್ಲಾ ಮಟ್ಟದ ಪಂಚಾಯತಿ ಎಂದು ೩ ಹಂತದ ಚುನಾವಣಾ ಪ್ರಕ್ರಿಯೆ ಮೂಡಿಬಂದಿದೆ. ಪ್ರತಿಯೊಂದರಲ್ಲೂ ಆಯಾ ಕ್ಷೇತ್ರದ ವ್ಯಾಪ್ತಿಗೆ ಬರುವ ಮಹಿಳೆಯರಿಗೆ ಶೇ.೩೩ರಷ್ಟು ಮೀಸಲಾತಿ ನೀಡಿ ರಾಜಕೀಯವಾಗಿ ಸಶಕ್ತರನ್ನಾಗಿ ಮಾಡುವ ಕಾರ್ಯ ಕೈಗೊಂಡಿದೆ. ಈ ಅಧಿಕಾರದ ವಿಕೇಂದ್ರೀಕರಣದನ್ವಯ ಕುಂಚಿ ಕೊರವ ಮಹಿಳೆಯರು ಜಿಲ್ಲಾ ಪಂಚಾಯತಿಯ ವ್ಯಾಪ್ತಿಯೊಳಗೆ ಬರುತ್ತಾರೆ. ಈ ಮೀಸಲಾತಿ ಹಂಚಿಕೆಯ ಪ್ರಕಾರ ೭೪ನೇ ತಿದ್ದುಪಡಿ, ೨೪೩ನೇ ವಿಧಿಯ ಪ್ರಕಾರ ಮುನ್ಸಿಪಾಲಿಟಿಯ ಅರ್ಥವನ್ನು ತಿಳಿಸುತ್ತದೆ.

(೧೨೪೩ (ಕ್ಯೂ) ವಿಧಿಯ ಪ್ರಕಾರ)

೧. ನಗರ(ಪಟ್ಟಣ) ಪಂಚಾಯಿತಿ

೨. ಮುನ್ಸಿಪಾಲ್ ಕೌನ್ಸಿಲ್ (ಮಹಾನಗರ ಪಾಲಿಕೆ)

೩. ನಗರ ಸಭೆ ಎಂದು ವರ್ಗೀಕರಿಸಿದ್ದಾರೆ. (೨೪೩) ಆರ್ ವಿಧಿಯ ಪ್ರಕಾರ ಮುನ್ಸಿಪಾಲ್ ಸರ್ಕಾರಗಳ ಪ್ರತಿನಿಧಿಗಳನ್ನು ವಾರ್ಡ್‌ಗಳಿಂದ ನೇರವಾಗಿ ಆಯ್ಕೆ ಮಾಡಬೇಕೆಂದು ನಿರ್ದೇಶಿಸಿದೆ.

ಮೀಸಲಾತಿ ೨೪೩(ಟಿ) ವಿಧಿಯ ಪ್ರಕಾರ ಪ್ರತಿಯೊಂದು ಮುನ್ಸಿಪಾಲ್ಟಿಯಲ್ಲೂ, ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಮಹಿಳೆಯರಿಗೆ ೧/೩ ಸ್ಥಾನ ಮತ್ತು ಹಿಂದುಳಿದವರಿಗೆ ಸದಸ್ಯ ಸ್ಥಾನಗಳನ್ನು ಮತ್ತು ಅಧ್ಯಕ್ಷರ ಸ್ಥಾನಗಳನ್ನು ಮೀಸಲಿಡಲು ರಾಜ್ಯಕ್ಕೆ ಅಧಿಕಾರವಿದೆ. ಇಷ್ಟೆಲ್ಲಾ ಅನುಕೂಲಗಳು ಮಹಿಳೆಯರಿಗೆ ಜಿಲ್ಲಾ ಪಂಚಾಯತಿಯ ಅಧಿಕಾರ ವ್ಯಾಪ್ತಿಗೆ ಹಂಚಿಕೆ ಆಗಿವೆ. ಆದರೆ ಕುಂಚಿ ಕೊರವ ಮಹಿಳೆಯರು ಇಷ್ಟೆಲ್ಲದರಗಳ ಲಾಭ ಪಡೆದುಕೊಂಡದ್ದು ತುಸು ಮಾತ್ರ. ಈಗಾಗಲೇ ತಿಳಿಸಿದಂತೆ ಜಿಲ್ಲಾ ಪಂಚಾಯತಿ ವ್ಯಾಪ್ತಿಗೆ ಬರುವ ಕುಂಚಿ ಕೊರವ ಮಹಿಳೆಯರು ೧೯೯೩ರಲ್ಲಿ ಜಾರಿಗೊಂಡ ಈ ತಿದ್ದುಪಡಿಯ ಲಾಭ ಪಡೆದದ್ದು ಕೇವಲ ಶೇ.೨ರಷ್ಟು ಮಾತ್ರ. ಇದು ಈ ಮಹಿಳೆಯರ ರಾಜಕೀಯ ದುರ್ಬಲತೆಯನ್ನು ತಿಳಿಸಿಕೊಡುತ್ತದೆ. ಕೇವಲ ಬೆರಳೆಣಿಕೆಯಷ್ಟು ಮಹಿಳೆಯರ ರಾಜಕೀಯ ಪ್ರವೇಶ ಇವರಲ್ಲಿ ಕಂಡುಬರುತ್ತದೆ.

ವಿವಿಧ ರಾಜಕೀಯ ಕ್ಷೇತ್ರಗಳಲ್ಲಿ ಕೊರವ ಮಹಿಳೆಯರ ಭಾಗವಹಿಸುವಿಕೆಯ ಪ್ರಮಾಣ

ಕ್ರ.ಸಂ.	ಅಧಿಕಾರ ವ್ಯಾಪ್ತಿ	ಮಹಿಳೆಯರ ಸಂಖ್ಯೆ	ಪ್ರತಿಶತ
೧.	ನಗರ ಸಭೆ ಸದಸ್ಯೆಯಾಗಿ	೨	೨.೫೦
೨.	ಎಂ.ಎಲ್.ಎ ಯಾಗಿ	-	
೩.	ಯಾವುದು ಇಲ್ಲ	೭೮	೯೭.೫೦
	ಒಟ್ಟು	೮೦	೧೦೦

ಈ ಕೋಷ್ಟಕವನ್ನು ಗಮನಿಸಿದಾಗ ಕೇವಲ ಇಬ್ಬರು ಸದಸ್ಯೆಯರು ಮಾತ್ರ ನಗರ ಸಭೆ ಸದಸ್ಯೆಯರಾಗಿ ಆಯ್ಕೆಯಾಗಿರುವುದು ಕಂಡುಬರುತ್ತದೆ. ಕಾಯ್ದೆ ಜಾರಿಗೊಂಡು ೧೬ ವರ್ಷಗಳಾದರೂ ಈ ಮಹಿಳೆಯರಿಗೆ ದೊರೆತಿರುವ ಪ್ರಾಶಸ್ತ್ಯ ಕಿಂಚಿತ್ತು ಮಾತ್ರ. ಇಡೀ ಸಮುದಾಯದ ಪರವಾಗಿ ಗುರುತಿಸಿಕೊಂಡಿರುವ ಮಹಿಳೆಯರು ಇಬ್ಬರೂ ಮಾತ್ರ. ಅದು ಒಬ್ಬರೂ ಮಾಜಿ ಮತ್ತು ಮತ್ತೊಬ್ಬರು ಹಾಲಿ ಸದಸ್ಯರಾಗಿದ್ದಾರೆ. ಎಂ.ಎಲ್.ಎ ಚುನಾವಣೆಗೆ ಸ್ಪರ್ಧಿಸದೆ(ಕಣಕ್ಕಿಳಿಯದೆ) ಇರುವುದನ್ನು ಸಹ ಕಾಣಬಹುದು. ಗೆಲ್ಲುವುದು ಒಂದು ಕಡೆ ಇರಲಿ ಸ್ಪರ್ಧಿಸಲು ಸಹ ಮುಂದಾಗದೆ ಇರುವುದನ್ನು ಕಂಡಾಗ

ಅದು ರಾಜಕೀಯ ಹಿನ್ನಡೆಯನ್ನು ತೋರಿಸುವುದರ ಜೊತೆಗೆ ಮಹಿಳೆಯರಲ್ಲಿನ ರಾಜಕೀಯದ ಬಗೆಗಿನ ಅಜ್ಞಾನವನ್ನು ತಿಳಿಸುತ್ತದೆ.

ಜೊತೆಗೆ ನಗರ ಪ್ರದೇಶದ ಸ್ಥಳೀಯ ಸರ್ಕಾರಗಳಾದ

೧. ನಗರ ಪಾಲಿಕೆಗಳು

೨. ಪುರ ಸಭೆಗಳು

೩. ನೊಟಿಫೈಡ್ ಎರಿಯಾ

೪. ಪಟ್ಟಣ ಪ್ರದೇಶ ಸಮಿತಿಗಳು

೫. ಕಂಟೋನ್‌ಮೆಂಟ್ ಬೋರ್ಡ್‌ಗಳು.

ಇವುಗಳೆಲ್ಲವೂಗಳಲ್ಲೂ ಕೂಡ ಭಾಗವಹಿಸದೆ ಇರುವುದನ್ನು ಕಾಣಬಹುದಾಗಿದೆ. ನಗರ ಸ್ವಯಂ ಸರ್ಕಾರಗಳಲ್ಲಿ ಬರುವ ಮಹಾನಗರ ಪಾಲಿಕೆಗೆ ಪ್ರತ್ಯೇಕ ಚುನಾವಣೆ ಮೂಲಕ ಚುನಾಯಿಸಲ್ಪಡುವ ಸದಸ್ಯತ್ವದಲ್ಲಿ ಮಹಿಳೆಯರಿಗೆ ಮೀಸಲಾತಿ ಸೌಲಭ್ಯವನ್ನು ಕಲ್ಪಿಸಲಾಗಿದೆ ೧/೩ರಷ್ಟು ಸ್ಥಾನಗಳನ್ನು ಮೀಸಲಿರಿಸಿದ್ದಾರೆ. ಇದ್ಯಾವುದರ ಸದುಪಯೋಗ ಪಡೆದುಕೊಳ್ಳದೆ ಈ ಕುಂಚಿ ಕೊರವ ಮಹಿಳೆಯರು ಹಿಂದುಳಿದಿರುವುದು ಬೇಸರದ ಸಂಗತಿಯಾಗಿದೆ. ಇಷ್ಟೆಲ್ಲಾ ಮೀಸಲಾತಿಯನ್ನು ನೀಡಿದಾಗ್ಯೂ ಅವರು ಇದರ ಬಗ್ಗೆ ಆಸಕ್ತಿ ತೋರಿಸದೆ ಇರುವುದು ಅವರ ಇಡೀ ಜೀವನದ ಹಿನ್ನಡೆಗೆ ಒಂದು ಅಂಶ ಹೇಳಿದರೆ ತಪ್ಪಾಗಲಾರದು.

೪.೨.೩. ರಾಜಕೀಯದಲ್ಲಿ ಮಹಿಳೆಯರು ಪಾಲ್ಗೊಳ್ಳದೆ ಇರಲು, ಇರುವ ಸಮಸ್ಯೆಗಳು

ಕ್ರಾಂತಿಕಾರಕ ಬದಲಾವಣೆಗಳಿಂದ ಮಹಿಳೆಯರು ಪುರುಷರು ಸಮಾನರು ಪುರುಷರಂತೆ ಕಾರ್ಯ ಮಾಡುವವರು ಎಂದು ಹೇಳಲಾಗುವುದಿಲ್ಲ. ಅವರ ಸಕ್ರಿಯ ಭಾಗವಹಿಸುವಿಕೆಗೆ ಅವಕಾಶ ಇದೆಯೋ ಇಲ್ಲವೋ ಎಂಬುದನ್ನು ತಿಳಿಯಬೇಕು. ಇರುವ ಅವಕಾಶಗಳನ್ನು ಪಡೆದುಕೊಳ್ಳುವಲ್ಲಿ ವಿಫಲರಾಗುತ್ತಿದ್ದಾರೆಂದರೆ ಅಲ್ಲಿರುವ ಸಮಸ್ಯೆಗಳೇನು? ಎಂಬುದನ್ನು ಗುರುತಿಸಿ ಪರಿಹರಿಸುವುದು ಕೂಡಾ ಅಷ್ಟೇ ಮುಖ್ಯವಾಗಿದೆ. ರಾಜಕೀಯದಲ್ಲಿ ಭಾಗವಹಿಸಲು ಈ ಕುಂಚಿ ಕೊರವ ಮಹಿಳೆಯರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅವುಗಳೆಂದರೆ

೧. ಅನಕ್ಷರತೆ ಮತ್ತು ಬಡತನ ಅವರ ಭಾಗವಹಿಸುವಿಕೆಗೆ ಅಡ್ಡಿಯಾಗಿದೆ.

೨. ಕುಟುಂಬದ ಜವಾಬ್ದಾರಿ ಮತ್ತು ಕುಟುಂಬದ ಹೊರಗಿನ ಕೆಲಸದ ಹೊರೆ ಮಹಿಳೆಯರ ಭಾಗವಹಿಸುವಿಕೆಯನ್ನು ನಿರ್ಬಂಧಿಸಿದೆ.

೩. ಈ ಮಹಿಳೆಯರಿಗೆ ರಾಜಕೀಯ ಅನುಭವ ಮತ್ತು ತರಬೇತಿಯ ಕೊರತೆ ಇರುವುದರಿಂದ ಜವಾಬ್ದಾರಿ ಮತ್ತು ಉನ್ನತ ಮಟ್ಟದ ನಿರ್ಧಾರ ಕೈಗೊಳ್ಳಲು ಅಸಾಧ್ಯವಾಗಿದೆ.

೪. ಈ ಕುಂಚಿ ಕೊರವ ಸಮುದಾಯವು ಸಂಪೂರ್ಣವಾಗಿ ಪುರುಷ ಪ್ರಧಾನ ವ್ಯವಸ್ಥೆಯಿಂದ ಕೂಡಿದ್ದು, ಸಮುದಾಯದಲ್ಲಿಯ ಮೌಲ್ಯ, ನಂಬಿಕೆ, ಆಚರಣೆಯಂತಹ ಕಟ್ಟುಪಾಡುಗಳು ಮಹಿಳೆಯರನ್ನು ರಾಜಕೀಯದಲ್ಲಿ ಭಾಗವಹಿಸದಂತೆ ಮಾಡಿದೆ.

೫. ತೀರ ಕೆಳಮಟ್ಟದ ಆರ್ಥಿಕ ಪರಿಸ್ಥಿತಿ ಮಹಿಳೆಯರನ್ನು ರಾಜಕೀಯದಲ್ಲಿ ಪ್ರವೇಶಿಸದಂತೆ ಮಾಡಿದೆ. ಚುನಾವಣಾ ಖರ್ಚು ಒಂದನ್ನು ಹೊರತುಪಡಿಸಿ ಬೇರಾವ ಕೆಲಸಕ್ಕೆ ಹಣ ಬೇಕಾಗುವುದಿಲ್ಲವಾದರೂ ಅವರ ಆರ್ಥಿಕ ಮುಗ್ಗಟ್ಟು ಈ ಕ್ಷೇತ್ರಕ್ಕೆ ಕಾಲಿಡಲು ಬಿಡದೆ ದುಡಿಮೆಗೆ ಹೆಚ್ಚು ಒತ್ತು ನೀಡುವಂತೆ ಮಾಡಿದೆ.

೬. ಮಹಿಳೆಯರ ಸ್ವಭಾವ, ನಡುವಳಿಕೆಯಲ್ಲಿ ಕೆಲವು ರೂಢ ಬದ್ಧ ನಿರೀಕ್ಷೆಗಳು ಇರುತ್ತವೆ. ಅವರು ವಿನಯಶೀಲರಾಗಿರಬೇಕು, ವಿಧೇಯರಾಗಿರಬೇಕು, ನಾಚಿಕೆ ಸ್ವಭಾವದವರಾಗಿರಬೇಕು. ಗಂಡಸರೊಂದಿಗೆ ಬೆರೆಯಬಾರದು ಇತ್ಯಾದಿ. ಈ ನಿರೀಕ್ಷೆಗಳು ಮಹಿಳೆಯರ ರಾಜಕೀಯ ಭಾಗವಹಿಸುವಿಕೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತವೆ. ಏಕೆಂದರೆ ಈ ಸ್ವಭಾವಗಳು ಇದ್ದರೆ ಮಹಿಳೆಯರು ರಾಜಕೀಯದಲ್ಲಿ ಕೆಲಸ ಮಾಡಲು ಸಾಧ್ಯವಾಗುವುದೇ ಇಲ್ಲ. ಕಾರಣ ಇವೆಲ್ಲ ಸ್ವಭಾವಗಳು ಪುರುಷನ ಅಧಿನಾಧಿ ಗಳಾಗಿರಲು ರೂಪಿಸಿದಂತವುಗಳಾಗಿವೆ.

೭. ರಾಜಕೀಯ ನಾಯಕರು ಮಹಿಳೆಯರಲ್ಲಿ ತೋರುವ ತಾರತಮ್ಯ ಕೂಡಾ ಮಹಿಳೆಯರ ಭಾಗವಹಿಸುವಿಕೆ ಯನ್ನು ತಡೆಯುತ್ತದೆ. ಪಕ್ಷಗಳು ನಾಮಕಾವಸ್ಥೆಯಾಗಿ ತನ್ನ ಪಕ್ಷದ ಹಿತಾಸಕ್ತಿಗಾಗಿ ಮಾತ್ರ ಈ ಸಮುದಾಯದ ಮಹಿಳೆಯರನ್ನು ಸದಸ್ಯರನ್ನಾಗಿ ಇರಿಸಿಕೊಳ್ಳುತ್ತವೆ.

೮. ಆಸಕ್ತ ಮಹಿಳೆಯರ ರಾಜಕೀಯ ಪ್ರವೇಶವನ್ನು ಸಮುದಾಯಗಳು ಪ್ರೋತ್ಸಾಹಿಸುವುದಿಲ್ಲ ಹಾಗೂ ಬಹುತೇಕ ಮಹಿಳೆಯರು ತಾವೇ ನಮಗ್ಯಾಕೆ ರಾಜಕೀಯ? ಮನೆ, ಗಂಡ, ಮಕ್ಕಳು ಅಂತಿದ್ದರೆ ಸಾಕು ಎಂದು ಹಿಂದೆ ಸರಿಯುತ್ತಾರೆ.

ಈ ರೀತಿಯಾಗಿ ಹಲವಾರು ಸಮಸ್ಯೆಗಳು ಕುಂಚಿ ಕೊರವ ಸಮುದಾಯದ ಮಹಿಳೆಯರನ್ನು ಸುತ್ತುವರೆದಿದ್ದು, ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಮಹಿಳೆಯರನ್ನು ರಾಜಕೀಯದಿಂದ ಹಿಂದುಳಿಯುವಂತೆ ಮಾಡಿದೆ. ಇಲ್ಲಿ ವೀಣಾ ಮುಜುಂದಾರ್ ಹೇಳುವ ಪ್ರಕಾರ "ಸಾವಿರಾರು ವರ್ಷಗಳಿಂದ ಬೆಳೆದು ಬಂದಿರುವ ಸಾಂಪ್ರದಾಯಿಕ ಮೌಲ್ಯ ಮತ್ತು ನಡಾವಳಿಕೆಯ ಕಟ್ಟುಪಾಡುಗಳು ಮಹಿಳೆಯರು ತಮ್ಮನ್ನು ತಾವು ವ್ಯಕ್ತಿಗಳನ್ನಾಗಿ ಗುರುತಿಸಿಕೊಳ್ಳುವುದಕ್ಕೆ ಸಾಧ್ಯವಾಗದಂತೆ ಮಾಡಿವೆ. ಈ ಪ್ರಕ್ರಿಯೆ ಹೆಚ್ಚು

ಸಂಕೀರ್ಣಗೊಂಡಷ್ಟು ಮಹಿಳೆ ಮತ್ತು ರಾಜಕೀಯದ ಅಂತರ ಹೆಚ್ಚಾಗಿ ಅವರ ಭಾಗವಹಿಸುವಿಕೆ ಹೆಚ್ಚು ಕಷ್ಟವಾಗುತ್ತಾ ಹೋಗುತ್ತದೆ."[೪] ಎಂದು ಹೇಳಿದ್ದಾರೆ. ಸಾಮಾಜೀಕರಣ ಪ್ರಕ್ರಿಯೆ ಮಹಿಳೆಯರನ್ನು ಒಂದೇ ನಿಟ್ಟಿನಲ್ಲಿ ಬೆಳೆಸುವುದರಿಂದ ಮಹಿಳೆಯರು ಅದನ್ನೇ ಅನುಸರಿಸುತ್ತಿದ್ದು ತಮ್ಮ ವ್ಯಕ್ತಿತ್ವವನ್ನೇ ಮರೆತಿದ್ದಾರೆ. ಹೆಣ್ಣು ಮಕ್ಕಳಿಗೆ ಹೀಗೆ ಇರಬೇಕೆಂದು ಈ ಪುರುಷ ಪ್ರಧಾನ ವ್ಯವಸ್ಥೆ ಚೌಕಟ್ಟನ್ನು ಸೃಷ್ಟಿಸಿ, ಅದರೊಳಗೆ ಇರುವಂತೆ ಮಾಡಿದೆ. ಮಹಿಳೆಯರು ಕೂಡ ಇದರಿಂದ ಹೊರಬಂದರೆ ಅಪರಾಧವೆನೋ ಎಂಬಂತೆ ಭಾವಿಸುವುದರ ಜೊತೆಗೆ ರಾಜಕೀಯ ಕ್ಷೇತ್ರದಿಂದ ಬಹು ದೂರ ನಿಂತಿದ್ದಾರೆ. ಇದಕ್ಕೆ ಎಲ್ಲಾ ಸಮುದಾಯ, ವರ್ಗಗಳ ಮಹಿಳೆಯರು ಹೊರತಲ್ಲ. ಕುಂಚಿ ಕೊರವ ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲೂ ಹಿಂದುಳಿದಿರುವುದರಿಂದ ಅವರಿಗೆ ಹೆಚ್ಚಿನ ರೀತಿಯ ಹಿಂಜರಿಕೆ ರಾಜಕೀಯ ಕ್ಷೇತ್ರದ ಬಗ್ಗೆ ಇದೆ.

೪.೩. ಶೈಕ್ಷಣಿಕ ಸಮಸ್ಯೆಗಳು

ಶಿಕ್ಷಣ ಎಂಬುದು ಒಂದು ಅನುಭವದ ಪ್ರಕ್ರಿಯೆಯಾಗಿದೆ. ಅದು ಔಪಚಾರಿಕವಾಗಿರಬಹುದು ಇಲ್ಲವೇ ಅನೌಪಚಾರಿಕವಾದರೂ ಆಗಿರಬಹುದು. ಇಂತಹ ಶಿಕ್ಷಣದಿಂದ ಕುಂಚಿ ಕೊರವರು ತುಂಬಾ ಹಿಂದೆ ಉಳಿದಿದ್ದಾರೆ. ಒಟ್ಟು ಸಮುದಾಯವೇ ಶಿಕ್ಷಣ ಕ್ಷೇತ್ರದಲ್ಲಿ ಹಿನ್ನಡೆಯನ್ನು ಅನುಭವಿಸುತ್ತಿದೆ. ಪರಿಶಿಷ್ಟ ಜಾತಿಗೆ ಸೇರಿದ ಇವರು, ಸರ್ಕಾರ ಇವರಿಗೆಂದೇ ನೀಡಿದ ಶೈಕ್ಷಣಿಕ ಸೌಲಭ್ಯಗಳನ್ನು ಪಡೆದುಕೊಳ್ಳುವಲ್ಲಿ ವಿಫಲರಾಗಿದ್ದಾರೆ. ಸ್ವಾತಂತ್ರ್ಯ ಬಂದ ಮೇಲೆ ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಸುಧಾರಣೆ ಆಗುತ್ತಾ ಇದೆ. ಭಾರತವು ದಶಕದಿಂದ ದಶಕಕ್ಕೆ ಶಿಕ್ಷಣ ಕ್ಷೇತ್ರದಲ್ಲಿ ಅಭಿವೃದ್ಧಿಯನ್ನು ಕಾಣುತ್ತಿದೆ. ಆದರೆ ಈ ಸಮುದಾಯ ಮಾತ್ರ ಸಂಪೂರ್ಣ ಶಿಕ್ಷಣದಿಂದ ವಂಚಿತವಾಗಿದೆ. ಶಿಕ್ಷಣ ಪಡೆಯಲು ವಿದ್ಯಾರ್ಥಿಗಳಿಗೆ ಶಾಲೆಗಳಲ್ಲಿ ಶುಲ್ಕ ರಿಯಾಯ್ತಿ, ಹಾಸ್ಟೆಲ್ ಸೌಲಭ್ಯ, ಸರ್ಕಾರಿ ಉದ್ಯೋಗದ ಆಯ್ಕೆಯಲ್ಲಿ ಮೀಸಲಾತಿ ಮತ್ತು ಮಹಿಳಾ ಮೀಸಲಾತಿ ಇದ್ದಾಗ್ಯೂ ಇವೆಲ್ಲವುಗಳಿಂದ ದೂರವೇ ಉಳಿದಿದ್ದಾರೆ.

೪.೩.೧ ಹೆಣ್ಣು ಮಕ್ಕಳ ಶಿಕ್ಷಣ ಮಟ್ಟ

ಕುಂಚಿ ಕೊರವ ಸಮುದಾಯದಲ್ಲಿ ಪುರುಷರಿಗೆ ಮತ್ತು ಹುಡುಗರಿಗೆ ಹೋಲಿಸಿದರೆ ಮಹಿಳೆಯರ ಮತ್ತು ಹುಡುಗಿಯರ ಶಿಕ್ಷಣ ಮಟ್ಟ ತೀರ ಹಿನ್ನಡೆಯಲ್ಲಿದೆ. ಕೆಳ ಸ್ಥಾನವನ್ನು ಈ ಕ್ಷೇತ್ರದಲ್ಲೂ ತಮ್ಮ ಹಕ್ಕೆಂಬಂತೆ ಅನುಭವಿಸುತ್ತಿದ್ದಾರೆ. ಲಿಂಗ ತಾರತಮ್ಯ ನೀತಿಯೇ ಹೆಣ್ಣು ಮಕ್ಕಳ ಶಿಕ್ಷಣ ಕೆಳಗಿರಲು ಕಾರಣವಾಗಿದೆ. ಪುರುಷ ಪ್ರಧಾನ ವ್ಯವಸ್ಥೆ ಹೆಣ್ಣು ಮಕ್ಕಳು ಗಂಡು ಮಕ್ಕಳಿಗಿಂತ ಹೆಚ್ಚಿನ ಶಿಕ್ಷಣ ಪಡೆದರೆ ಇರುವ ವ್ಯವಸ್ಥೆಗೆ ಧಕ್ಕೆ ಬರುತ್ತೆಂಬ ದೃಷ್ಟಿಯಿಂದ ಅವರನ್ನು ಶಿಕ್ಷಣದಿಂದ ವಂಚಿತರನ್ನಾಗಿಸಿದ್ದಾರೆ. ಸಾಮಾನ್ಯವಾಗಿ ಮಹಿಳೆಯರು ದುಡಿಯಲೆಂದು ಹೊರಗೆ ಹೋದಾಗ ಮನೆಯಲ್ಲಿಯ ಚಿಕ್ಕ ಹೆಣ್ಣು

ಮಕ್ಕಳು ಊಟವಿಲ್ಲದೆ ಭಿಕ್ಷಾಟನೆಗೆ ಇಳಿಯುತ್ತಾರೆ. ಜೊತೆಗೆ ಮನೆಯಲ್ಲಿಯ ತಮಗಿಂತ ಪುಟ್ಟ ಮಕ್ಕಳ ಜವಾಬ್ದಾರಿ ಹೊತ್ತು ಪುಟ್ಟ ತಾಯಂದಿರಾಗಿ ಜೀವನ ಸಾಗಿಸುತ್ತಿದ್ದಾರೆ. ಇಂತಹ ವ್ಯವಸ್ಥೆಯನ್ನು ಪ್ರಶ್ನಿಸಿದಾಗ, ಮುಂದಾದರೂ ಮಕ್ಕಳನ್ನು ಹೆತ್ತು ಹೊತ್ತು ಸಾಕಿ ಸಲುಹುವ ಕೆಲಸ ಮಾಡಬೇಕು ಅದು ಚಿಕ್ಕಂದಿನಿಂದಲೇ ಅಭ್ಯಾಸವಾಗುತ್ತೆ ಬಿಡಿ ಎಂಬ ಅಜ್ಞಾನ ತುಂಬಿದ ಉತ್ತರಗಳು ಕೇಳಿಬರುತ್ತವೆ. ಇದು ನಿಜಕ್ಕೂ ಬೇಸರದ ಸಂಗತಿಯಾಗಿದೆ. ಹೆಣ್ಣೆಂದ ಮಾತ್ರಕ್ಕೆ ಆಕೆ ಹೆರುವ, ದುಡಿಯುವ ಯಂತ್ರ ಎಂದು ತಿಳಿದಿರುವ ಇವರ ಬದುಕು ನಿರರ್ಥಕವೆ ಸರಿ. ಎಷ್ಟು ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುತ್ತಿದ್ದೀರಿ ಎಂದು ಕೇಳಿದಾಗ ಬಂದ ಉತ್ತರವನ್ನು ಕೋಷ್ಠಕದ ಮೂಲಕ ಸ್ಪಷ್ಟಪಡಿಸಲಾಗಿದೆ.

ಹೆಣ್ಣು ಮಕ್ಕಳ ಶಿಕ್ಷಣ ಮಟ್ಟ

ಕ್ರ.ಸಂ.	ವಿವರ	ಮಹಿಳೆಯರ ಸಂಖ್ಯೆ	ಪ್ರತಿಶತ
೧.	ವಿವಾಹಿತರು ಮತ್ತು ವಿಧವೆಯರು ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುತ್ತಿರುವವರ ಸಂಖ್ಯೆ	೧೯	೨೩.೭೫
೨.	ವಿವಾಹಿತರು ಮತ್ತು ವಿಧವೆಯರು ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುತ್ತಿಲ್ಲದವರ ಸಂಖ್ಯೆ	೩೫	೪೩.೭೫
೩.	ಹೆಣ್ಣು ಮಕ್ಕಳಿಲ್ಲದವರ ಸಂಖ್ಯೆ	೮	೧೦
೪.	ಮಕ್ಕಳೆ ಇಲ್ಲದ ಮಹಿಳೆಯರ ಸಂಖ್ಯೆ	೩	೩.೭೫
೫.	ಅವಿವಾಹಿತೆಯರು	೧೫	೧೮.೭೫
	ಒಟ್ಟು	೮೦	೧೦೦

ಈ ಮೇಲಿನ ಕೋಷ್ಟಕವನ್ನು ಗಮನಿಸಿದಾಗ ಶೇ.೨೩.೭೫ರಷ್ಟು ಮಹಿಳೆಯರು ತಮ್ಮ ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುತ್ತಿದ್ದಾರೆ. ೪೩.೭೫ ರಷ್ಟು ಮಹಿಳೆಯರು ಹೆಣ್ಣು ಮಕ್ಕಳಿಗೆ ಯಾವುದೇ ಶಿಕ್ಷಣ ನೀಡುತ್ತಿಲ್ಲ. ಜೊತೆಗೆ ಮಕ್ಕಳಿಲ್ಲದವರು (ಶೇ.೩.೭೫), ಹೆಣ್ಣು ಮಕ್ಕಳಿಲ್ಲದವರು (ಶೇ.೧೦), ಅವಿವಾಹಿತೆ (ಶೇ.೧೮.೭೮)ಯರು ಕಂಡುಬರುತ್ತಾರೆ. ಕೇವಲ ಕೆಲವೇ ಜನ ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಲು ಮುಂದಾಗಿದ್ದಾರೆ. ಅದು ಇತ್ತೀಚಿನ ಸೌಲಭ್ಯಗಳನ್ನು ಉಪಯೋಗಿಸಿಕೊಂಡು ಕೆಲವರು ನಾವು ಕಲಿತಿಲ್ಲ ನಮ್ಮ ಮಕ್ಕಳು ಕಲಿತಿಲ್ಲ ಎಂದು ಹೇಳುತ್ತಾರೆ. ಅತಿಯಾದ ಬಡತನದ ಜೊತೆಗೆ ಅದರಲ್ಲಿಯೇ ಇರುವ ಜಾತಿಯ ಕೀಳರಿಮೆ ಇವರನ್ನು ಶಿಕ್ಷಣದಿಂದ ಮತ್ತಷ್ಟು ದೂರ ಸರಿಯುವಂತೆ ಮಾಡಿದೆ. ಒಂದು ವೇಳೆ ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಿದರೂ ಅದು ಕೇವಲ ಪ್ರಾಥಮಿಕ ಹೆಚ್ಚೆಂದರೆ ಪ್ರೌಢ ಶಿಕ್ಷಣಕ್ಕೆ ಮಾತ್ರ ಮೀಸಲಾಗಿರಿಸಿದ್ದಾರೆ. ಕಲಿತವರು ಬೆರಳಣಿಕೆಗೆ ಸಿಕ್ಕಿ ಬಿಡುತ್ತಾರೆ.

೪.೩.೧. ಶಿಕ್ಷಣ ಪಡೆಯುವಲ್ಲಿನ ಸಮಸ್ಯೆಗಳು

ಲಿಂಗತಾರತಮ್ಯ ನೀತಿ, ಬಡತನ, ಅಸ್ಪೃಶ್ಯತೆ, ಅರೆಕಾಲಿಕ ನಿರುದ್ಯೋಗ ಕೆಲವೊಂದು ಗೊಡ್ಡು ನಂಬಿಕೆಗಳು, ಪೋಷಕರಲ್ಲಿಯ ಅಜ್ಞಾನ ಮತ್ತು ಇವರ ಮೂಲ ಭಾಷೆ ಹೀಗೆ ಅನೇಕ ಸಮಸ್ಯೆಗಳು ಈ ಕುಂಚಿ ಕೊರವ ಮಹಿಳೆಯರನ್ನು ಶಿಕ್ಷಣದಿಂದ ದೂರ ಉಳಿಯುವಂತೆ ಮಾಡಿವೆ. ಇದರಿಂದಾಗಿ ಇವರಲ್ಲಿಯ ಮೌಢ್ಯತೆ ಹೆಚ್ಚಿ ಇತರೇ ಸಮಸ್ಯೆಗಳಿಗೂ ಕೂಡ ದಾರಿ ಮಾಡಿಕೊಡುತ್ತಿದೆ. ಪುರುಷ ಪ್ರಧಾನತೆಯು ಮಹಿಳೆಯರು ಶಿಕ್ಷಣ ಪಡೆಯದೆ ಇರಲು ಬಹುಮುಖ್ಯ ಕಾರಣವಾಗಿದೆ. ಏಕೆಂದರೆ ಮಹಿಳೆಯರು ವಿದ್ಯಾವಂತರಾದರೆ ಎಲ್ಲಿ ಸಮುದಾಯವನ್ನು ತ್ಯಜಿಸಿ ಬಿಡುತ್ತಾರೋ ಎಂಬ ಭಯ. ಅವರಿಂದಲೇ ಸಮುದಾಯದ ಅಳಿವು ಉಳಿವು ನಿಂತಿದೆ. ಪುರುಷರು ತಮ್ಮ ವಿರುದ್ಧ ಯಾವ ಧ್ವನಿಯನ್ನು ಎತ್ತದಂತೆ ಇಟ್ಟುಕೊಳ್ಳಲು ಅನಕ್ಷರತೆ, ಅಜ್ಞಾನದೆಡೆಗೆ ಮಹಿಳೆಯರನ್ನು ತಳ್ಳುತ್ತಿದೆ. ಈ ಎಲ್ಲಾ ಕಾರಣಗಳಿಂದಾಗಿ ಇಡೀ ಸಮುದಾಯದ ಸ್ತ್ರೀಯರು ಶಿಕ್ಷಣದಿಂದ ವಂಚಿತರಾಗಿದ್ದಾರೆ.

ಇಷ್ಟೆಲ್ಲಾ ಸಮಸ್ಯೆಗಳ ಮಧ್ಯೆಯು ಇತ್ತೀಚಿನ ದಿನಗಳಲ್ಲಿ ಹೆಣ್ಣು ಮಕ್ಕಳಿಗೆ ಪ್ರಾಥಮಿಕ ಶಿಕ್ಷಣ ನೀಡುವಲ್ಲಿ ಮುಂದಾಗಿದ್ದಾರೆ. ಕಾರಣ ಸರ್ಕಾರ ನೀಡುತ್ತಿರುವ ಉಚಿತ ಬಟ್ಟೆ, ಪುಸ್ತಕ, ಕೈ ಚೀಲಗಳು, ಜೊತೆಗೆ ಮಧ್ಯಾಹ್ನದ ಹೊತ್ತಿನ ಬಿಸಿಯೂಟ ಎಂದು ಹೇಳಬಹುದು. ಈ ಹಿಂದಿನ ತಲೆಮಾರಿನವರ ಸಂಪೂರ್ಣ ಅನಕ್ಷರಸ್ಥರೆ ಆಗಿದ್ದಾರೆ. ಇವರ ಜನಾಂಗೀಯ ಭಾಷೆ ಬೆರೆಯೇ ಆಗಿದ್ದು ಇದು ಕೂಡ ಶಿಕ್ಷಣದ ಮೇಲೆ ಪ್ರಭಾವ ಬೀರಿದೆ. ವಿಶೇಷವಾಗಿ ಇವರಲ್ಲಿ ಗಮನಿಸಬೇಕಾದ ಅಂಶವೆಂದರೆ ಹೆಣ್ಣು ಮಕ್ಕಳ ಸಂಖ್ಯೆ ಪ್ರಾಥಮಿಕ ಶಿಕ್ಷಣದಲ್ಲಿ ದಿನೇ ದಿನೇ ಹೆಚ್ಚುತ್ತಿದೆ ಕಾರಣ ಬಿಸಿಯೂಟ. ದಿನವಿಡಿ ತಾಯಂದಿರು ದುಡಿಯಲು ಹೋದಾಗ ಹಿಂತಿರುಗಿ ಬರುವುದು ಎಷ್ಟೊತ್ತಾಗುತ್ತದೆಯೋ ಗೊತ್ತಿಲ್ಲ. ಇಂಥ ಸಂದರ್ಭದಲ್ಲಿ ಭಿಕ್ಷೆ ಬೇಡಿ ತಂಗಳು ತಿನ್ನುವುದಕ್ಕಿಂತ ಮೃಷ್ಟಾನ ಲೇಸೆಂದು ಜೊತೆಗೆ ಭದ್ರತೆಯ ದೃಷ್ಟಿಯಿಂದ ಶಾಲೆಗೆ ಹೋಗುತ್ತಿರುವುದನ್ನು ಕಾಣಬಹುದಾಗಿದೆ. ಪೋಷಕರಲ್ಲಿ, ಮಕ್ಕಳಲ್ಲಿ ಶಿಕ್ಷಣದ ಮಹತ್ವ ತಿಳಿಸಿ ಲಿಂಗ ತಾರತಮ್ಯವಿಲ್ಲದೆ ಸಮಾನ ಶಿಕ್ಷಣ ನೀಡುವುದರ ಜೊತೆಗೆ ವಯಸ್ಕರ ಶಿಕ್ಷಣ ನೀಡಿ ಎಲ್ಲರನ್ನು ಜಾಗೃತಗೊಳಿಸಿದಾಗ ಮಾತ್ರ ಸಮುದಾಯ, ಶೈಕ್ಷಣಿಕ ಅಭಿವೃದ್ಧಿಯ ಪಥದತ್ತ ಸಾಗಲು ಸಾಧ್ಯವಾಗುತ್ತದೆ.

೪.೪. ಆರೋಗ್ಯದ ಸಮಸ್ಯೆಗಳು

ಆರೋಗ್ಯ ಮನುಷ್ಯನ ಅಭ್ಯುದಯದ ಅಡಿಗಲ್ಲು. ಆರೋಗ್ಯವು ಕೂಡಾ ಆಯಾ ದೇಶದ ಅಭಿವೃದ್ಧಿಯ ಸಂಕೇತವಾಗಿದೆ. ಅದರಲ್ಲೂ ಮಹಿಳೆಯರ ಆರೋಗ್ಯ ಅಭಿವೃದ್ಧಿಯನ್ನು ಮಾತ್ರ ಇಡೀ ದೇಶದ ಅಭಿವೃದ್ಧಿ ಎಂದು ಹೇಳಿದರೆ ತಪ್ಪಾಗಲಾರದು. ಅದರಲ್ಲೂ ಬಡ ಕುಟುಂಬಗಳ ಮಹಿಳೆಯರ

[illegible]

ಆರೋಗ್ಯದ ಸ್ಥಿತಿಯಂತೂ ಹೇಳತೀರದು. ನಮ್ಮ ಅಧ್ಯಯನಕ್ಕೆ ಆರಿಸಿಕೊಂಡ ಕುಂಚಿ ಕೊರವ ಮಹಿಳೆಯರು ಈಗಾಗಲೇ ತಿಳಿಸಿದಂತೆ ಬಡತನದ ಮಹಿಳೀಕರಣಕ್ಕೆ ಒಳಗಾಗಿದ್ದು ಇವರ ಆರೋಗ್ಯದ ಸ್ಥಿತಿ ಅತೀ ನಿಕೃಷ್ಟವಾಗಿರುವುದು ಕಂಡುಬರುತ್ತದೆ.

ಆರೋಗ್ಯ ಹಾಗೂ ನೈರ್ಮಲ್ಯದ ಬಗ್ಗೆ ಇವರಿಗೆ ಯಾವುದೇ ಕಲ್ಪನೆ ಇಲ್ಲದಾಗಿದೆ. ಇದರಿಂದಾಗಿ ಅನೇಕ ರೋಗಗಳಿಗೆ ಬಲಿಯಾಗುತ್ತಿದ್ದಾರೆ. ಮಲೇರಿಯಾ, ಕ್ಷಯ, ವಿಷಮಶೀತ ಜ್ವರ, ಕುಷ್ಠರೋಗ, ಚರ್ಮರೋಗ, ಅಡವಿರೋಗ ಮುಂತಾದ ರೋಗಗಳಿಗೆ ಬಲಿಯಾಗುತ್ತಿದ್ದಾರೆ. ಇವುಗಳನ್ನು ಹೋಗಲಾಡಿಸಿಕೊಳ್ಳಲು ಔಷಧಿಗಿಂತ ಮಾಟ-ಮಂತ್ರಗಳನ್ನೇ ಹೆಚ್ಚು ಅವಲಂಬಿಸಿದ್ದಾರೆ. ಗುಡಿಸಲು, ಮನೆಗಳು ಸಹ ಗಾಳಿ ಬೆಳಕಿನ ತೊಂದರೆ ಅನುಭವಿಸುತ್ತಿರುವುದರಿಂದ ಅವುಗಳ ಕೊರತೆಯಿಂದ ಉಂಟಾಗಬಹುದಾದ ತೊಂದರೆಗಳನ್ನು ಮಹಿಳೆಯರು ಎದುರಿಸುತ್ತಿದ್ದಾರೆ. ಇವರು ಉಪಯೋಗಿಸುವ ಬಟ್ಟೆ, ವಸ್ತುಗಳು, ಅಡಿಗೆ ಪಾತ್ರೆಗಳು ಶುಚಿಯಾಗಿಲ್ಲದ ಕಾರಣದಿಂದಲೂ ಕೂಡಾ ಅನೇಕ ರೋಗಗಳಿಗೆ ತುತ್ತಾಗುತ್ತಿದ್ದಾರೆ. ಇವಷ್ಟೇ ಅಲ್ಲದೆ ಆಹಾರ ಕೂಡಾ ಪೋಷಕಾಂಶಗಳ ಕೊರತೆಯಿಂದ ಕೂಡಿರುತ್ತದೆ. ಉಳಿದ ತಂಗಳನ್ನು ಮನೆ ಮನೆಗೆ ಹೋಗಿ ಬೇಡಿ ತಿನ್ನುವುದರಿಂದ ದೇಹಕ್ಕೆ ಬೇಕಾದ ಪೋಷಕಾಂಶಗಳು ದೊರೆಯದೆ ಹೋಗುತ್ತವೆ. ಹೆರಿಗೆ ಸಂದರ್ಭದಲ್ಲಿ ಇಂತಹ ತೊಂದರೆಯಿಂದ ಮಹಿಳೆಯರು ಮರಣವನ್ನು ಕೂಡ ಅಪ್ಪುವ ಸಾಧ್ಯತೆಗಳಿವೆ ಹಾಗೂ ಚಿಕ್ಕ ಮಕ್ಕಳ ಮರಣದ(CMR) ಪ್ರಮಾಣ ಕೂಡ ಹೆಚ್ಚಾಗುತ್ತದೆ.

ಮಹಿಳೆಯರು ದುಡಿಯಲೆಂದು ಹೊರಗಡೆ ಹೋದ ಸಂದರ್ಭದಲ್ಲಿ ಮಕ್ಕಳಿಗೆ ನೋಡಿಕೊಳ್ಳುವವರ್‍ಯಾರಿಲ್ಲದೆ ಅವುಗಳ ಆರೋಗ್ಯ ಕ್ಷೀಣಿಸುತ್ತದೆ. ಹೆರಿಗೆಗಳನ್ನು ಮನೆಯಲ್ಲಿಯೇ ಮಾಡಿಸುತ್ತಾರೆ. ಇಂತಹ ಸಂದರ್ಭದಲ್ಲಿ ತೊಂದರೆ ಉಂಟಾದಾಗ ಬಾಣಂತಿ ಮರಣವನ್ನಪ್ಪುವ ಸಾಧ್ಯತೆಗಳು ಇವೆ. ಅಥವಾ ಹೆರಿಗೆ ಸಂದರ್ಭದಲ್ಲಿನ ತೊಂದರೆಗಳಿಂದ ಜೀವಮಾನವಿಡಿ ತೊಳಲುವಂತಹ ಅನಾರೋಗ್ಯಕ್ಕೆ ಕೂಡ ಈಡಾಗಬಹುದು. ಇದರ ಜೊತೆಗೆ ಕುಟುಂಬ ಯೋಜನೆ ಅಳವಡಿಸಿಕೊಳ್ಳದ ಕಾರಣ ಮಹಿಳೆಯರು ಮಕ್ಕಳನ್ನು ಹೆರುವ ಯಂತ್ರಗಳಂತಾಗಿದ್ದಾರೆ.

ಕುಟುಂಬ ಯೋಜನೆ ಅಳವಡಿಸಿಕೊಂಡವರ ಸಂಖ್ಯೆ

ಕ್ರ.ಸಂ.	ವಿವರಗಳು	ಮಹಿಳೆಯರ ಸಂಖ್ಯೆ	ಪ್ರತಿಶತ
೧.	ಕು.ಯೋ.ಅಳವಡಿಸಿಕೊಂಡ ಮಹಿಳೆಯರ ಸಂಖ್ಯೆ	-	-
೨.	ಕು.ಯೋ ಅಳವಡಿಸಿಕೊಳ್ಳದ ವಿವಾಹಿತ ಮಹಿಳೆಯರ ಸಂಖ್ಯೆ	೬೫	೮೧.೨೫
೩.	ಅವಿವಾಹಿತ ಮಹಿಳೆಯರ ಸಂಖ್ಯೆ	೧೫	೧೮.೭೫
	ಒಟ್ಟು	೮೦	೧೦೦

ಈ ಕೋಷ್ಟಕವನ್ನು ಗಮನಿಸಿದಾಗ ಯಾವ ಮಹಿಳೆಯರು ಇಂತಹ ಯೋಜನೆಯನ್ನು ಅಳವಡಿಸಿಕೊಳ್ಳದೆ ಇರುವುದನ್ನು ಕಾಣಬಹುದಾಗಿದೆ. ಕುಟುಂಬ ಯೋಜನೆಯನ್ನು ಅಳವಡಿಸಿಕೊಂಡ ಮಹಿಳೆಯರ ಸಂಖ್ಯೆ ೦ ಪ್ರಮಾಣದಲ್ಲಿ ಕಂಡುಬರುತ್ತದೆ. ಅಂದರೆ ಯಾರು ಈ ಯೋಜನೆಯ ಸದುಪಯೋಗ ಪಡೆದೆ ಇಲ್ಲ. ಕುಟುಂಬ ಯೋಜನೆಯನ್ನು ಅಳವಡಿಸಿಕೊಳ್ಳದ ಮಹಿಳೆಯರ ಸಂಖ್ಯೆ ಶೇ.೮೧.೨೫ರಷ್ಟು ಕಂಡುಬರುತ್ತದೆ. ಇನ್ನು ಅವಿವಾಹಿತರ ಸಂಖ್ಯೆ ಶೇ.೧೮.೭೫ರಷ್ಟು ಇದ್ದು ಇದು ಇವರ ವ್ಯಾಪ್ತಿಗೆ ಬರುವುದಿಲ್ಲ.

ಮೇಲಿನ ಕೋಷ್ಟಕವನ್ನು ಗಮನಿಸಿದಾಗ ಈ ಮಹಿಳೆಯರು ಕೇವಲ ಮನೆಯೊಳಗಿನ ಮತ್ತು ಹೊರಗಿನ ದುಡಿಮೆಗೆ ಮಾತ್ರವಲ್ಲದೆ ಇಂತಹ ಹೆರುವ ದುಡಿಮೆಯಲ್ಲು ಬಹುವಾಗಿ ನರಳುತ್ತಿರುವುದನ್ನು ಕಾಣಬಹುದು. ಇಂತಹ ೩ ವಿಧದ ದುಡಿಮೆಗಳಲ್ಲಿ ತೊಡಗಿರುವುದರಿಂದ ಅವರ ದೇಹ ಸ್ಥಿತಿ ಬಹಳಷ್ಟು ಕೃಶವಾಗಿದೆ. ಹೆಣ್ಣಿನ ಬೆವರ ಹನಿಗಳ ಮೇಲೆ ನಿಂತ ಉತ್ಪಾದನಾ ದುಡಿಮೆ, ಮನೆಯೊಳಗಿನ ಗೋಳಿನ ಕಣ್ಣೀರ ಮೇಲೆ ನಿಂತ ಮನೆಯೊಳಗಿನ ದುಡಿಮೆ, ರಕ್ತ ಹಂಚಿಕೊಂಡು ಕೆಂಪು ರಕ್ತದ ಹನಿಗಳ ಮೇಲೆ ನಿಂತ ಸಂತಾನೋತ್ಪತ್ತಿಯ ದುಡಿಮೆಗೆ ಒಳಗಾಗಿದ್ದಾರೆ. ಹೀಗೆ ಮಹಿಳೆಯರ ಬೆವರ ಹನಿ, ಕಣ್ಣೀರ ಹನಿ ಮತ್ತು ರಕ್ತದ ಹನಿಗಳು ಮಿಶ್ರಣವಾದಾಗ ಇನ್ನು ಅವರ ದೈಹಿಕ ಸ್ಥಿತಿ ಕೆಳಮಟ್ಟಕ್ಕೆ ಇಳಿಯುವುದರಲ್ಲಿ ಆಶ್ಚರ್ಯವೇ ಇಲ್ಲ. ಸತತ ಶ್ರಮ ದೈಹಿಕವಾಗಿ ಕುಸಿತವನ್ನುಂಟು ಮಾಡುವುದಲ್ಲದೆ ಮಾನಸಿಕ ಕ್ಷೋಭೆಗೂ ಕಾರಣವಾಗುತ್ತದೆ.

ಊಟೋಪಚಾರಗಳ ವಿಚಾರದಲ್ಲಿ ಅಥವಾ ಅನಾರೋಗ್ಯಕ್ಕೆ ತುತ್ತಾದರೆ ಉಪಚಾರ ನೀಡುವುದರಲ್ಲಿ ಸ್ತ್ರೀ-ಪುರುಷರ ಮಧ್ಯೆ ಯಾವುದೇ ಲಿಂಗ ತಾರತಮ್ಯವನ್ನು ತೋರುವುದಿಲ್ಲ. ಆದರೆ ಸಂಪ್ರದಾಯದಂತೆ ಮನೆಯ ಗಂಡಸರು ಉಂಡುಳಿದ ಆಹಾರ ತಿನ್ನುವುದರಿಂದ ಪೌಷ್ಠಿಕಾಂಶಗಳು ಕಡಿಮೆ ಪ್ರಮಾಣದಲ್ಲಿ ಲಭ್ಯವಾಗುತ್ತದೆ. ಪ್ರಧಾನವಾಗಿ ಮಹಿಳೆಯರೇ ದುಡಿಮೆ ಕೈಗೊಳ್ಳುವುದರಿಂದ (ಆವಕದ ವಸ್ತುವಿನಂತೆ) ಅವರಿಗೆ ಏನಾದರೂ ಆರೋಗ್ಯ ಸಮಸ್ಯೆ ಉಂಟಾದರೆ ವೈದ್ಯಕೀಯ ಚಿಕಿತ್ಸೆ ಬಹು ಬೇಗ ನೀಡುತ್ತಾರೆ. ಆರೋಗ್ಯ ತಪಾಸಣಾ ವಿಚಾರದಲ್ಲಿ ಸ್ತ್ರೀ-ಪುರುಷರಿಬ್ಬರಿಗೂ ಸಮಾನತೆ ನೀಡಿರುವ ಹಿನ್ನೆಲೆಯಲ್ಲಿ ಪುರುಷ ಪ್ರಧಾನ ವ್ಯವಸ್ಥೆಯ ಕುತಂತ್ರ ಕಾಣದಿರದು. ಮಹಿಳೆ ಅನಾರೋಗ್ಯಕ್ಕೆ ಈಡಾದರೆ ಮನೆಯ ಮಂದಿ ಎಲ್ಲ ಉಪವಾಸವೆ. ಔಷಧೋಪಚಾರಗಳ ಕ್ರಮವೇನೊ ಜರುಗುತ್ತವೆ ಆದರೆ ಅವು ಮಹಿಳೆಯರಿಗೆ ಎಷ್ಟು ಮತ್ತು ಯಾವ ದೃಷ್ಟಿಕೋನದಲ್ಲಿ ನಡೆಯುತ್ತವೆ ಎಂಬುದು ಕೂಡ ಅಷ್ಟೇ ಮುಖ್ಯವಾದ ಸಂಗತಿಯಾಗಿದೆ.

ದುಡಿದದ್ದು ಊಟಕ್ಕೆ ಸಾಲದಾದಾಗ ಇನ್ನು ಅನಾರೋಗ್ಯಕ್ಕೆ ಈಡಾದರೆ ಎಷ್ಟರ ಮಟ್ಟಿಗೆ ಔಷಾದೋಪಚಾರ ಲಭ್ಯವಾಗಬಹುದು ಎಂಬುದನ್ನು ಅರಿಯಬೇಕು. ಸರ್ಕಾರಿ ಆಸ್ಪತ್ರೆಗಳಲ್ಲಿ ದೊರೆಯುವ

ಔಷದೋಪಚಾರ ಕ್ಷಣಿಕವಾಗಿ ದೈಹಿಕ ಆರೋಗ್ಯವನ್ನು ಸುಸ್ಥಿತಿಯಲ್ಲಿಡಬಹುದು. ಆದರೆ ದಿನ ನಿತ್ಯ ಎದುರಿಸಬೇಕಾದ ಸಮಸ್ಯೆಗಳಿಂದ ಆರೋಗ್ಯ ಭಾಗ್ಯ ಇಲ್ಲದೆ ಜೀವನ ಕಳೆಯುತ್ತಿದ್ದಾರೆ. ಇದರಿಂದ ಮುಕ್ತಿ ಸಾಧ್ಯವೇ? ಇನ್ನು ಆರೋಗ್ಯ ವಿಮೆ, ಜೀವ ವಿಮೆಗಳ ಮಾತು ಬಹುದೂರವೆ ಎಂದು ಹೇಳಬಹುದು. ವಲಸೆ ಹೋದ ಸಂದರ್ಭದಲ್ಲಂತೂ ನೀರು, ವಾತಾವರಣ ಎಲ್ಲವೂ ಬದಲಾಗಿ ದೇಹಸ್ಥಿತಿ ಹದಗೆಟ್ಟು ಅಲ್ಲೇ ಮರಣವನ್ನಪ್ಪಿದ ಉದಾಹರಣೆಗಳನ್ನು ಸಹ ಕಾಣಬಹುದಾಗಿದೆ. ಯಾವುದೇ ರೀತಿಯ ಭದ್ರತೆ ಈ ಮಹಿಳೆಯರಿಗೆ ಇಲ್ಲದಿರುವುದರಿಂದ ಅವರ ಜೀವನ ನೀರ ಮೇಲಿನ ಗುಳ್ಳೆಯಂತಾಗಿದೆ.

ಅಡಿ ಟಿಪ್ಪಣಿಗಳು

೧. ಭೈರಪ್ಪ ಕೆ., ನಗರ ಸಮಾಜ, ಪು.೪೪೬

೨. ಅದೇ, ಪು.೩೨೭

೩. ವಿಶ್ವನಾಥ ಕಾರ್ನಾಡ, ತುಳುವರ ಮುಂಬಯಿ ವಲಸೆ, ಪು.೨೬

೪. ಹೆಚ್.ಎಂ.ಹೇಮಲತಾ, ಮಹಿಳಾ ಅಧ್ಯಯನ, ಭಾಗ ೨, ಪು.೬೯

ಅಧ್ಯಾಯ ೫

ಕುಂಚಿ ಕೊರವ ಭಾಷಾ ಸ್ವರೂಪ ಮತ್ತು ಜನಪದ ಹಾಡುಗಳಲ್ಲಿ ಮಹಿಳಾ ಚಿತ್ರಣ

೫

ಕುಂಚಿ ಕೊರವ ಭಾಷಾ ಸ್ವರೂಪ ಮತ್ತು ಜನಪದ ಹಾಡುಗಳಲ್ಲಿ ಮಹಿಳಾ ಚಿತ್ರಣ

ಕುಂಚಿ ಕೊರವ ಭಾಷಾ ಸ್ವರೂಪ

ಭಾಷೆ ಮನುಷ್ಯನಿಗೆ ದೊರೆತ ಒಂದು ಅಮೂಲ್ಯವಾದ ಸಾಧನ. ಇಲ್ಲದಿದ್ದರೆ ಆತ ಪ್ರಾಣಿಗಳಂತೆಯೇ ಬದುಕಬೇಕಾಗಿತ್ತು. ಮನುಷ್ಯನ ಉನ್ನತಿಗೆ ಭಾಷೆ ಪ್ರಮುಖವಾಗಿರಬೇಕು. ಜೊತೆಗೆ ಆ ಭಾಷೆಯನ್ನು ಶ್ರೀಮಂತಗೊಳಿಸುವ ಜನಸಮೂಹವೂ ಬೇಕು. ಭಾಷೆ ಬೆಳೆದಂತೆ ಅವರ ಸಂಸ್ಕೃತಿಯೂ ಬೆಳೆಯುತ್ತಾ ಹೋಗುತ್ತದೆ. ಮೂಲದ ಒಂದು ಭಾಷೆಯಿಂದ ಅನೇಕ ಉಪಭಾಷೆಗಳು ಬೆಳೆದು ಬರುತ್ತವೆ. ಅವು ಕಾಲಾಂತರದಲ್ಲಿ ಇವು ಬೇರೆ ಬೇರೆ ಭಾಷೆಯೇನೋ ಎಂಬಷ್ಟು ಬದಲಾವಣೆಯನ್ನು ಪಡೆಯುತ್ತವೆ. ಲಿಪಿಯನ್ನು ರೂಡಿಸಿಕೊಂಡಿರುವ ಭಾಷೆಗಳ ಕಾಲಕಾಲದ ಬೆಳವಣಿಗೆಯನ್ನು ಆಯಾ ಭಾಷೆಯ ಸಾಹಿತ್ಯದ ಹಿನ್ನೆಲೆಯಲ್ಲಿ ಅರಿಯಬಹುದು. ಆದರೆ ಲಿಪಿಯೇ ಇಲ್ಲದ ಭಾಷೆಯ ಬದಲಾವಣೆ ಅಥವಾ ಅದರ ಇತಿಹಾಸವನ್ನು ಅರಿಯುವುದು ಅಷ್ಟು ಸುಲಭವಲ್ಲ. ಈ ದಿಸೆಯಲ್ಲಿ ಕೊರಮ ಭಾಷೆಯನ್ನು ವಿವೇಚಿಸಬೇಕು. ಕೊರಮರಿಗೂ ಒಂದು ಭಾಷೆಯಿದೆ. ಅದು ಅವರಲ್ಲಿ ಸಾವಿರಾರು ವರ್ಷಗಳಿಂದ ಬಳಕೆಯಲ್ಲಿದೆ. ಕೊರವರು ತಮ್ಮ ಭಾಷೆಯನ್ನು ತಮ್ಮ ತಮ್ಮಲ್ಲಿಯೇ 'ಕುಳುವ' ಭಾಷೆ ಎಂದು ಕರೆಯುತ್ತಾರೆ, ತಮ್ಮನ್ನು 'ಕುಳುವರು' ಎಂದು ಪರಿಚಯಿಸಿ ಕೊಳ್ಳುತ್ತಾರೆ.

ಈ ಬಗ್ಗೆ ರೆವಿ.ಜೆ.ಕೇನ್ ಅವರು "among themselves they call each other Kulavaru" ಎಂದು ಬರೆಯುತ್ತಾರೆ. ಶ್ರೀ ಫ್ರಾನ್ಸಿಸ್ ಅವರು "It is not warthy in this conncetion that the yerukalas are said to call one another kurru or Kura" ಎಂಬುದು ದಾಖಲಿಸಿದ್ದಾರೆ. ಶ್ರೀ ಎಚ್.ಎ.ಸ್ಟೋೀ ಆರ್ಟ್ ಅವರು "but they always speak of themselves as kuru" ಎಂದಿದ್ದಾರೆ. "ತಮಿಳುನಾಡಿನ ಎಲ್ಲ ಕಡೆಯೂ ಕುರುವರು ಗುಡ್ಡಗಾಡು ಜನಾಂಗದವರಾಗಿ ಕಂಡುಬರುತ್ತಾರೆ." ಇವರು ತಮಿಳು ಮೂಲಕ್ಕೆ ಸೇರಿದ ಬುಡಕಟ್ಟು. ಇವರಾಡುವ ಭಾಷೆಯನ್ನು 'ಕುಳುವ', 'ಕುರು', 'ಕುರ' ಎಂದು ವಿದ್ವಾಂಸರು ಗುರುತಿಸಿದ್ದಾರೆ. ಕೊರಮರಲ್ಲಿ ಕೆಲವರು ತಮ್ಮ ಭಾಷೆಯನ್ನು 'ಕೊರಗ' ಭಾಷೆ ಎನ್ನುತ್ತಾರೆ. ಕೊಂಗರು ತಮಿಳು ನಾಡಿನವರು ಎಂಬುದು ಮುಖ್ಯವಾಗುತ್ತದೆ.

ಈಗ ದೊರೆತಿರುವ ಆಧಾರಗಳ ಮೇಲಿಂದ ಈ ಭಾಷೆಯನ್ನು ವಿವೇಚಿಸಿದರೆ ಇದು ಸ್ವತಂತ್ರ ಭಾಷೆಯಲ್ಲ ಎಂಬುದು ತಿಳಿಯುತ್ತದೆ. ಇದು ಪೂರ್ವದ ತಮಿಳಿನ ಒಂದು ಉಪಭಾಷೆ. ಇದು ತಮಿಳಿನಿಂದ ಪೂರ್ವ ದ್ರಾವಿಡದ ಸಂದರ್ಭದಲ್ಲಿಯೇ ಪ್ರತ್ಯೇಕವಾದಂತೆ ತೋರುತ್ತದೆ.[9] ಇವರು ಮೂಲತಃ ಅಲೆಮಾರಿಗಳಾದ್ದರಿಂದ ತೆಲುಗು, ಕನ್ನಡದ ಪ್ರಭಾವಕ್ಕೊಳಗಾಗಿ ಇವುಗಳನ್ನು ತಮ್ಮ ಮೂಲ ಭಾಷೆಯಲ್ಲಿ ಬಳಸುವುದು ಕಂಡುಬರುತ್ತದೆ. ಕೆಲವೊಂದು ವಾಕ್ಯಗಳು ಇಂತಿವೆ.

ಇವಳು ನನ್ನ ಹೆಂಡತಿ - ನಮ್ಮ ಮಂಡ್

ಇವನು ನನ್ನ ಗಂಡ - ನಮ್ಮ ನಮಣಾಗ

ಊರ ಹೊರಗೆ - ಊರ್ ಬರ್ಕ್

ಊರ ಒಳಗೆ - ಊರ್ ಕೊಕ್

ನಾನು ನನ್ನ ತವರಿಗೆ ಹೋಗುತ್ತೇನೆ - ಪರದುಟ ವಕ್ರ

ಹೋಗಿ ಬಾ - ಹೊಯ್ದಾ

ಹೋಗ ಬೇಡ - ಹೊಗಮಾನ್

ನೀ ಏನ್ ದುಡಿತಿ- ನೀ ಎಂತ ದುಡಿಯಕ

ನೀ ಎಂತ ಗಂಡ್ಸ - ನೀ ಎಂತ ಆಮ್ಯಕೆರವು

ಮುಟ್ ಬ್ಯಾಡ - ನನ್ನ ಮುಟ್ ಮಾಣ

ಹೆಂಗ್ಸನು - ನೀನು ಪಂಬುಳ್ಳನು

ಹೆಂಗ್ಸ ಅಲ್ಲ ನಾ - ನಾ ಪಂಬಳ್ಯಲ್ಲ

ಮಾತಾಡ್ ಬ್ಯಾಡ - ವಾಸ್ಯತ್ ಮಾಣ್

ಮಾತಾಡು - ವಾಸ್ಯತ್ ಇತ್ಯಾದಿ

ಈ ಭಾಷೆಯಲ್ಲಿ ಸ್ತ್ರೀಲಿಂಗ ವಾಚಿ, ಪುರುಷಲಿಂಗೀಯ ವಾಚಿ ಬೇರೆಬೇರೆಯಾಗಿವೆ. ಆದರೆ ಈ ಭಾಷೆಯ ಬಗ್ಗೆ ಹೆಚ್ಚಿನ ಅಧ್ಯಯನಗಳು ನಡೆದಿಲ್ಲ. ಲಿಪಿ ಮಾತ್ರ ಕನ್ನಡದಲ್ಲೇ ಬಳಸುವುದು ಕಂಡುಬರುತ್ತದೆ.

ಕುಂಚಿ ಕೊರವ ಜನಪದ ಹಾಡುಗಳಲ್ಲಿ ಮಹಿಳಾ ಚಿತ್ರಣ

ಜನರ ನಡೆ, ನುಡಿ, ಆಚಾರ, ವಿಚಾರ ಇವುಗಳನ್ನೆಲ್ಲ ಸಾಮಾನ್ಯವಾಗಿ ಜನಪದ ಒಳಗೊಂಡಿರುತ್ತದೆ. ಈ ನಡೆ, ನುಡಿ, ಆಚಾರ-ವಿಚಾರಗಳು, ಹಾಡು, ಕಥೆ, ಒಗಟು, ಗಾದೆ, ಲಾವಣಿ ಮುಂತಾದ ರೂಪಗಳಲ್ಲಿ ಜನಪದ ಹೊರಬರುತ್ತದೆ. ಇವುಗಳೆಲ್ಲವೂ ಮೌಖಿಕವಾಗಿ ಜನಪದಿಯರಿಂದ ಸ್ಪಷ್ಟಗೊಂಡಂತವುಗಳಾಗಿವೆ. ಇಂತವುಗಳಲ್ಲಿ ಇಂದು ನಮ್ಮ ಅಧ್ಯಯನಕ್ಕೆ ಲಭ್ಯವಿರುವ ಕುಂಚಿ

ಕೊರವರ ಜನಪದ ಹಾಡುಗಳನ್ನು ಮಾತ್ರ ಆಯ್ದುಕೊಳ್ಳಲಾಗಿದೆ. ಪ್ರತ್ಯೇಕವಾಗಿ ಕೆಲವೊಂದು ಮಹಿಳಾ ಹಾಡುಗಳನ್ನು ಸಂಗ್ರಹಿಸಿದ್ದು, ಅವುಗಳಲ್ಲಿಯ ಮಹಿಳಾ ಪ್ರತಿನಿಧೀಕರಣ, ವಿಶ್ಲೇಷಣೆ ಹಾಗೂ ಅವುಗಳನ್ನು ಉಳಿಸಿ ಬೆಳಸಿಕೊಂಡು ಹೋಗುವುದರಲ್ಲಿ ಮಹಿಳೆಯರ ಜವಾಬ್ದಾರಿ ಏನು? ಅವರಿಗೆ ಏಕೆ ಈ ಜವಾಬ್ದಾರಿ (ಹೊರೆ) ಎಂಬುದನ್ನು ತಿಳಿಯುವುದು ಅಗತ್ಯವಾಗಿದೆ.

ಹಾಡುಗಳು

೧. ಕುಂಚಿ ಕೊರವ ದೇವರ ಹಾಡು

ಕೆಂಪ ಕೆಂಪನೂರ ಕೆಂಪ ಮುಂಡಾಸುನೊರು ಕೆಂಪ
ಹಂಪಳ್ಳಿರವರ ಬರುತದೆ ಕೋಲೆ
ಹಂಪಳ್ಳಿರವರ ಬರುತದೆ ಕೊರವಮ್ಮ
ಹಂಪಳ್ಳಿ ಮಜುಲ ತರುತಾರ ಕೋಲೆ

ಹಸರ ಹಸರ ನೊರ ಹಸರ ಮುಂಡಾಸನೊರು ಹಸರ
ಹೊಸಳ್ಳಿದರೂ ಬರುತ್ತಾರ ಕೋಲೆ ಕೋಲೆ
ಹೊಸಳ್ಳಿಯವರು ಬರುತ್ತಾರ ಕೊರವಮ್ಮ
ಹೊಸಳ್ಳಿ ಮಜಲ ತರುತಾರ

ಕರ ಕರ ನೊರ ಕರ ಮುಂಡಾಸನೊರ ಕರ
ಕೊರವಳ್ಳಿನೊರ ಬರುತಾರ ಕೋಲೆ
ಕೊರವಳ್ಳಿಯವರ ಬರುತಾರ ಕೊರವಮ್ಮ
ಕೊರವಳ್ಳಿ ಮಜುಲು ತರತಾರ

ಕಾಯ ಕಾಯ ಎಂದರೆ ಕಾಯಲ್ಲಿ ದೊರಿದವ
ಕಾಯ ಇರುವುದು ಸವದತ್ತಿ
ಕಾಯನ್ನ ಇರುವುದು ಸವದತ್ತಿ ಪೂಜಾರಿ
ದುಡ್ಡಿಗೆ ನೂರ(೧೦೦) ಕಾಯಿ ಇಳಿವ್ಯಾನ

ಎಣ್ಣೆ ಎಣ್ಣೆ ಎಂದರ ಎಣ್ಣೆ ಎಲ್ಲಿ ದೊರಿದಾತ
ಎಣ್ಣೆ ಇರುವುದು ಅಣ್ಣಿಗೇರಿ
ಎಣ್ಣೆನ್ನ ಇರುವುದು ಅಣ್ಣಿಗೇರಿ ಪೂಜಾರಿ
ದುಡ್ಡಿಗೆ ನೂರ(೧೦೦) ಕಾಯಿ ಇಳುವ್ಯಾನ

ಸೀರೆ ಸೀರೆ ಎಂದರೆ ಸೀರೆಲ್ಲಿ ದೊರಿದಾವ
ಸೀರೆನ್ನ ಇರುವುದು ಸಿರಿಹಟ್ಟಿ
ಸೀರಿರುವುದು ಸಿರಿಹಟ್ಟಿ ಪೂಜಾರಿ

ದುಡ್ಡಿಗೆ ನೂರ(೧೦೦) ಸೀರಿ ಇಳುವ್ಯಾನ
ಕುಬ್ಬಸ ಕುಬ್ಬಸ ಎಂದರೆ ಕುಬಸೆಲ್ಲಿ ದೊರಿದಾವ
ಕುಬ್ಬಸ ಇರುವುದು ಕುಸಗಲ್
ಕುಬ್ಬಸನ್ನ ಇರುವುದು ಕುಸುಗಲ್ಲ ಪೂಜಾರಿ
ದುಡ್ಡಿಗೆ ನೂರು(೧೦೦) ಕುಬ್ಬಸ ಇಳಿವ್ಯಾನ

ಕಳಸ ಕಳಸ ಎಂದರೆ ಕಳಸೆಲ್ಲಿ ತರಸಲಿ
ಕಳಸನ್ನ ಇರುವುದು ಪ್ಯಾಟ್ಯಾಗ ಪೂಜಾರಿ
ದುಡ್ಡಿಗೆ ನೂರು ಕಳಸ ಇಳುವ್ಯಾನ ಪೂಜಾರಿ
ಹುವ ಹುವ ಎಂದರೆ ಹೂವೆಲ್ಲಿ ತರಸಲಿ
ಹುವನ್ನ ಇರುವುದು ಪ್ಯಾಟ್ಯಾಗ ಪೂಜಾರಿ
ದುಡ್ಡಿಗೆ ನೂರ(೧೦೦) ಮಾರು ಇಳಿವ್ಯಾನ

೨. ಹಚ್ಚೆ ಹಾಡು

ಯಾರು ಉಯ್ಯಿದಾರಮ್ಮ ದೇವಲೋಕದ ಅಚ್ಚೆ
ಹಡೆದವ್ವ ಬಂದು ಕೈಯ ನೋಡಿ ಸುವ್ವಯ್ಯ
ಹಡೆದವ್ವ ಬಂದು ಕೈಯ ನೋಡೇನೆಂದಾಳೆ
ಮುತ್ತೈದೆತನಕ ಇವ ಮೇಲು ಸುವ್ವಯ್ಯ.

೩. ಋತುಮತಿಯಾದ ಸಂದರ್ಭದಲ್ಲಿ ಹಾಡುವ ಹಾಡು

ಪುತ್ರಮ್ಮ ಮೈನೆರಮ್ಮ ದಡ್ಯಾಗ ಕುಂತಾಳ್
ಜಾಡಿ (ಕಂಭಿ) ಕೊಟ್ಟೆನವ್ವ ನಿನ್ ಇಂಬ ||ಪ||

ಪಟ್ಟಾನ ಶಾಲ್ಯಾಗ ಇರುವಂತೆ
ಹತ್ತಕಾಲ ನಿಚ್ಚಣಿಕಿ ಹತ್ತಿ ಹೋಗವ ನಿವನ್ಯಾರ
ದುರಗಣ್ಣ ತಂಗಿಗೆ ಸೀರಿ ತರಲು ಹೊಗ್ಯಾನ ಸೋ ಅನ್ನಿರೇ...

ಪಟ್ಟಾನ ಶಾಲ್ಯಾಗ ಇರುವಂತೆ
ಹತ್ತಕಾಲ ನಿಚ್ಚಣಕಿ ಹತ್ತಿ ಹೋಗವ ನಿವನ್ಯಾರ
ಮಂಜಣ್ಣ ತಂಗಿಗೆ ಹೂವ ತರಲಿ ಹೊಗ್ಯಾನ ಸೋ ಅನ್ನಿರೇ...

ಬಂದ ಬಂದವರೆಲ್ಲ ಬಾಗಿನ ನೀಡ್ಯಾನ
ಬಾಗಲ ಕ್ಷೇತ್ರ ಗೆಡೆತಾವ ಸೋ ಅನ್ನಿರೇ...
ಬಾಗಲ ಕ್ಷೇತ್ರವ ಕೆಡತಾವ ಮಾಡೆಂತಿ
ಜರಡಿ ತಂದಾತ ಜನರಿಗೆ ಸೋ ಅನ್ನಿರೇ...

ಬಂದ ಬಂದವರೆಲ್ಲ ಕಟ್ಟಿಗೆ ಕುಂತಾರೆ
ಕಟ್ಟೆನ ಕ್ಷೇತ್ರ ಕೆಡತಾವ ಸೋ ಅನ್ನಿರೇ...

ಕಟ್ಟೆನ ಕ್ಷೇತ್ರ ಕೆಡತಾವ ಸುಮ್ ಕಣೆ
ಬಂಗ್ಡಿ ತಂದಾನ ಜನರಿಗೆ ಸೋ ಅನ್ನಿರೇ...

ಮುಟ್ ಬ್ಯಾಡ ಗೆಳತಿ ಮೈಯ ನೆರತನೆ ಸೋ ಅನ್ನಿರೇ... ||೨||
ನಮ್ಮ ಅವ್ವಗ ಹೋಗಿ ಹೇಳಬ್ಯಾಡ ಸೋ ಅನ್ನಿರೇ... ||೨||

೪. ಋತುಮತಿಯಾದ ಸಂದರ್ಭದಲ್ಲಿ ಹುಡುಗಿ ಹಾಡುವ ಹಾಡು

ಬಂಗಾರ ಈ ಪೆನ್ನ ಬಲಗೈಲಿ ಹಿಡಕೊಂಡ
ಬೆಂಗಳೂರಿಗೆ ಅರ್ಜಿ ಬರದಾನ
ಬೆಂಗಳೂರಿಗೆ ಅರ್ಜಿ ಬರದಾನ ನಮ್ಮ ಅಣ್ಣ
ಸರ್ಕಾರದಾಗ ಸವಪಾಲ

ಸೋಮವಾರ ಬಂತವ್ವ ಯ್ಯಾ ಸೀರಿ ಉಡಲವ್ವ
ಯ್ಯಾ ಯಣ್ಣಾಗ ನೀರ ಕೊಡಲವ್ವ
ಸಣ್ಣ ಅಣ್ಣಗ ಕೊಡಲೇನ ದೊಡ್ಡ ಅಣ್ಣಗ ಕೊಡಲೇನ
ಲಕ್ಷಣ್ಣ ಪತಿ ನನ್ನ ಹಿರಿ ಅಣ್ಣಗ ಕೊಟ್ಟರ
ವಾಲಿಗೆ ಮುತ್ತ ಬಿಗಿಸ್ಯಾನ
ದೇಶಕ ಸ್ಯಾಸಿವೆ ಬಿತ್ಯಾನ ನಮ್ಮ ಕಿರಿ ಅಣ್ಣ
ರೇಶಿಮೆ ಸೀರಿ ಉಡಿಸ್ಯಾನ

೫. ಗಂಡನ ಮನೆಗೆ ಹೆಣ್ಣನ್ನು ಕರೆದುಕೊಂಡು ಹೋಗುವಾಗಿನ ಪದ

ತಲೆಯ ಬಾಚ್ಯಾನಗ ತಾಯಮ್ಮಗ ನಗುಬಂತು
ತಲೆಯ ಬಾಚೆಣ್ಣ ಕರಕೊಂಡು
ತಲೆಯ ಬಾಚೆಣ್ಣ ಕರಕೊಂಡು ಹೋಗ್ಯಾಗ
ತಾಯಮ್ಮಗ ದುಃಖ ಎರಗೀತು

ಬಣ್ಣ ಉಡುವಾಗ ಅವರಣ್ಣಯಗ ನಗುಬಂತು
ಬಣ್ಣ ಉಡ್ಸಿ ಹೆಣ್ಣ ಕರಕೊಂಡು
ಬಣ್ಣ ಉಡ್ಸಿ ಹೆಣ್ಣ ಕರಕೊಂಡು ಹೋಗ್ಯಾಗ
ಅವರಣ್ಣಯ್ಯನ ದುಃಖ ಎರಗೀತು

ಮುತ್ತೀನ ಮಣಿಯ ಎತ್ತಿಬೀದಿಗ ಬಂದೊ
ಮುತ್ತಿನ ಮಣಿಯ ಅಳಬೇಡ
ಮುತ್ತಿನ ಮಣಿಯ ಅಳಬೇಡ ನಿನ್ನ ಒಡೆಯೋ
ನಿಸ್ತ್ರದೈವಾರು ಕಳಸೀವೊ

ಇಲ್ಲಿ ಕೇವಲ ಮಹಿಳೆಯರಿಗೆ ಸಂಬಂಧಿಸಿದಂತಹ ಹಾಡುಗಳನ್ನು ಮಾತ್ರ ಆಯ್ದುಕೊಳ್ಳಲಾಗಿದೆ. ಪ್ರತಿಯೊಂದು ಹಾಡುಗಳಲ್ಲಿ ಮಹಿಳೆಯರನ್ನು ಸಾಂಪ್ರದಾಯಿಕದ ಜೋತಕ (ಸಂಕೇತ)ವಾಗಿ ಮಾತ್ರ

ಪ್ರತಿಬಿಂಬಿಸಿದ್ದಾರೆ. ತವರು ಮನೆಯ ವ್ಯಾಮೋಹ, ಮುತ್ತೈದೆತನದ ಸಂಖೇತಗಳಾಗಿರುವ ಆಭರಣಗಳ ಬಗ್ಗೆ ಹೆಚ್ಚು ಸಾಕ್ಷೀಕರಿಸುವ ಹಾಡುಗಳೇ ಹೆಚ್ಚಾಗಿ ಕಂಡುಬರುತ್ತವೆ. ಯಾವುದೇ ಸಂದರ್ಭಗಳಲ್ಲಿ ಹಾಡುಗಳನ್ನು ಹಾಡುವಾಗಲು ಸಮುದಾಯದ ದೇವರಾದ ಕೊರಮ್ಮ ದೇವಿಯ ಹಾಡನ್ನು ಹಾಡೇ ನಂತರ ಆಯಾ ಕಾರ್ಯದ ಹಾಡು ಹಾಡುತ್ತಾರೆ. ಕೆಲವೊಂದು ಸಂದರ್ಭದಲ್ಲಿ ಈ ಮಹಿಳೆಯರಿಗೆ ಅಜ್ಞಾನವಂತರೇನೊ ಅಂದೆವು ಸರಿ ಆದರೆ ಹಾಡುಗಳನ್ನು ಮೌಖಿಕವಾಗಿಯೇ ಕಲಿತು ಪ್ರಸ್ತುತ ಪಡಿಸುವ ಕಲೆ ಈ ಮಾತನ್ನು ಹಿಂದಕ್ಕಿಡುತ್ತದೆ. ಆದರೆ ಹಾಡುಗಳನ್ನು ಕಟ್ಟಿ ಅವುಗಳನ್ನು ಪಾಲಿಸುವಂತಹ ಕ್ರಿಯೆಯ ಮರ್ಮವನ್ನು ತಿಳಿದಾಗ ನಿಜವಾಗಲೂ ಕಲೆಗೆ ಬೆಲೆ ಇಲ್ಲದಂತಾಗುತ್ತದೆ. ಸ್ತ್ರೀ ಲಿಂಗವನ್ನು ಅಡಿಯಾಳಾಗಿಸಿಕೊಳ್ಳಲು ರೂಪಿತಗೊಂಡಿರುವ ಇಂತಹ ಹಾಡುಗಳು ಪೂರ್ವಾಗ್ರಹವಾಗಿ ಪಿಡಿತವಾದವು ಗಳಾಗಿವೆ ಎಂದು ಹೇಳಬಹುದು.

ತಲೆ ತಲಾಂತರದಿಂದ ಹಿಂದೆ ಇದ್ದ ಸಂಪ್ರದಾಯಗಳು ಹಾಡಿನ ಮೂಲಕ ಮುಂದೆಯೂ ಆಚರಣೆಯಲ್ಲಿರುವಂತೆ ಕಾರ್ಯನಿರ್ವಹಿಸುತ್ತವೆ. ಆದರೆ ಇಲ್ಲಿ ಮುಖ್ಯವಾಗಿ ಹೇಳಬಯಸುವ ವಿಷಯವೆಂದರೆ ಕೆಲವು ಹಾಡುಗಳಲ್ಲಿಯ ಚಿತ್ರಣ ವಾಸ್ತವದಲ್ಲಿ ಆಚರಣೆಯಲಿಲ್ಲ. ಪಟ್ಟಣದ ಪ್ರಭಾವವೋ ಅಥವಾ ಅವರ ಅವಿರತವಾಗಿರುವ ದುಡಿಮೆಯೋ ಎಂದು ಗೊಂದಲಗಳು ಸೃಷ್ಟಿಯಾಗಿವೆ.

ಉದಾಹರಣೆಗೆ ಹಾಡು ೩ರಲ್ಲಿ ಇರುವಂತೆ

“ಮುಟ್ ಬ್ಯಾಡ ಗೆಳತಿ ಮೈಯ ನೆರತನೆ ಸೋ ಅನ್ನಿರೇ...
ನಮ್ಮ ಅವ್ವಗ ಹೋಗ ಹೇಳಬ್ಯಾಡ ಸೋ ಅನ್ನಿರೇ... ||೨||

ಈ ಮೇಲಿನ ಹಾಡಿನ ಸಾಲುಗಳ ಪ್ರಕಾರ ಋತುಮತಿಯಾದಾಗ ಆಕೆ ಸೂತಕದಲ್ಲಿರುತ್ತಾಳೆ. ಸ್ಪರ್ಶಕ್ಕೆ ಆ ಸಂದರ್ಭದಲ್ಲಿ ಅನರ್ಹಳಾಗಿರುತ್ತಾಳೆಂದು ಹೇಳಲಾಗಿದೆ. ಮೈ ನೆರೆತ ಹುಡುಗಿ ಗೆಳತಿಗೆ ಮುಟ್ ಬ್ಯಾಡ ನನ್, ನಾ ಮೈನೆರತೀನಿ ಮುಟ್ಟಿದ್ದಾದರೆ ಅವ್ವ ನೋಡಿ ಬೈದಾಳು ಎಂದು ಹೇಳುತ್ತಾಳೆ. ಅಂದರೆ ಹೆಣ್ಣಿನಿಂದ(ತಾಯಿಯಿಂದ) ಹೆಣ್ಣಿಗೆ(ಮಗಳಿಗೆ) ಇಂತಹ ಸಂಪ್ರದಾಯಿಕ ಆಚರಣೆಗಳು ನಿರ್ದೇಸಲ್ಪಡುತ್ತವೆ. ಆದರೆ ಇಂದಿನ ದಿನ ಈ ಆಚರಣೆ ಇಲ್ಲ. ಕಾರಣ ನಗರೀಕರಣದ ಪ್ರಭಾವ ಅಥವಾ ಅವರ ದುಡಿಮೆ ಎಂದು ಹೇಳಬಹುದು. ಹೆಣ್ಣು ಮಕ್ಕಳು ಹೊರಗೆ ದುಡಿಯಲು ಹೋಗಬೇಕಾದಂತಹ ಸಂದರ್ಭದಲ್ಲಿ ಮನೆಯಲ್ಲಿರುವ ಮಕ್ಕಳೇ ಮನೆಯ ಜವಾಬ್ದಾರಿ ಹೊತ್ತು ಕೊಳ್ಳುವಂತಹ ಅನಿವಾರ್ಯತೆ ಬಹುಶಃ ಈ ಆಚರಣೆ ರೂಢಿಗತಗೊಳಿಸದೆ ಇರಲು ಕಾರಣವಾಗಿರಬಹುದು. ವಿಭಿನ್ನ ಬಗೆಯ ವೈರುದ್ಯತೆಗಳು ಭೂತಕಾಲ ಮತ್ತು ವರ್ತಮಾನಗಳಲ್ಲಿ ಕಾಣಸಿಗುತ್ತವೆ. ಹೀಗೆಂದ ಮಾತ್ರದಲ್ಲಿ ಎಲ್ಲಾ ಆಚರಣೆಗಳು ಬದಲಾಗಿಲ್ಲ, ಮಹಿಳೆಯರನ್ನು ಹೀಗೆ ಇರಬೇಕೆಂದು ಹೇಳಿ ಪುರುಷ ಪ್ರಧಾನ ಸಮಾಜ ತಾನು ನಿರೀಕ್ಷಿಸಿದಂತೆ ಅವರಲ್ಲಿಯೇ ವ್ಯಕ್ತವಾಗುವ ರೀತಿಯಲ್ಲಿ ಗಟ್ಟಿಗೊಳಿಸುತ್ತಿವೆ.

[illegible]

ಮಹಿಳೆಯರಿಗೆ ಮುತ್ತೈದೆತನದ ಬಗ್ಗೆ ಅತಿಯಾದ ನಂಬಿಕೆಗಳನ್ನು ಹೇರಲಾಗಿದೆ. ಸೀರೆ, ಕಾಲುಂಗುರ, ತಾಳಿ, ಕುಂಕುಮ, ಬಳೆ, ಮೂಗುತಿ ಮತ್ತು ಓಲೆ ಇವೆಲ್ಲವುಗಳು ಮಹಿಳೆಯರಿಗೆ ಮುತ್ತೈದೆ ತನದ ಸಂಖೇತಗಳಾಗಿವೆ. ಇವುಗಳನ್ನು ಉಳಿಸಿಕೊಳ್ಳಲು ಆಕೆ ಜೀವನವಿಡಿ ಹೋರಾಡುತ್ತಲೇ ಇರಬೇಕು. ಇದರ ಅರ್ಥ ಗಂಡನ ಶ್ರೇಯೋಭಿವೃದ್ಧಿ ಮತ್ತು ರಕ್ಷಣೆ ಅಂದರೆ ಗಂಡನಿಂದಲೇ ಇವೆಲ್ಲವುಗಳು ಬರುತ್ತವೆ. ಆತ ಸತ್ತರೆ ಆತನ ಹಿಂದೆಯೇ ಹೋಗುತ್ತವೆ. ಮಹಿಳೆ ಗಂಡ ಬರುವ ಮುಂಚೆಯೆ ಇದ್ದ ಮೂಗುತಿ ಮತ್ತು ಕುಂಕುಮ ಇವುಗಳನ್ನು ಕೂಡ ತ್ಯಜಿಸಬೇಕಾಗುತ್ತದೆ. ಇದನ್ನು ಮಹಿಳೆಯರ ಶೋಷಣೆ ಎನ್ನದೆ ಇನ್ನೇನೆಂದು ಕರೆಯಲಾದಿತು. ಗಂಡಸರಿಗೆ ಮಾತ್ರ ಇಂತ ಯಾವ ಮುತ್ತೈದೆತನದ ಕುರುಹುಗಳಾಗಲೀ ಅಥವಾ ತಮ್ಮ ಉಳಿವಿಗಾಗಿ ಹೋರಾಡುವ ಸಂದರ್ಭಗಳೇ ಇಲ್ಲ. ಇದನ್ನು ಗಮನಿಸಿದಾಗ ಮಹಿಳೆಯರಿಗೆ ಅವರದೆಂದು ಏನು ಇಲ್ಲ. ಎಲ್ಲವನ್ನು ಆಕೆಯ ಆಯಾ ಸಂದರ್ಭಕ್ಕನುಗುಣವಾಗಿ ತ್ಯಜಿಸುವಂತೆಯೇ ಸಮುದಾಯ ಆಕೆಗೆ ತಾತ್ವಿಕರಿಸುತ್ತದೆ. ಜನಪದ ಹಾಡುಗಳು ಸಾಂಪ್ರದಾಯಿಕ ನಡಾವಳಿಗಳನ್ನು ಮಹಿಳೆಯರಿಗೆ ಒತ್ತಿ ಹೇಳುತ್ತವೆ. ಮಹಿಳೆಯರಿಂದಲೇ ಇಂತಹ ಗೀತೆಗಳ ಉಳಿವನ್ನು ಸಹ ಮಾಡಿಸುತ್ತಾರೆ. ಅಂದರೆ ಅವರೇ ಹಾಡಿ ಅವರೇ ಅನುಭವಿಸಬೇಕಾದಂತಹ ಸಂದರ್ಭಗಳನ್ನು ಪುರುಷ ಪ್ರಧಾನತೆ ಅತೀ ನಾಜೂಕಿನಿಂದ ಸೃಷ್ಟಿ ಮಾಡಿಕೊಟ್ಟಿದೆ.

ಅಡಿ ಟಿಪ್ಪಣಿಗಳು

೧. ಲಕ್ಕಪ್ಪಗೌಡ ಎಚ್.ಜೆ.(ಸಂ), **ಕರ್ನಾಟಕದ ಬುಡಕಟ್ಟುಗಳು,** (ಲೇ)ಡಾ.ಬಿ.ಪಿ. ರಾಮಯ್ಯ, **ಕೊರಮರು,** ಪು.೨೮೮

೨. ಮಲ್ಲಿಕಾರ್ಜುನ ಬಿ.ಮಾನ್ಪಡೆ, **ಕೊರಮ,** ಪು.೯೧

೩. ಇತರೇ ಹಾಡುಗಳ ಸಂಗ್ರಹ - ಕುಂಚಿ ಕೊರವ ಮಹಿಳೆಯರಾದ ಸುಂಕಮ್ಮ ಕೊಪ್ಪಳ, ಗಂಗವ್ವ ಕದರಿ, ದುರಮ್ಮ ಕವಲೂರು, ಮತ್ತು ಗಂಗಮ್ಮ ಕೊಪ್ಪಳ ಇವರಿಂದ.

ಅಧ್ಯಾಯ ೬

ಸರ್ಕಾರಿ ಯೋಜನೆಗಳು ಹಾಗೂ ಮಹಿಳಾ ಅಭಿವೃದ್ಧಿ

೬

ಸರ್ಕಾರಿ ಯೋಜನೆಗಳು ಹಾಗೂ ಮಹಿಳಾ ಅಭಿವೃದ್ಧಿ

ಸ್ವಾತಂತ್ರ್ಯದ ನಂತರದ ಪ್ರಾರಂಭದ ದಿನಗಳಲ್ಲಿ ಆರ್ಥಿಕ ಮತ್ತು ಸಮುದಾಯ ಅಭಿವೃದ್ಧಿ, ಭೂ ಸುಧಾರಣೆ ಹಾಗೂ ಇತರ ಸಮಾಜವಾದಿ ಪರಿಕ್ರಮಗಳಿಂದ ಮಹಿಳೆಯರೂ ಸೇರಿದಂತೆ ಎಲ್ಲಾ ವರ್ಗದ ಜನರ ಅಭಿವೃದ್ಧಿಯನ್ನು ಸಾಧಿಸಬಹುದೆಂದು ನಂಬಲಾಗಿತ್ತು. ಹಾಗಾಗಿ ಸಾಮಾನ್ಯ ಅಭಿವೃದ್ಧಿ ಕಾರ್ಯಗಳಲ್ಲಿ ಮಹಿಳಾ ಅಭಿವೃದ್ಧಿ ಕಾರ್ಯಗಳು ಅಂತರ್ಗತಗೊಂಡಿದ್ದವು. ಮಹಿಳೆಯರಿಗಾಗಿ ವಿಶೇಷ ಕಾರ್ಯನೀತಿ ಯೋಜನೆಗಳು ಇರಲಿಲ್ಲ. ಜೊತೆಗೆ ಅಭಿವೃದ್ಧಿಯ ಲಾಭ, ಸಾಮಾಜಿಕ ನ್ಯಾಯ, ಸಮಾನತೆ ಸಾಧನೆಯ ಪ್ರತಿಫಲಗಳು ಎಲ್ಲಾ ವರ್ಗದ ಜನರನ್ನು ಸಮಾನವಾಗಿ ತಲುಪುತ್ತಿಲ್ಲ. ಅದರಲ್ಲೂ ಮಹಿಳೆಯರು ಅವುಗಳಿಂದ ದೂರವೇ ಉಳಿದಿದ್ದಾರೆ. ಬಡತನ, ನಿರುದ್ಯೋಗ, ಅನಕ್ಷರತೆ ಹಾಗೂ ಅನಾರೋಗ್ಯದಿಂದ ಹೆಚ್ಚು ನರಳುತ್ತಿರುವವರು ಮಹಿಳೆಯರೆ ಎಂಬುದನ್ನು ಮನಗಂಡು ಸರ್ಕಾರ ಎಲ್ಲಾ ಸಮುದಾಯದ(ಯಾವುದೇ ಜಾತಿ, ಜನಾಂಗ, ವರ್ಗವಾಗಿರಬಹುದು)ವರಿಗೆ ಅನೇಕ ಯೋಜನೆಗಳನ್ನು ರೂಪಿಸಿತು. ಈ ನಿಟ್ಟಿನಲ್ಲಿ 'ಸಾಮುದಾಯಿಕ ಅಭಿವೃದ್ಧಿ' ಚಾಲನೆಗೊಂಡಿತು. ಸಮುದಾಯಿಕ ಅಭಿವೃದ್ಧಿ ಎಂದರೆ, ವಿಶ್ವಸಂಸ್ಥೆಯ ಪ್ರಕಾರ-

"ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯ ಮೂಲಕ ರಾಷ್ಟ್ರದ ಸಮಗ್ರ ಪ್ರಗತಿಯನ್ನು ಸಾಧಿಸಲು ಸರ್ಕಾರಿ ಅಧಿಕಾರಿಗಳ ಸಹಾಯದಿಂದ ಜನರ ಪ್ರಯತ್ನ ಮತ್ತು ಸಹಭಾಗಿತ್ವವನ್ನು ಕ್ರೋಢೀಕರಿಸಿ ಅಳವಡಿಸುವ ಕ್ರಿಯೆ"[೧]ಯೇ ಸಾಮುದಾಯಿಕ ಅಭಿವೃದ್ಧಿ ಎಂದು ಹೇಳಿದೆ.

ಈ ಮೇಲಿನ ವ್ಯಾಖ್ಯಾನವನ್ನು ಗಮನಿಸಿದಾಗ ರಾಷ್ಟ್ರದ ಪ್ರಗತಿಗೆ ಜನರ ಹಿತಾಸಕ್ತಿ ಅತೀ ಮುಖ್ಯ. ಆ ಹಿತಸಕ್ತಿ ಈಡೇರಬೇಕಾದರೆ ಯೋಜನೆ ರೂಪಿಸುವವರು ಮತ್ತು ಅದರ ಲಾಭ ಪಡೆಯುವವರ ಪ್ರಯತ್ನ ಅಥವಾ ಪಾಲ್ಗೊಳ್ಳುವಿಕೆ ಅತ್ಯಗತ್ಯವಾಗಿದೆ ಎಂದು ತಿಳಿದುಬರುತ್ತದೆ. ಕೇವಲ ಸಮಾಜದ ಒಂದು ವರ್ಗ ಅಂದರೆ ಪುರುಷ ವರ್ಗ ಒಂದೇ ಅಭಿವೃದ್ಧಿ ಹೊಂದಿದರೆ ಸಾಲದು ಇನ್ನೊಂದು ಬಹುಮುಖ್ಯ ವರ್ಗವಾದ ಮಹಿಳಾ ವರ್ಗವು ಕೂಡ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಪಾಲ್ಗೊಂಡು ಅಭಿವೃದ್ಧಿ ಹೊಂದಿದಾಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ. ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರ

[illegible]

[illegible]

[illegible]

[illegible]

ಎಲ್ಲದರಲ್ಲೂ ಹಿಂದುಳಿದಿದ್ದು ಇಂತಹ ಸರ್ಕಾರಿ ಯೋಜನೆಗಳ ಮೂಲಕ ಅಭಿವೃದ್ಧಿ ಪಥದತ್ತ ಸಾಗಿದಾಗ ಮಾತ್ರ ಸಮಾಜದ ಮುಖ್ಯ ವಾಹಿನಿಯಲ್ಲಿ ತಮ್ಮ ಸ್ಥಾನ ಭದ್ರಪಡಿಸಿಕೊಳ್ಳುತ್ತಾರೆ.

ವಿಶೇಷವಾಗಿ ಸಮಾಜದ ಅಂಚಿಗೆ ತಳ್ಳಲ್ಪಟ್ಟ ಸಮುದಾಯದ ಮಹಿಳೆಯರ ಅಭಿವೃದ್ಧಿಗೆ ವಿಶೇಷ ಯೋಜನೆ ರೂಪಿಸಿ ಅವು ಸಫಲತೆ ಪಡೆದುಕೊಂಡಾಗ ಮಾತ್ರ ನ್ಯಾಯಯುಕ್ತವಾದ ಅಭಿವೃದ್ಧಿ ಹೊಂದಲು ಸಾಧ್ಯ. ಇಂತಹ ಸಮುದಾಯಗಳಲ್ಲಿ ನಮ್ಮ ಅಧ್ಯಯನಕ್ಕೆ ಆಯ್ದುಕೊಂಡ ಕುಂಚಿ ಕೊರವ ಸಮುದಾಯವು ಒಂದು. ಕುಂಚಿ ಕೊರವರಲ್ಲಿ ಪ್ರತ್ಯೇಕವಾಗಿ ಮಹಿಳೆಯರ ಬದುಕು ಮತ್ತು ಬವಣೆಯನ್ನು ಆಯ್ದು ಕೊಳ್ಳಲಾಗಿದೆ. ಇವರಿಗೆ ಸಮಾಜದ ಇತರ ಜನಸಮುದಾಯಗಳಲ್ಲಿ ಬೆರೆತು ಅವರಿಗೆ ಸರಿ ಸಮಾನವಾಗಿ ತಮ್ಮ ಬದುಕು ರೂಪಿಸಿಕೊಳ್ಳಲು ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗೂ ಶೈಕ್ಷಣಿಕವಾಗಿ ಬೆಳೆಯಲು ಅಗತ್ಯವಾದ ಯೋಜನೆಗಳು ಮುಖ್ಯ. ಪರಿಶಿಷ್ಟಜಾತಿಗೆ ಸೇರಿದ ಇವರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಉಪಯುಕ್ತವಾದ ಅನೇಕ ಯೋಜನೆಗಳನ್ನು ರೂಪಿಸಿವೆ/ಜಾರಿಗೊಳಿಸಿವೆ. ಅಸ್ಪೃಶ್ಯತೆ, ಜಾತೀಯತೆಯಂತಹ ಅಮಾನವೀಯ ಆಚರಣೆಯಿಂದ ಹೊರಬರಲು ಇಂತಹ ಯೋಜನೆಗಳೇ ದಾರಿದೀಪ. ಆದರೆ ಈ ಯೋಜನೆಗಳು ನಿಜವಾಗಿಯೂ ಫಲಕಾರಿಯಾಗಿವೆಯೇ ಅಥವಾ ವಿಫಲವಾಗಿವೆಯೇ ಎಂಬುದು ಅರಿಯುವುದು ಕೂಡ ಅಷ್ಟೇ ಮುಖ್ಯ.

ಇಂದು ನಮ್ಮ ಅಧ್ಯಯನದಲ್ಲಿ ವಿವಿಧ ಇಲಾಖೆಗಳಿಂದ ಜಾರಿಗೊಳ್ಳುವ ಮಹಿಳೆ ಮತ್ತು ಬಾಲಕಿಯರಿಗೆಂದೇ ಇರುವ ಸಾಮಾನ್ಯ(ಎಲ್ಲಾ ಮಹಿಳೆ ಮತ್ತು ಬಾಲಕಿಯರಿಗೆ ಅನ್ವಯವಾಗುವ) ಹಾಗೂ ಪ್ರತ್ಯೇಕ ಇವರ ಜಾತಿಗೆಂದೇ ಇರುವ ಯೋಜನೆಗಳಲ್ಲಿ ಕೆಲವೊಂದನ್ನು ಆಯ್ದುಕೊಳ್ಳಲಾಗಿದೆ, ಸಾಮಾನ್ಯ ಯೋಜನೆಗಳಲ್ಲಿ ಈ ಮಹಿಳೆಯರಿಗೆ ಇರುವ ಮೀಸಲಾತಿ, ಇದರ ಸಫಲತೆ ಮತ್ತು ವಿಫಲತೆ ಹಾಗೂ ಇವರ ಜಾತಿಗೆಂದೇ ಇರುವ ಯೋಜನೆಗಳಲ್ಲಿ ಮಹಿಳೆಯರ ಪಾಲುದಾರಿಕೆಯ ಬಗ್ಗೆ ಚರ್ಚಿಸಲಾಗಿದೆ.

೬.೦. ಕುಂಚಿ ಕೊರವ ಮಹಿಳೆಯರಿಗಾಗಿ ಇರುವ ಸರ್ಕಾರದ ಯೋಜನೆಗಳು : ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಜಾರಿಗೊಳ್ಳುವಂತಹ ಯೋಜನೆಗಳು

ಉದ್ಯೋಗಿನಿ

ಮಹಿಳೆಯರು ಆದಾಯ ಉತ್ಪನ್ನಕರ ಚಟುವಟಿಕೆಗಳಲ್ಲಿ ತೊಡಗಿ ಸ್ವಯಂ ಉದ್ಯೋಗಿಗಳಾಗಲು ಸಾಲ ಮತ್ತು ಸಹಾಯಧನ ನೀಡುವ ಮೂಲಕ ಉತ್ತೇಜನ ನೀಡುವ ಕಾರ್ಯ ಈ ಉದ್ಯೋಗಿನಿ ಯೋಜನೆ ಕೈಗೊಂಡಿದೆ. ಇಲ್ಲಿ ನಿಗಮವು ಗುರುತಿಸಿದ ೧೦೧ ಚಟುವಟಿಕೆಗಳಿಗೆ ಅಥವಾ ಇನ್ನಾವುದೇ ಲಾಭದಾಯಕ ಚಟುವಟಿಕೆಗಳಿಗೆ ಸಾಲ ಮತ್ತು ಸಹಾಯ ಧನ ನೀಡಲಾಗುವುದು. ಇವುಗಳ ಪೈಕಿ ಒಂದನ್ನು ಆಯ್ಕೆ ಮಾಡಿಕೊಂಡು ಮಹಿಳೆಯರು ಆದಾಯ ಉತ್ಪನ್ನಕರ ಚಟುವಟಿಕೆಯಲ್ಲಿ ತೊಡಗಬಹುದು.

[illegible]

[illegible]

[illegible]

[illegible]

[illegible]

ಈ ಯೋಜನೆಯ ಗರಿಷ್ಠ ಯೋಜನಾ ವೆಚ್ಚ ರೂ.೧.೦೦ ಲಕ್ಷ ಆಗಿದ್ದು ಬ್ಯಾಂಕುಗಳು ಮತ್ತು ಇತರೆ ಆರ್ಥಿಕ ಸಂಸ್ಥೆಗಳ ಮೂಲಕ ಸಾಲವನ್ನು ಪಡೆಯಬಹುದಾಗಿದೆ.

ವಿಶೇಷ ವರ್ಗದ ಮಹಿಳೆಯರೆಂದು ಕರೆಸಿಕೊಳ್ಳುವವರಿಗೆ (ಪ.ಜಾತಿ/ಪ.ಪಂಗಡ, ವಿಧವೆಯರು ಮತ್ತು ಅಂಗವಿಕಲೆಯರು) ಯೋಜನಾ ವೆಚ್ಚದ ಶೀರಷ್ಟು (ಗರಿಷ್ಠ ರೂ.೧೦,೦೦೦) ಹಾಗೂ ಇತರೆ ಮಹಿಳೆಯರಿಗೆ ಯೋಜನಾ ವೆಚ್ಚದ ಶೇ.೨೦ರಷ್ಟು(ಗರಿಷ್ಠ ರೂ. ೭,೫೦೦)ನಿಗಮದಿಂದ ಸಹಾಯಧನ ನೀಡಲಾಗುತ್ತದೆ. ಕುಟುಂಬದ ವಾರ್ಷಿಕ ಆದಾಯ ರೂ ೪೦,೦೦೦ ಮೀರದ ೧೮ ರಿಂದ ೪೫ ವರ್ಷದೊಳಗಿನ ಮಹಿಳೆಯರು ಈ ಯೋಜನೆಯ ಸೌಲಭ್ಯಕ್ಕೆ ಅರ್ಹರಿರುತ್ತಾರೆ. ವಿಧವೆ, ಸಂಕಷ್ಟಕ್ಕೊಳಗಾದ ಮಹಿಳೆ ಮತ್ತು ಅಂಗವಿಕಲ ಮಹಿಳೆಯರಿಗೆ ಯಾವುದೇ ಆದಾಯದ ಮೀತಿ ಇರುವುದಿಲ್ಲ. ಸಾಲ ಮಂಜೂರಾದ ನಂತರ ಸಾಲ ಬಿಡುಗಡೆಯ ಮುನ್ನ ಈ ಯೋಜನೆಯ ಫಲಾನುಭವಿಗಳಿಗೆ ೩ ದಿನಗಳ ಉದ್ಯಮಶೀಲತೆ ತರಬೇತಿ ನೀಡಲಾಗುತ್ತದೆ. ನಿಗಮವು ಸಹಾಯಧನವನ್ನು ಆಯಾ ಜಿಲ್ಲೆಗಳ ಸಹಾಯಕ ನಿರ್ದೇಶಕ/ಉಪ ನಿರ್ದೇಶಕರ ಮೂಲಕ ಸಹಾಯ ಧನವನ್ನು ನೀಡುತ್ತದೆ.

ಮಹಿಳಾ ತರಬೇತಿ ಯೋಜನೆ

ಅಸಹಾಯಕ ಮಹಿಳೆಯರು ಆರ್ಥಿಕವಾಗಿ ಸ್ವಾವಲಂಬಿಗಳಾಗಲು ಅವರಲ್ಲಿ ಉದ್ಯಮಶೀಲತೆಯನ್ನು ಬೆಳೆಸಿ, ಉದ್ಯಮ ಸ್ಥಾಪನೆಗೆ ಉಚಿತವಾಗಿ ಕೌಶಲ್ಯ ತರಬೇತಿ ನೀಡುವುದು. ಈ ಯೋಜನೆಯ ಉದ್ದೇಶ ಚಿಕ್ಕ ಉದ್ಯಮಗಳನ್ನು ಸ್ವಂತವಾಗಿ ಸ್ಥಾಪಿಸುವ ಇಚ್ಛೆಯುಳ್ಳ ಮಹಿಳೆಯರಿಗೆ ಯೋಜನಾ ವರದಿ ತಯಾರಿಕೆ, ಸಾಮಾನ್ಯ ಲೆಕ್ಕಪತ್ರ ನಿರ್ವಹಣೆ, ಕಚ್ಚಾ ಸಾಮಗ್ರಿ ನಿರ್ವಹಣೆ, ಮಾರುಕಟ್ಟೆ ಬಗ್ಗೆ ಸರ್ಕಾರ ರೂಡ್ ಸೆಟ್, ಅರ್ಹ ಸ್ವಯಂ ಸೇವಾ ಸಂಸ್ಥೆಗಳು ಮತ್ತು ನೋಂದಣಿಯಾಗಿರುವ ಇತರೆ ಸರ್ಕಾರೇತರ ಸಂಸ್ಥೆಗಳ ಮೂಲಕ ತರಬೇತಿ ವ್ಯವಸ್ಥೆ ಮಾಡಿರುತ್ತದೆ. ವಿಧವೆಯರು, ಅಸಹಾಯಕ ಮಹಿಳೆಯರು ಹಾಗೂ ಅಂಗವಿಕಲ ಮಹಿಳೆಯರಿಗೆ ಆದ್ಯತೆ ಇದ್ದು, ಇವರಿಗೆ ಆದಾಯ ಮಿತಿ ಇರುವುದಿಲ್ಲ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರಿಗೆ ವಾರ್ಷಿಕ ಮಿತಿ ರೂ ೪೨.೪೧೨ ಮತ್ತು ಇತರೆ ಮಹಿಳೆಯರಿಗೆ ರೂ ೪೦.೦೦೦ ಇದ್ದು ಫಲಾನುಭವಿಗಳ ವಯೋಮಿತಿ ೧೮ ರಿಂದ ೪೫ ವರ್ಷದೊಳಗಿರಬೇಕು. ವಿವಿಧ ಕೌಶಲ್ಯ ತರಬೇತಿಗಳಿಗೆ ನಿಗದಿಯಾಗಿರುವ ವಿದ್ಯಾರ್ಹತೆಯನ್ನು ಫಲಾನುಭವಿಗಳು ಹೊಂದಿರಲೇಬೇಕು.

ಅಮೃತ ಯೋಜನೆ

ಈ ಯೋಜನೆಯಡಿ ವಿಧವೆಯರಿಗೆ ಮತ್ತು ಸಮೀಕ್ಷೆಯಲ್ಲಿ ಗುರುತಿಸಲ್ಪಟ್ಟ ದೇವದಾಸಿ ಮಹಿಳೆಯರಿಗೆ ಹಾಗೂ ಜೀವನಾಧಾರವಿಲ್ಲದ ನಿರ್ಗತಿಕ ಮಹಿಳೆಯರಿಗೆ ತಲಾ ಒಂದೊಂದು ಹಾಲು ಕರೆಯುವ ಹಸು ಅಥವಾ ಎಮ್ಮೆಯನ್ನು ಖರೀದಿಸಲು ಘಟಕ ವೆಚ್ಚ ರೂ.೨೦,೦೦೦ ಗಳಲ್ಲಿ ರೂ.

೧೦,೦೦೦ ಗಳ ಸಹಾಯ ಧನವನ್ನು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಮತ್ತು ಇನ್ನುಳಿದ ರೂ.೧೦,೦೦೦ ಗಳನ್ನು ರಾಷ್ಟ್ರೀಕೃತ ಬ್ಯಾಂಕುಗಳು/ಕೋ-ಆಪರೇಟೀವ್ ಬ್ಯಾಂಕುಗಳ ಮೂಲಕ ಸಾಲ ಒದಗಿಸುತ್ತದೆ. ಅರ್ಜಿದಾರರು ೧೮ ರಿಂದ ೬೦ ವರ್ಷದ ವಯೋಮಾನದವರಾಗಿದ್ದು, ಕುಟುಂಬದ ವಾರ್ಷಿಕ ವರಮಾನ ರೂ. ೪೦,೦೦೦ ಕ್ಕೆ ಮೀರಿರಬಾರದು. ಅರ್ಜಿದಾರರು ಹೈನುಗಾರಿಕೆಯಲ್ಲಿ ಅನುಭವ ಹೊಂದಿದವರಾಗಿರಬೇಕು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ದೇವದಾಸಿ ಪುನರ್ವಸತಿ ಜಿಲ್ಲಾ ಮಟ್ಟದ ಇಲಾಖೆ ಮುಖಾಂತರ ಯೋಜನೆ ಜಾರಿಗೊಳ್ಳುತ್ತದೆ.

ಸಾಂತ್ವನ

ದೌರ್ಜನ್ಯ ಹಾಗೂ ಅತ್ಯಾಚಾರಕ್ಕೆ ಒಳಪಟ್ಟ ಮಹಿಳೆಯರಿಗೆ ಆರ್ಥಿಕ ಸಹಾಯ, ಕಾನೂನು ನೆರವು ನೀಡುವುದು, ಆಶ್ರಯ ಒದಗಿಸುವುದು ಹಾಗೂ ಸ್ವ-ಉದ್ಯೋಗ ಮಾಡಲು ಅನುಕೂಲವಾಗುವಂತೆ ತರಬೇತಿ ನೀಡಿ ಮಹಿಳೆಯರು ಸ್ವಾವಲಂಬಿಗಳಾಗಿ ಬದುಕುವಂತೆ ಮಾಡುವುದೇ ಈ ಯೋಜನೆಯ ಉದ್ದೇಶವಾಗಿರುತ್ತದೆ. ತೊಂದರೆಗೊಳಗಾದ ಮಹಿಳೆಯರು ಉಚಿತ ದೂರವಾಣಿ ಸಂಖ್ಯೆ ೧೯೧ಕ್ಕೆ ಕರೆ ಮಾಡಿ ನೆರವು ನೀಡುವಂತೆ ಕೇಳಿಕೊಳ್ಳಬಹುದು. ಬೆಳಿಗ್ಗೆ ೮ ರಿಂದ ರಾತ್ರಿ ೮ರವರೆಗೆ ದೂರು ಸ್ವೀಕರಿಸುವ ವ್ಯವಸ್ಥೆ ಇರುತ್ತದೆ. ಯಾವುದೇ ಆಪತ್ತಿಗೆ ಸಿಲುಕಿದಲ್ಲಿ ಪೋಲೀಸರ ನೆರವಿನಿಂದ ರಕ್ಷಣೆ ನೀಡಲಾಗುವುದು. ರಾಜ್ಯದಲ್ಲಿನ ಎಲ್ಲಾ ೨೭ ಜಿಲ್ಲಾ ಕೇಂದ್ರಗಳಲ್ಲಿ ಆಯ್ದ ೧೧ ತಾಲೂಕುಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ೩೯ ಮಹಿಳಾ ಸಹಾಯವಾಣಿ ಕೇಂದ್ರಗಳನ್ನು ತೆಗೆಯಲಾಗಿದೆ. ಸಹಾಯವಾಣಿ ಮೂಲಕ ದಾಖಲಾದ ಪ್ರಕರಣಗಳನ್ನು ಜಿಲ್ಲಾ ಮಟ್ಟದ ಸಮಿತಿಯ ಮುಂದಿಟ್ಟು ಪ್ರಕರಣಗಳ ತೀವ್ರತೆಗೆ ಅನುಗುಣವಾಗಿ ಪರಿಹಾರ ನೀಡಲಾಗುತ್ತದೆ.

ಕಾನೂನು ನೆರವು ಅವಶ್ಯಕತೆಯಿರುವ ಪ್ರತಿಯೊಂದು ಪಟ್ಟಣಗಳಲ್ಲಿನ ವಕೀಲರಿಗೆ ಮಹಿಳೆಯರ ಪರವಾಗಿ ಗೆದ್ದಲ್ಲಿ ವಕೀಲರಿಗೆ ರೂ.೨೦೦೦ ಹಾಗೂ ಸದರಿ ಪ್ರಕರಣವನ್ನು ಮಹಿಳೆಯರ ಪರವಾಗಿ ಗೆದ್ದಲ್ಲಿ ವಕೀಲರಿಗೆ ಹೆಚ್ಚುವರಿಯಾಗಿ ೨೦೦೦ ರೂ.ಗಳನ್ನು ನೀಡಲಾಗುವುದು. ದೌರ್ಜನ್ಯಕ್ಕೆ ಒಳಗಾದ ಮಹಿಳೆಯರು ಮರಣ ಹೊಂದಿದ ಪಕ್ಷದಲ್ಲಿ ಅಂತಹ ಮಹಿಳೆಯರ ಮಕ್ಕಳ ಹೆಸರಿನಲ್ಲಿ ೫೦೦೦ ರೂ.ಗಳಿಂದ ೧೦,೦೦೦ ರೂಪಾಯಿಗಳನ್ನು ಅವರ ಶಿಕ್ಷಣ ಮತ್ತು ಪುನರ್ವಸತಿಗಾಗಿ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಠೇವಣಿ ಇಡಲಾಗುವುದು.

ವಿಧವೆ ಮತ್ತು ದೇವದಾಸಿಯರ ವಿವಾಹಕ್ಕೆ ನೆರವು

ನಿರ್ಗತಿಕ ವಿಧವೆಯರ ಮತ್ತು ದೇವದಾಸಿಯಂತಹ ಅನಿಷ್ಟ ಪದ್ಧತಿಯಲ್ಲಿ ಸಿಲುಕಿದವರು ಜೀವನದ ಮುಖ್ಯ ವಾಹಿನಿಯಲ್ಲಿ ಸೇರಿ ಜೀವನ ನಡೆಸಲು ಅನುಕೂಲವಾಗುವಂತೆ ಈ ಯೋಜನೆ ಮೂಲಕ ನೆರವು ನೀಡಲಾಗುತ್ತದೆ.

[illegible]

[illegible]

[illegible]

[illegible]

[illegible]

[illegible]

ನಿರ್ಗತಿಕ ವಿಧವೆಯರಿಗೆ ಮರು ವಿವಾಹಕ್ಕಾಗಿ ೧೦೦೦ ರೂಪಾಯಿಗಳ ಸಹಾಯ ಧನ ನೀಡಲಾಗುವುದು. ಆದರೆ ಅವರು ೧೮ ರಿಂದ ೩೫ ವರ್ಷ ವಯಸ್ಸಿನವರಾಗಿರಬೇಕು ಎಂದು ನಿರ್ದೇಶಿಸಿದೆ ಮತ್ತು ಕರ್ನಾಟಕದಲ್ಲಿ ೫ ವರ್ಷಕ್ಕೂ ಮೇಲ್ಪಟ್ಟು ವಾಸವಾಗಿರಬೇಕು ಎಂದು ನಿಯಮ ರೂಪಿಸಿದೆ. ದಂಪತಿಗಳಿಗೆ ವಿವಾಹದ ಖರ್ಚು ಭರಿಸಲು ೫೦೦೦ ರೂ.ಗಳನ್ನು ನೀಡಿ, ಉಳಿದ ೫೦೦೦ ರೂ.ಗಳನ್ನು ಮಹಿಳೆಯರ ಹೆಸರಿನಲ್ಲಿ ರಾಷ್ಟ್ರೀಯ ಉಳಿತಾಯ ಪ್ರಮಾಣ ಪತ್ರದಲ್ಲಿ ತೊಡಗಿಸಲಾಗುವುದು. ದಂಪತಿಗಳಲ್ಲಿ ವಧುವು ದೇವದಾಸಿಯಾಗಿದ್ದಲ್ಲಿ ೧೦,೦೦೦ ರೂ.ಗಳನ್ನು ಧನ ಸಹಾಯವಾಗಿ ಕೊಡುತ್ತಾರೆ.

ಸಾಮಾಜಿಕ ಪಿಡಿಗುಗಳ ನಿವಾರಣೆಗೆ ವಿಶೇಷ ಘಟಕ

ಸಾಮಾಜಿಕ ಪಿಡುಗುಗಳಾದ ವರದಕ್ಷಿಣೆ, ದೇವದಾಸಿ ಪದ್ಧತಿ, ಮಹಿಳೆಯರ ಮೇಲಿನ ದೌರ್ಜನ್ಯ ಮುಂತಾದವುಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಕಾರ್ಯ ಜವಾಬ್ದಾರಿ ಈ ಘಟಕದ್ದಾಗಿದೆ. ೧೯೬೧ ರ ವರದಕ್ಷಿಣೆ ನಿಷೇಧ ಅಧಿನಿಯಮ, ದೇವದಾಸಿ (ಸಮರ್ಪಣ ನಿಷೇಧ) ಅಧಿನಿಯಮ ೧೯೮೨, ಬಾಲ್ಯ ವಿವಾಹ (ನಿಷೇಧ) ಅಧಿನಿಯಮ ೧೯೨೯ ಇವುಗಳ ಬಗ್ಗೆ ಮತ್ತು ಸಮಾಜದಲ್ಲಿ ರೂಢಿಯಲ್ಲಿರುವ ಇತರೇ ಸಾಮಾಜಿಕ ಪಿಡುಗುಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ಜಿಲ್ಲೆಗಳಲ್ಲಿ ಪ್ರಚಾರ ಕಾರ್ಯಕ್ರಮಗಳನ್ನು ಈ ವಿಶೇಷ ಘಟಕ ಹಮ್ಮಿಕೊಳ್ಳುತ್ತದೆ.

ಬಾಲ ಸೇವಾ ಸಂಸ್ಥೆಗಳು

ಬಾಲ ಸೇವಾ ಸಂಸ್ಥೆಗಳು ಕೊಳಚೆ ಪ್ರದೇಶಗಳಲ್ಲಿ ಮತ್ತು ಶಾಲೆಗಳಲ್ಲಿ ಮಕ್ಕಳಿಗೆ ನಿರ್ದಿಷ್ಟವಾಗಿ ಮಾನಸಿಕ ಮತ್ತು ಸಾಮಾಜಿಕ ಸಮಸ್ಯೆಗಳುಳ್ಳವರಿಗೆ ಮಾರ್ಗದರ್ಶನ ಮತ್ತು ಸಮಾಲೋಚನೆ ಸೇವೆಗಳನ್ನು ನೀಡುತ್ತದೆ. ಸಂಸ್ಥೆಯ ಆವರಣದ ಹೊರಗೆ ಕೊಳಚೆ ಪ್ರದೇಶದ ಮಕ್ಕಳಿಗೆ ಕ್ರೀಡಾ ಕೇಂದ್ರಗಳ ಮೂಲಕ ಮನೋರಂಜನೆ ಹಾಗೂ ಸಮಾಲೋಚನೆ ನೀಡಿ ಬಾಲಾಪರಾಧಿಗಳಾಗದಂತೆ ತಡೆಗಟ್ಟಲು ಈ ಕಾರ್ಯಕ್ರಮದ ಮೂಲಕ ಪ್ರಯತ್ನಿಸಲಾಗುತ್ತದೆ.

ರಾಜ್ಯದಲ್ಲಿ ಒಟ್ಟು ೯ ಬಾಲ ಸೇವಾ ಸಂಸ್ಥೆಗಳಿದ್ದು ಇವುಗಳಲ್ಲಿ ಬೆಂಗಳೂರಿನಲ್ಲಿ ೧೫ ಆಟದ ಕೇಂದ್ರಗಳು, ದಾವಣಗೆರೆಯಲ್ಲಿ ೩, ಹುಬ್ಬಳ್ಳಿ - ಧಾರವಾಡದಲ್ಲಿ ೮ ಮತ್ತು ಬೆಳಗಾವಿ ರಾಯಚೂರು ಮೈಸೂರು ಶಿವಮೊಗ್ಗ, ಕೆ.ಜಿ.ಎಫ್., ಗುಲ್ಬರ್ಗದಲ್ಲಿ ತಲಾ ೪ ಕ್ರೀಡಾ ಕೇಂದ್ರಗಳಿವೆ.

ವಿಧವಾ ವೇತನ

ಯಾವುದೇ ತರಹದ ಜೀವನಾಧಾರವು ಇಲ್ಲದ ನಿರ್ಗತಿಕ ವಿಧವೆಯರಿಗೆ ಹಣಕಾಸು ನೆರವು ನೀಡುವ ಮೂಲಕ ಸಾಮಾಜಿಕ ಭದ್ರತೆಯನ್ನು ಒದಗಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

[illegible]

[illegible]

[illegible]

[illegible]

[illegible]

[illegible]

[illegible]

ವಿಧವೆಯರು ೧೮ ವರ್ಷಕ್ಕೆ ಮೇಲ್ಪಟ್ಟ ವಯಸ್ಸಿನವರಾಗಿದ್ದು, ಸಂಕಷ್ಟ ಸ್ಥಿತಿಯಲ್ಲಿದ್ದು, ಹಣಕಾಸಿನ ನೆರವಿನ ಅವಶ್ಯಕತೆ ಇರಬೇಕು. ಜೊತೆಗೆ ಯಾರ ಆಶ್ರಯವು ಇಲ್ಲದೆ ೬೦೦೦ ರೂ.ಗಳಿಗೆ ಮೀರಿರದ ವಾರ್ಷಿಕ ಆದಾಯ ಹೊಂದಿರಬಾರದು. ಮೃತರಾಗುವವರೆಗೆ ಅಥವಾ ಪುನರ್ವಿವಾಹವಾಗುವವರೆಗೆ ಅಥವಾ ಉದ್ಯೋಗ ಪಡೆದು ವಾರ್ಷಿಕ ಆದಾಯ ೬೦೦೦ ರೂ.ಗಿಂತ ಹೆಚ್ಚಿಗೆ ಪಡೆಯುವವರೆಗೆ ಮಾತ್ರ ವಿಧವಾ ವೇತನವನ್ನು ಪಡೆಯಲು ಅರ್ಹರಾಗಿರುತ್ತಾರೆ.

'ಭಾಗ್ಯಲಕ್ಷ್ಮಿ' ಯೋಜನೆ

ಹೆಣ್ಣು ಮಗು ಹೊರೆಯಲ್ಲ, ಆಕೆಯೂ ಗಂಡು ಮಗುವಿಗೆ ಸಮಾನ ಎಂದು ಜನರಿಗೆ ಮನದಟ್ಟು ಮಾಡಲು ಕರ್ನಾಟಕ ಸರ್ಕಾರ ೨೦೦೬-೦೭ನೇ ಸಾಲಿನ ಆಯವ್ಯಯದಲ್ಲಿ 'ಭಾಗ್ಯಲಕ್ಷ್ಮಿ' ಎಂಬ ವಿನೂತನ ಕಲ್ಯಾಣ ಯೋಜನೆಯನ್ನು ಜಾರಿಗೆ ತಂದಿದೆ. ಬಡತನದ ರೇಖೆಗಿಂತ ಕೆಳಗಿನ ಅಂದರೆ ಕಡುಬಡವ ಕುಟುಂಬದಲ್ಲಿ ಹೆಣ್ಣು ಮಗು ಜನಿಸಿದ ಕೂಡಲೇ ಸರ್ಕಾರ ಆ ಮಗುವಿನ ಹೆಸರಿನಲ್ಲಿ ಹತ್ತು ಸಾವಿರ ರೂಪಾಯಿ ಠೇವಣಿ ಇರಿಸುವ ಮೂಲಕ ಆ ಮಗುವಿನ ಪಾಲಕರ ಆತಂಕವನ್ನು ಹೋಗಲಾಡಿಸುತ್ತದೆ. ೨೦೦೬ರ ಮಾರ್ಚ್ ೩೧ರ ನಂತರ ಹುಟ್ಟಿದ ಹೆಣ್ಣು ಮಗುವಿಗೆ ಈ ಯೋಜನೆಯಿಂದ ಲಾಭ/ಫಲ ಲಭಿಸುತ್ತದೆ. ಒಂದು ಕುಟುಂಬದ ಮೊದಲೆರಡು ಹೆಣ್ಣುಮಕ್ಕಳಿಗೆ ಮಾತ್ರ ಇದು ಅನ್ವಯವಾಗುತ್ತದೆ. ನಗರ ಹಾಗೂ ಗ್ರಾಮ ಎಂಬ ಭೇದವಿಲ್ಲ. ಆದರೆ ಫಲಾನುಭವಿ ಕುಟುಂಬ ಬಡತನದ ರೇಖೆಗಿಂತ ಕೆಳಗಿನ(BPL)ದಾಗಿರಬೇಕು. ಮಗುವಿನ ಜನನ ಪ್ರಮಾಣ ಪತ್ರವನ್ನು ಒದಗಿಸಿದಲ್ಲಿ, ಮಗು ಜನಿಸಿದ ನಂತರ ಒಂದು ವರ್ಷದವರೆಗೆ ಯೋಜನೆಯ ಲಾಭ ಪಡೆಯಲು ಅವಕಾಶವಿದೆ.

ಮಗುವಿಗೆ ೧೮ ವರ್ಷ ಆಗುವವರೆಗೆ ಆ ಮೊತ್ತ ತೆಗೆಯಲು ಅವಕಾಶ ಇಲ್ಲ. ಮಗು ೧೮ ವರ್ಷ ಪೂರೈಸಿದ ನಂತರ ಠೇವಣಿಯ ಅಸಲು ಮತ್ತು ಬಡ್ಡಿಯನ್ನು ಪಾಲಕರಿಗೆ ಕೊಡಲಾಗುವುದು. ಆಹಾರ ಮತ್ತು ನಾಗರಿಕ ಇಲಾಖೆ ಗುರುತಿಸಿ ಕಡ್ಡಾಯ ಗುರುತಿನ ಚೀಟಿ ಹೊಂದಿರುವ ಅಥವಾ ನಗರ ಪ್ರದೇಶದಲ್ಲಿ ವಾರ್ಷಿಕ ರೂ.೧೭,೦೦೦ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ ರೂ.೧೨,೦೦೦ ಆದಾಯ ಮಿತಿಗೊಳಪಟ್ಟ ಪ್ರಮಾಣ ಪತ್ರ ಹೊಂದಿರುವ ಕುಟುಂಬದ ಎರಡು ಹೆಣ್ಣು ಮಕ್ಕಳು ಮಾತ್ರ ಈ ಸೌಲಭ್ಯವನ್ನು ಪಡೆಯಬಹುದು. ಮಗುವಿನ ತಂದೆ ಅಥವಾ ತಾಯಿ ಶಾಶ್ವತ ಕುಟುಂಬ ಯೋಜನೆಯ ಪದ್ಧತಿ ಅಳವಡಿಸಿಕೊಂಡಿರಬೇಕು. ಅವರಿಗೆ ಮೂವರಿಗಿಂತ ಹೆಚ್ಚು ಮಕ್ಕಳಿರಬಾರದು ಎಂದು ನಿರ್ದೇಶಿಸಿದೆ. ಯಾವ ಮಗುವಿನ ಹೆಸರಿನಲ್ಲಿ ಹಣ ಇಡಲಾಗಿದೆಯೋ ಆ ಮಗು ೬ ವರ್ಷದವಳಾಗುವವರೆಗೆ ನಿರಂತರವಾಗಿ ಅಂಗನವಾಡಿ ಕೇಂದ್ರಕ್ಕೆ ಕಳುಹಿಸಿಕೊಡಬೇಕು. ನಂತರವೂ ಆ ಮಗು ಎಂಟನೇ

ತರಗತಿವರೆಗೆ ಓದಿದರೆ ಮಾತ್ರ ಆಕೆ ಠೇವಣಿ ಮೊತ್ತವನ್ನು ಪಡೆಯಲು ಅರ್ಹಳಾಗುತ್ತಾಳೆ. ಜೊತೆಗೆ ಫಲಾನುಭವಿ ಬಾಲಕಿ ೧೮ ವರ್ಷ ತುಂಬುವವರೆಗೆ ಮದುವೆ ಆಗಿರಬಾರದು.

ಈ ಯೋಜನೆಯಿಂದ ಫಲಾನುಭವಿಗಳಿಗೆ ದೊರೆಯುವ ಸೌಲಭ್ಯ

೧. ಪ್ರಾರಂಭಿಕ ಠೇವಣಿ	೨೦೦೬-೦೭	೧೦,೫೫೦
	೨೦೦೭-೦೮	೧೦,೦೦೦
೨. ಮಗುವಿಗೆ ವೈದ್ಯಕೀಯ ವಿಮೆ ಸೌಲಭ್ಯ		
ವಾರ್ಷಿಕ ಗರಿಷ್ಠ ಮೊತ್ತ		ರೂ. ೨೫,೦೦೦
೩. ವಾರ್ಷಿಕ ವಿದ್ಯಾರ್ಥಿ ವೇತನ	೧ನೇ ತರಗತಿಯಿಂದ	ರೂ. ೩೦೦
	೧೦ನೇ ತರಗತಿಯವರೆಗೆ	ರೂ. ೧೦೦೦
೪. ಪೋಷಕರ ಜೀವವಿಮಾ ಸೌಲಭ್ಯ		
೧.ಅಪಘಾತ		೧ ಲಕ್ಷ
೨. ಸಹಜ ಸ್ವಾಭಾವಿಕ ಸಾವು		ರೂ.೪೨,೫೦೦
೫. ಅಂತಿಮವಾಗಿ ಸಂದಾಯವಾಗುವ ಮೊತ್ತ		ರೂ.೩೪.೭೫೧

ಸಮಗ್ರ ಬಾಲ ವಿಕಾಸ ಯೋಜನೆ

ದೇಶದಲ್ಲಿ ಅತ್ಯಂತ ಹಿಂದುಳಿದ ಗ್ರಾಮೀಣ, ಬುಡಕಟ್ಟು ಹಾಗೂ ನಗರದ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಲಕ್ಷಾಂತರ ಮಕ್ಕಳ ಮತ್ತು ತಾಯಂದಿರ ಹಿತಾಸಕ್ತಿಗಾಗಿ ೧೯೭೪ರಲ್ಲಿ ಈ ಯೋಜನೆ ಪ್ರಾರಂಭವಾಯಿತು. ೦-೬ ವರ್ಷದೊಳಗಿನ ಮಕ್ಕಳ ಪೌಷ್ಠಿಕತೆ ಮಟ್ಟವನ್ನು ಹಾಗೂ ಆರೋಗ್ಯ ಸ್ಥಿತಿಯನ್ನು ಸುಧಾರಿಸುವುದು, ಮಗುವಿನ ಸರ್ವಾಂಗೀಣ ಅಭಿವೃದ್ಧಿಗಾಗಿ ಯೋಜನೆ ಜಾರಿಗೊಂಡಿತು. ಗರ್ಭಿಣಿ ಹಾಗೂ ಬಾಣಂತಿಯರಿಗೆ ಪೂರಕ ಪೌಷ್ಠಿಕ ಆಹಾರ ನೀಡುವುದು, ಮಕ್ಕಳಿಗೆ ಹಾಗೂ ತಾಯಂದಿರಿಗೆ ರೋಗ ನಿರೋಧಕ ಚುಚ್ಚುಮದ್ದು ನೀಡುವುದು, ಆರೋಗ್ಯ ತಪಾಸಣೆ, ಮಹಿಳೆಯರಿಗೆ ಆರೋಗ್ಯ ಮತ್ತು ಪೌಷ್ಠಿಕ ಆಹಾರದ ಬಗ್ಗೆ ಶಿಕ್ಷಣ ನೀಡುವುದು, ಸಲಹಾ ಸೇವೆ ನೀಡುವುದು ಮುಂತಾದ ಕಾರ್ಯಗಳನ್ನು ಕೈಗೊಂಡಿದೆ. ರಾಜ್ಯದಲ್ಲಿ ಎಲ್ಲಾ ೧೭೫ ತಾಲೂಕುಗಳಲ್ಲಿ ಹಾಗೂ ೧೦ ನಗರ ಪ್ರದೇಶಗಳಲ್ಲಿ ಐ.ಸಿ.ಡಿ.ಎಸ್ ಈ ಕಾರ್ಯಕ್ರಮ ಅನುಷ್ಠಾನಗೊಳ್ಳುತ್ತಿದೆ.

ರಾಷ್ಟ್ರೀಯ ಪೌಷ್ಠಿಕ ಮಿಷನ್

ಈ ಯೋಜನೆಯು ಕೇಂದ್ರ ಸರ್ಕಾರ ಅನುದಾನಿತ ಯೋಜನೆಯಾಗಿದೆ. ರಾಷ್ಟ್ರೀಯ ಪೌಷ್ಠಿಕ ಮಿಷನ್ ಅಡಿಯಲ್ಲಿ ಬಡತನದ ರೇಖೆಗಿಂತ ಕಡಿಮೆ ಇರುವ ಗರ್ಭಿಣಿ/ಬಾಣಂತಿ ಹಾಗೂ ಪ್ರಾಯಪೂರ್ವ

[illegible]

ಬಾಲಕಿಯರಿಗೆ ವಿಶೇಷ ಪೌಷ್ಠಿಕ ಆಹಾರವನ್ನು ಉಚಿತವಾಗಿ ನೀಡುವ ಯೋಜನೆಯನ್ನು ಹಮ್ಮಿಕೊಂಡಿದೆ. ಕರ್ನಾಟಕದ ಹಿಂದುಳಿದ ಜಿಲ್ಲೆಗಳಾದ ಕೋಲಾರ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ ಪ್ರಾಯೋಜಿತ ಯೋಜನೆಯಾಗಿ ಕೂಡ ಅನುಷ್ಠಾನಗೊಂಡಿದೆ. ೪೦ ಕೆ.ಜಿ.ಗಳಿಗಿಂತ ಕಡಿಮೆ ತೂಕ ಇರುವ ಗರ್ಭಿಣಿ/ಬಾಣಂತಿಯರು ಹಾಗೂ ೩೫ ಕೆ.ಜಿ.ಗಳಿಗಿಂತ ಕಡಿಮೆ ತೂಕವಿರುವ ಪ್ರಾಯಪೂರ್ವ ಬಾಲಕಿಯರನ್ನು ಫಲಾನುಭವಿಗಳಾಗಿ ಗುರುತಿಸಿ ನ್ಯಾಯ ಬೆಲೆ ಅಂಗಡಿಯಿಂದ ಗುರುತಿನ ಚೀಟಿ ಆಧಾರದ ಮೇಲೆ ಪ್ರತಿ ಮಾಹೆ ಫಲಾನುಭವಿಗಳಿಗೆ ೬ ಕೆ.ಜಿ. ಅಕ್ಕಿಯನ್ನು ವಿತರಿಸುತ್ತದೆ.

ಬಾಲಿಕಾ ಸಂಮೃದ್ಧಿ ಯೋಜನೆ

ಕುಟುಂಬದಲ್ಲಿ ಮತ್ತು ಸಮುದಾಯದಲ್ಲಿ ಹೆಣ್ಣು ಮಗುವಿನ ಜನನ ಹಾಗೂ ಅವಳ ತಾಯಿಯ ಬಗ್ಗೆ ಕುಟುಂಬದ ಹಾಗೂ ಸಮುದಾಯದಲ್ಲಿ ಕಂಡುಬರುವ ನಕಾರಾತ್ಮಕ ಧೋರಣೆ ಬದಲಾವಣೆ ಮಾಡುವ ಉದ್ದೇಶ ಹೊಂದಿದೆ. ಮದುವೆ ವಯಸ್ಸನ್ನು ಹೆಚ್ಚಿಸುವುದು, ಶಿಕ್ಷಣಕ್ಕೆ ಮತ್ತು ಉದ್ಯೋಗಕ್ಕೆ ಸಹಾಯ ಮಾಡುತ್ತದೆ. ದಿನಾಂಕ ೧೫-೮-೯೭ರ ನಂತರ ಹುಟ್ಟಿದ ಹೆಣ್ಣು-ಮಕ್ಕಳಿಗೆ ಮಾತ್ರ ಈ ಯೋಜನೆಯ ಪ್ರಯೋಜನ ಸಿಗುತ್ತದೆ. ಬಡತನದ ರೇಖೆಗಿಂತ ಕೆಳಗೆ ಇದ್ದು ಮೊದಲೆರಡು ಹೆಣ್ಣುಮಕ್ಕಳಿಗೆ ಮಾತ್ರ ಯೋಜನೆ ಅನ್ವಯಿಸುತ್ತದೆ.

ಹೆಣ್ಣು ಮಗು ಜನಿಸಿದ ತರುವಾಯ ರೂ. ೫೦೦-೦೦ಗಳ ಹಣವನ್ನು ಕೊಡುಗೆಯಾಗಿ ಹೆಣ್ಣು ಮಗುವಿನ ತಾಯಿಗೆ ನೀಡಲಾಗುತ್ತದೆ. ಮತ್ತು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಹೆಸರಿನಲ್ಲಿ ಹತ್ತಿರದ ಅಂಚೆ ಕಛೇರಿ ಅಥವಾ ಬ್ಯಾಂಕ್ ನಲ್ಲಿ ೧೮ ವರ್ಷಗಳ ಸಂಚಿತ ಠೇವಣಿಯಲ್ಲಿ ಹೂಡಲಾಗುವುದು. ಶಾಲೆಗೆ ದಾಖಲಾಗಿ ಪ್ರತಿ ವರ್ಷದ ತರಗತಿಯನ್ನು ಯಶಸ್ವಿಗೊಳಿಸಿದಲ್ಲಿ ಈ ಕೆಳಕಂಡಂತಹ ವಾರ್ಷಿಕ ವಿದ್ಯಾರ್ಥಿ ವೇತನವನ್ನು ಪಡೆಯಲು ಅರ್ಹಳಾಗುತ್ತಾಳೆ.

ಅನುದಾನದ ವಿಧಾನ

ತರಗತಿ	ವಾ.ವಿ.ವೇತನ	ತರಗತಿ	ವಾ.ವಿ.ವೇತನ
೧ನೇ ತರಗತಿಯಿಂದ ೩ನೇ ತರವತಿವರಗೆ	ರೂ.೩೦೦-೦೦	೬-೭ನೇ ತರಗತಿ	ರೂ.೭೦೦.೦೦
೪ನೇ ತರಗತಿ	ರೂ.೫೦೦-೦೦	೮ನೇ ತರಗತಿ	ರೂ.೮೦೦-೦೦
೫ನೇ ತರಗತಿ	ರೂ.೬೦೦-೦೦	೯-೧೦ನೇ ತರಗತಿ	ರೂ.೧೦೦೦-೦೦

ಬಾಲ್ಯ ವಿವಾಹ ಮಾಡಿಕೊಂಡಲ್ಲಿ ಅಥವಾ ಮರಣ ಹೊಂದಿದ್ದಲ್ಲಿ ಸಹಾಯ ಧನವನ್ನು ಮಟ್ಟುಗೋಲು ಹಾಕಿಕೊಳ್ಳಲಾಗುತ್ತದೆ.

ಸಮಾಜ ಕಲ್ಯಾಣ ಇಲಾಖೆ ಹಾಗೂ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಇಲಾಖೆಗಳಿಂದ ಜಾರಿಗೊಳ್ಳುವಂತಹ ಕಾರ್ಯಕ್ರಮಗಳು

ಮಹಿಳೆಯರಿಗೆ ವೃತ್ತಿ ಶಿಕ್ಷಣ ತರಬೇತಿ

ಪರಿಶಿಷ್ಟ ಜಾತಿಯ ಮಹಿಳೆಯರಿಗೆ ಹೊಲಿಗೆ ತರಬೇತಿ ನೀಡುವ ಉದ್ದೇಶದಿಂದ ರಾಜ್ಯಾದ್ಯಂತ ೬೧ ಹೊಲಿಗೆ ತರಬೇತಿ ಕೇಂದ್ರಗಳನ್ನು ನಡೆಸಲಾಗುತ್ತಿದೆ. ಹೊಲಿಗೆ ತರಬೇತಿ ಕೇಂದ್ರದಲ್ಲಿ ತರಬೇತಿ ಪಡೆಯುತ್ತಿರುವವರಿಗೆ ಪ್ರತಿ ತಿಂಗಳು ರೂ.೧೫೦.೦೦ ಗಳನ್ನು ಶಿಷ್ಯ ವೇತನವನ್ನಾಗಿ ನೀಡಲಾಗುತ್ತದೆ. ಜೊತೆಗೆ ಇತರ ತರಬೇತಿ ಕೇಂದ್ರದಲ್ಲಿ ತರಬೇತಿ ಪಡೆಯುತ್ತಿರುವವರಿಗೆ ಪ್ರತಿ ತಿಂಗಳಿಗೆ ರೂ.೩೦೦ ರಂತೆ ಶಿಷ್ಯ ವೇತನವನ್ನು ನೀಡಲಾಗುತ್ತಿದೆ.

ಹೊಲಿಗೆ ಯಂತ್ರ ಸರಬರಾಜು

ಹೊಲಿಗೆ ತರಬೇತಿ ಪೂರ್ಣಗೊಂಡ ನಂತರ ತಾಂತ್ರಿಕ ಶಿಕ್ಷಣ ಇಲಾಖೆಯು ಬೋಧಕ ವರ್ಗದವರ ಸಹಾಯದಿಂದ ಇಲಾಖಾ ವತಿಯಿಂದ ಪರೀಕ್ಷೆ ನಡೆಸಿ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿದಂತಹ ಮಹಿಳೆಯರಿಗೆ ಪ್ರಮಾಣ ಪತ್ರ ಹಾಗೂ ಒಂದು ಹೋಲಿಗೆ ಯಂತ್ರ ಉಚಿತವಾಗಿ ನೀಡುತ್ತದೆ. ಇದರಿಂದ ತರಬೇತಿ ಹೊಂದಿದ ಮಹಿಳೆಯರು ಸ್ವತಂತ್ರವಾಗಿ ಬಟ್ಟೆ ಹೊಲಿದು ಜೀವನ ನಡೆಸಲು ಸಹಾಯವಾಗುತ್ತದೆ.

ಅಸ್ಪೃಶ್ಯತೆ ನಿವಾರಣೆ

ಈ ಯೋಜನೆಯಡಿ ಎರಡು ಕಾರ್ಯಕ್ರಮ ಜಾರಿಗೊಳಿಸಲಾಗುತ್ತಿದೆ. ಅಂತರಜಾತಿ ವಿವಾಹ, ಅಸ್ಪೃಶ್ಯತೆ ನಿವಾರಣೆಯ ನಿಟ್ಟಿನಲ್ಲಿ ಮಹತ್ವದ ಬೆಳವಣಿಗೆಯಾಗಿದೆ. ಇದನ್ನು ಪ್ರೋತ್ಸಾಹಿಸಲು ಸರ್ಕಾರ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಅಂತರಜಾತಿ ವಿವಾಹವಾದ ದಂಪತಿಗಳಿಗೆ ಧನ ಸಹಾಯ ಮಾಡುತ್ತದೆ. ಇವರಿಬ್ಬರಲ್ಲಿ ಒಬ್ಬರು ಪರಿಶಿಷ್ಠ ಜಾತಿಗೆ ಸೇರಿದವರಾಗಿದ್ದರೆ. ಅಂತವರಿಗೆ ಮಾತ್ರ ಸಾಮಾಜಿಕ ಭದ್ರತೆಯ ಉದ್ದೇಶದಿಂದ ೨೫,೦೦೦.೦೦ ರೂ.ಗಳ ಪ್ರೋತ್ಸಾಹಧನ ನೀಡಲಾಗುತ್ತದೆ. ಇದರಲ್ಲಿ ೧೨,೫೦೦ ರೂ. ನಗರದು ಹಾಗೂ ೧೨.೫೦೦ ರೂಪಾಯಿಗಳು ರಾಷ್ಟ್ರೀಯ ಉಳಿತಾಯ ಪತ್ರಗಳಾಗಿರುತ್ತವೆ.

ದೌರ್ಜನ್ಯಕ್ಕೆ ಒಳಪಟ್ಟ ಪರಿಶಿಷ್ಟ ಜಾತಿಯವರಿಗೆ ಪರಿಹಾರ

ದೌರ್ಜನ್ಯ ಕಾಯ್ದೆ ೧೯೮೯ ಹಾಗೂ ೧೯೯೫ ನಿಯಮದ ಅನ್ವಯ ಬರುವ ಎಲ್ಲಾ ದೌರ್ಜನ್ಯ ಪ್ರಕರಣಗಳಿಗೆ ಪರಿಹಾರ, ಪುನರ್ವಸತಿ ಕಲ್ಪಿಸುವ ಸಲುವಾಗಿ ಈ ಯೋಜನೆಯನ್ನು ರೂಪಿಸಿದೆ. ಸರ್ಕಾರದ ಆದೇಶ ಕ್ರಮ ಸಂಖ್ಯೆ ಎಸ್ ಡಬ್ಲೂ ಡಿ/೭೫/ಎಸ್.ಪಿ/೨೦೦೦ ದಿನಾಂಕ ೧೭-೦೨-೨೦೦೨

ರನ್ವಯ ದಿನಾಂಕ ೦೧-೦೪-೨೦೦೨ರ ನಂತರ ದೌರ್ಜನ್ಯ ಪ್ರಕರಣಗಳಿಗೆ ಸಂಬಂಧಿಸಿದಂತೆ ನಿಗದಿಪಡಿಸಿದ ಪರಿಹಾರ ನಿಧಿ ನೀಡಲಾಗುತ್ತದೆ.

ಪರಿಹಾರ ಮಂಜೂರು ಮಾಡುವ ಪೂರ್ಣ ಅಧಿಕಾರವು ಸಂಬಂಧಪಟ್ಟ ಜಿಲ್ಲಾಧಿಕಾರಿಯವರಿಗೆ ನೀಡಲಾಗಿದ್ದು, ಪರಿಹಾರ ನೀಡುವಾಗ ಜೀವ ಆಸ್ತಿಗಳ ನಷ್ಟವನ್ನು ಜಿಲ್ಲಾ ಆರಕ್ಷಕ ಅಧಿಕಾರಿಗಳಿಂದ ಅಂದಾಜು ಪಡೆದು ಜಿಲ್ಲಾಧಿಕಾರಿಗಳು ಮಂಜೂರು ಮಾಡುವರು.

ಈ ಯೋಜನೆಯಡಿಯಲ್ಲಿ ಪ್ರತ್ಯೇಕವಾಗಿ ಮಹಿಳೆಯರಿಗೆಂದೆ ನೀಡುವ ಪರಿಹಾರ ನಿಧಿ ಹೀಗೆ ಇರುತ್ತದೆ. ಸಭ್ಯ ಮಹಿಳೆಯರ ಮಾನಭಂಗ ದೌರ್ಜನ್ಯಕ್ಕೊಳಪಟ್ಟ ಮಹಿಳೆಯರಿಗೆ ರೂ.೫೦,೦೦೦ ಪರಿಹಾರ ಈ ಪೈಕಿ, ವೈದ್ಯಕೀಯ ತಪಾಸಣೆಯಲ್ಲಿ ದೃಢಪಟ್ಟಾಗ ಶೇ.೫೦ ಭಾಗ ಹಾಗೂ ಬಾಕಿ ಶೇ.೫೦ ಭಾಗ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯದಲ್ಲಿ ಸಲ್ಲಿಸಿದ ನಂತರ ನೀಡಲಾಗುತ್ತದೆ. ಲೈಂಗಿಕ ಶೋಷಣೆಗೊಳಗಾದ ಮಹಿಳೆಯರಿಗೆ, ದೌರ್ಜನ್ಯಕ್ಕೊಳಪಟ್ಟ ಮಹಿಳೆಯರಿಗೆ ರೂ.೫೦,೦೦೦ ಪರಿಹಾರ ಈ ಪೈಕಿ, ವೈದ್ಯಕೀಯ ತಪಾಸಣೆಯಲ್ಲಿ ದೃಢಪಟ್ಟಾಗ ಶೇ.೫೦ ಭಾಗ ಹಾಗೂ ಬಾಕಿ ಶೇ.೫೦ ಭಾಗ ದೋಷಾರೋಪಣ ಪಟ್ಟಿಯನ್ನು ನ್ಯಾಯಾಲಯದಲ್ಲಿ ಸಲ್ಲಿಸಿದ ನಂತರ ನೀಡಲಾಗುತ್ತದೆ.

ಮೈಕ್ರೋ ಕ್ರೆಡಿಟ್ ಯೋಜನೆಯ ನಿಯಮಗಳು

ಈ ಯೋಜನೆಯನ್ನು ರಾಷ್ಟ್ರೀಯ ಪರಿಶಿಷ್ಟಜಾತಿ ಹಣಕಾಸು ಮತ್ತು ಅಭಿವೃದ್ಧಿ ನಿಗಮ ನವದೆಹಲಿ ಇವರ ಸಹಯೋಗದೊಂದಿಗೆ ಕಳೆದ ೪ ವರ್ಷಗಳಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಘಟಕ ವೆಚ್ಚ ರೂ.೨೫,೦೦೦ ಆಗಿದ್ದು ಇದರಲ್ಲಿ ರೂ.೧೫,೦೦೦ NSFDCರವರ ಅವಧಿ ಸಾಲದಾಗಿರುತ್ತದೆ. ಉಳಿದ ರೂ.೧೦,೦೦೦ ಜಿಲ್ಲಾ ಪಂಚಾಯತ್, ನಗರಾಭಿವೃದ್ಧಿ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಹಾಗು ವಿಶೇಷ ಘಟಕ ಯೋಜನೆಯಡಿ ಇತರೆ ಇಲಾಖೆಗಳಲ್ಲಿ ಲಭ್ಯವಿರುವ ಸಹಾಯಧನವನ್ನು ಪಡೆದುಕೊಳ್ಳತಕ್ಕದ್ದು. ಈ ಯೋಜನೆಯಡಿಯಲ್ಲಿ ಮಹಿಳಾ ಪರಿಶಿಷ್ಟಜಾತಿ ಫಲಾಪೇಕ್ಷಿಗಳಿಗೆ ಮಾತ್ರ ಸಾಲ ಪಡೆಯಲು ಅವಕಾಶವಿರುತ್ತದೆ. ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಸ್ವಯಂ ಸೇವಾ ಗುಂಪುಗಳನ್ನು ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸ್ತ್ರೀಶಕ್ತಿ ಯೋಜನೆಯಡಿ ರಚಿಸಲಾಗಿರುವ ಸ್ವ-ಸಹಾಯ ಗುಂಪುಗಳಿಗೆ ಪಡೆಯುವ ಅವಕಾಶವಿರುತ್ತದೆ.

ಸ್ವಯಂ ಉದ್ಯೋಗ ಯೋಜನೆಯ ನಿಯಮಗಳು ೨೦೦೪

ಕರ್ನಾಟಕ ಸರ್ಕಾರವು ನಿಗಮಕ್ಕೆ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗಗಳಿಗೆ ಸೇರಿದ ಅರ್ಹ ನಿರುದ್ಯೋಗಿ ಫಲಾಪೇಕ್ಷಿಗಳ ಆರ್ಥಿಕ ಚೇತರಿಕೆಗಾಗಿ ಬ್ಯಾಂಕುಗಳ ಸಹಯೋಗದೊಂದಿಗೆ ಸ್ವಯಂ ಉದ್ಯೋಗ ಯೋಜನೆಯನ್ನು ಅನುಷ್ಠಾನಗೊಳಿಸಲು ಈ ಕೆಳಕಾಣಿಸಿದ ಆದೇಶಗಳ ಮೂಲಕ ಅನುಮತಿ

ನೀಡಿದೆ. ಈ ಯೋಜನೆಯಡಿ ಯೋಜನಾ ವೆಚ್ಚ ರೂ.೫೦,೦೦೦ ಒಳಗೆ ಇರುವ ಘಟಕಗಳಿಗೆ ಮಾತ್ರ ಯೋಜನಾ ವೆಚ್ಚ ಶೇ.೫೦ರಷ್ಟು ಅಥವಾ ಶೇ.೫೦ರಷ್ಟು ಗರಿಷ್ಠ ಸಹಾಯಧನ ರೂ.೧೦,೦೦೦ ಲಭ್ಯವಿರುತ್ತದೆ. ಈ ಯೋಜನೆಯ ಲಾಭ ಸ್ತ್ರೀ-ಪುರುಷರಿಬ್ಬರು ಪಡೆದುಕೊಳ್ಳಬಹುದಾಗಿದೆ.

ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆಯ ನಿಯಮಗಳು

ಕರ್ನಾಟಕ ಸರ್ಕಾರವು ನಿಗಮಕ್ಕೆ ಐ.ಎಸ್ .ಬಿ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅರ್ಹ ನಿರುದ್ಯೋಗಿಗಳಿಗೆ ಬ್ಯಾಂಕ್ ಸಹಯೋಗದೊಂದಿಗೆ ವಿವಿಧ ಕಸುಬುಗಳಲ್ಲಿ ಸಾಲ ಸೌಲಭ್ಯ ಪಡೆಯಲು ಉಪಯುಕ್ತತೆಯನ್ನು ಕಲ್ಪಿಸಿಕೊಟ್ಟಿದೆ. ಈ ಯೋಜನೆಯಡಿ ಯಾವುದೇ ಸಣ್ಣ ಕೈಗಾರಿಕಾ, ಸರಕು ಸಾಗಾಣಿಕೆ ಪ್ರಯಾಣಿಕರ ವಾಹನ ಟ್ರಾಕ್ಟರ್ ಇತ್ಯಾದಿ ಖರೀದಿಸಲು ಯೋಜನಾ ವೆಚ್ಚ ರೂ.೫೦,೦೦೦ ದಿಂದ ೧.೦೦ ಲಕ್ಷದವರೆಗೆ ಪಡೆಯಬಹುದಿದ್ದು ಇದರಲ್ಲಿ ಶೇಕಡಾ ೫ ಭಾಗ ಪ್ರವರ್ತಕರ ಪಾಲು ಶೇಕಡಾ ೨೦ ಭಾಗ ನಿಗಮದಿಂದ ಅಂಚಿನ ಹಣ (ಗರಿಷ್ಠ ರೂ.೧ ಲಕ್ಷ) ಹಾಗೂ ಉಳಿದ ಶೇಕಡಾ ೭೫ ಭಾಗ ಬ್ಯಾಂಕ್ ಮೂಲಕ ಸಾಲವಾಗಿ ಭರಿಸುತ್ತದೆ.

ಇನ್ನು ಹಲವಾರು ಯೋಜನೆಗಳು ಕುಂಚಿ ಕೊರವ ಮಹಿಳೆಯರಿಗೆ ಅನ್ವಯವಾಗಲಿದ್ದು, ಇವುಗಳಾವುದರ ಸದುಪಯೋಗ ಪಡೆದುಕೊಂಡಿಲ್ಲ.

೬.೧. ಈ ಯೋಜನೆಗಳ ಸಫಲತೆ ಮತ್ತು ವಿಫಲತೆಗಳು

ಹೆಸರೇ ಸೂಚಿಸುವಂತೆ ಅಭಿವೃದ್ಧಿ ಯೋಜನೆಗಳು ಪ್ರತಿಯೊಬ್ಬ ಮಾನವನ ಸರ್ವತೋಮುಖ ಬೆಳವಣಿಗೆಯನ್ನು ಹೊಂದಿರುತ್ತವೆ. ನಮ್ಮ ದೇಶದಲ್ಲಿ ಮಾನವನು ವಿವಿಧ ಜನಾಂಗ, ಜಾತಿ, ವರ್ಗಗಳಾಗಿ ಹಂಚಿ ಹೋಗಿದ್ದಾನೆ. ಆಯಾ ಶ್ರೇಣೀಕರಣದ ಆಧಾರದ ಮೇಲೆ ಮಾನವರ ಕುಂದು ಕೊರತೆಗಳಿಗೆ ಅನುಗುಣವಾಗಿ ಅವುಗಳನ್ನು ನಿವಾರಿಸುವ ನಿಟ್ಟಿನಲ್ಲಿ ಅಭಿವೃದ್ಧಿ ಯೋಜನೆಗಳು ರೂಪ ತಳೆದಿರುತ್ತವೆ. ಇವುಗಳೊಂದಿಗೆ ಪ್ರತ್ಯೇಕವಾಗಿ ಮಹಿಳೆಯರಿಗಾಗಿಯೇ ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸಿ ಆ ಮೂಲಕ ಮಹಿಳಾ ಸಬಲೀಕರಣ ಮಾಡುವ ಕಾರ್ಯಕ್ರಮಗಳನ್ನು ಕೂಡಾ ಇಂದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕೈಗೊಂಡಿವೆ. ಇನ್ನು ಹಿಂದುಳಿದ ಜನಾಂಗದವರು ಎಂದು ಕರೆಸಿಕೊಳ್ಳುವ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟಪಂಗಡದ ಮಹಿಳೆಯರಿಗೆ ಮೀಸಲಾತಿಗಳನ್ನು ಇರಿಸಲಾಗಿರುತ್ತದೆ. ಜೊತೆಗೆ ಅವರ ಅಭಿವೃದ್ಧಿಗೆಂದು ಪ್ರತ್ಯೇಕ ಯೋಜನೆಗಳನ್ನು ಕೂಡಾ ಕೆಲವೊಂದು ಪ್ರತ್ಯೇಕ ಇಲಾಖೆಗಳ ಮೂಲಕ ಜಾರಿಗೊಳಿಸುತ್ತದೆ. ಇಂತಹ ವ್ಯಾಪ್ತಿಯೊಳಗೆ ಬರುವ ಕುಂಚಿ ಕೊರವ ಮಹಿಳೆಯರು ಈಗಾಗಲೇ ತಿಳಿದಿರುವ ಹಾಗೇ ನಮ್ಮ ಅಧ್ಯಯನದ ಮೂಲವಾಗಿದ್ದಾರೆ. ಆದ್ದರಿಂದ

ಇವರಿಗೆಂದೇ ನೀಡಲಾದ ಅನೇಕ ಯೋಜನೆಗಳಲ್ಲಿ ಕೆಲವೊಂದನ್ನು ಪಟ್ಟೀಕರಿಸಿ ಅವುಗಳ ಸಫಲತೆ ಮತ್ತು ವಿಫಲತೆಗಳ ಬಗ್ಗೆ ಇಲ್ಲಿ ಚರ್ಚಿಸಲಾಗಿದೆ.

ಯಾವುದೇ ಅಭಿವೃದ್ಧಿ ಯೋಜನೆಗಳು ಮಹಿಳೆಯರಿಗೆ ನೇರವಾಗಿ ತಲುಪುವುದಿಲ್ಲ. ಬದಲಾಗಿ ವಿವಿಧ ಹಂತಗಳ ಅಧಿಕಾರಿ ವರ್ಗದವರಿಂದ ಮಂಜೂರಾಗಿ ಕೊನೆಗೆ ಫಲಾನುಭವಿಗಳಿಗೆ ತಲುಪುತ್ತವೆ. ಹೀಗಿರುವಾಗ ಅನಕ್ಷರಸ್ಥರು, ಅಜ್ಞಾನವಂತರಾಗಿರುವ ಈ ಕುಂಚಿ ಕೊರವ ಮಹಿಳೆಯರು ಹೇಗೆ ತಾನೇ ಇವುಗಳ ಬಗ್ಗೆ ಮಾಹಿತಿ ಪಡೆದು ಸದುಪಯೋಗ ಪಡೆದುಕೊಳ್ಳಬಲ್ಲರು. ನಿಜ ಇದುವರೆಗೂ ಇಂತಹ ಯಾವುದೇ ಯೋಜನೆಗಳ ಲಾಭ ಪಡೆದುಕೊಂಡಿಲ್ಲ. ಈ ತರಹದ ಯಾವುದೇ ಯೋಜನೆಗಳ ಬಗ್ಗೆ ಮಾಹಿತಿ ಇಲ್ಲದೆ, ತಮ್ಮ ಕೆಳಮಟ್ಟದ ತಿಳುವಳಿಕೆಯಿಂದಾಗಿ ಫಲಾನುಭವಿಗಳಾಗದೆ ಹೋಗಿದ್ದಾರೆ. ಆದರೆ ಇತ್ತೀಚೆಗೆ ಶಾಲೆಗೆ ಸೇರಿರುವ ಬಾಲಕಿಯರು ಮಾತ್ರ ಕೆಲವೊಂದು ಯೋಜನೆಗಳ ಲಾಭ ಪಡೆಯುತ್ತಿರುವುದು ಕಂಡುಬರುತ್ತದೆ. ಅವು ಕೇವಲ ಬಿಸಿ ಊಟ, ಪುಸ್ತಕ, ಸಮವಸ್ತ್ರಗಳ ಲಭ್ಯತೆಗೆ ಮಾತ್ರ ಸೀಮಿತವಾಗಿವೆ. ಇನ್ನು ಪ್ರಾಥಮಿಕ ಶಿಕ್ಷಣ ಎಲ್ಲರಿಗೂ ಉಚಿತವಾಗಿರುವುದರಿಂದ ಇತ್ತೀಚೆಗೆ ಇದರ ಸೌಲಭ್ಯವನ್ನು ಕೂಡ ಪಡೆದುಕೊಂಡಿದ್ದಾರೆ ಎಂದು ಹೇಳಬಹುದು. ಇಂತಹ ಅಂಚಿಗೆ ತಳ್ಳಲ್ಪಟ್ಟ ಸಮುದಾಯಗಳನ್ನು ಗಮನದಲ್ಲಿಟ್ಟುಕೊಂಡು ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸಿದಾಗ ಮಾತ್ರ ಈ ಯೋಜನೆಗಳು ಫಲಕಾರಿಯಾಗಬಲ್ಲವು ಹಾಗೂ ಸಮುದಾಯದ ಮಹಿಳೆಯರು ಸಮಾಜದ ಮೇಲ್ ನೋಟದಲ್ಲಿ ಗೋಚರಿಸಬಲ್ಲರೆಂದು ಹೇಳಬಹುದು.

೬.೨. ಸರ್ಕಾರಿ ಯೋಜನೆಗಳೊಳಗಿನ ಆಂತರಿಕ ತೊಡಕುಗಳು ಮತ್ತು ಪರಿಣಾಮಗಳು

ಬಹುತೇಕ ಯೋಜನೆಗಳು ಇರುವುದೇ ಒಂದು ಬಗೆಯಾದರೆ, ಅವುಗಳ ಪರಿಣಾಮ ಮತ್ತೊಂದು ತರಹದ್ದಾಗಿರುತ್ತದೆ. ಇಂತಹುಗಳಲ್ಲಿ ಕೆಲವೊಂದವುಗಳನ್ನು ಕುಂಚಿ ಕೊರವ ಮಹಿಳೆಯರನ್ನು ಗಮನದಲ್ಲಿಟ್ಟು ಕೊಂಡು ಚರ್ಚಿಸಲಾಗಿದೆ. **'ಉದ್ಯೋಗಿನಿ'** ಯೋಜನೆಯನ್ನು ತೆಗೆದುಕೊಂಡಾಗ ಸ್ವಯಂ ಉದ್ಯೋಗಗಳಲ್ಲಿ ಮಹಿಳೆಯರು ತೊಡಗಿ ಆರ್ಥಿಕವಾಗಿ ಸಬಲೀಕರಣರಾಗಬೇಕೆಂದು ೧೦,೦೦೦ ರೂ.ಗಳ ಸಹಾಯ ಧನ ಹಾಗೂ ೧ ಲಕ್ಷ ರೂ.ವರೆಗೆ ಸಾಲ ಮಂಜೂರು ಮಾಡುತ್ತಿದೆ. ಆದರೆ ಕುಂಚಿ ಕೊರವ ಮಹಿಳೆಯರು ಬಡತನ ರೇಖೆಗಿಂತ ಕೆಳಗಿನವರಾಗಿದ್ದು, ಬ್ಯಾಂಕುಗಳಿಂದ ಸಾಲ ಪಡೆಯಲು ಅಗುವುದಿಲ್ಲ. ಕಾರಣ ಯಾವುದೇ ಬ್ಯಾಂಕ್ ಆದರೂ ಸಾಲ ನೀಡಲು ಆಸ್ತಿ ಪತ್ರಗಳನ್ನು ಅಡವಿಡುವಂತೆ(surety) ಕೇಳುತ್ತದೆ. ಇವರಿರುವುದೆ ಬಡತನದಲ್ಲಿ ಅಂತದರಲ್ಲಿ ಹೇಗೆ ತಾನೇ ಬ್ಯಾಂಕ್ ಗಳೊಂದಿಗೆ ವ್ಯವಹರಿಸಬಲ್ಲರು? ಮತ್ತೊಂದು ಯೋಜನೆಯಾದ **ಮಹಿಳಾ ತರಬೇತಿ** ಯೋಜನೆಯೂ ಮಹಿಳೆಯರಲ್ಲಿ ಆರ್ಥಿಕ ಸ್ವಾವಲಂಬನೆ ಬೆಳೆಸಲು ವಿವಿಧ ವಿದ್ಯಮಾನಗಳ ಸ್ಥಾಪನೆ ಬಗ್ಗೆ ಉಚಿತ ತರಬೇತಿ ಸ್ವಾವಲಂಬನೆ ಬೆಳೆಸಲು ವಿವಿಧ

ಉದ್ಯಮಗಳ ಸ್ಥಾಪನೆ ಬಗ್ಗೆ ಉಚಿತ ತರಬೇತಿ ನೀಡುತ್ತದೆ. ಆದರೆ ಇದು ನಿರ್ದಿಷ್ಟ ವಿದ್ಯಾರ್ಹತೆಯನ್ನು ಕೇಳುತ್ತದೆ. ಕುಂಚಿ ಕೊರವ ಮಹಿಳೆಯರು ಸಂಪೂರ್ಣವಾಗಿ ಅನಕ್ಷರಸ್ಥರಾಗಿದ್ದು, ಈ ಯೋಜನೆ ಇವರಿಗೆ ಫಲಪ್ರದವಾಗದೆ ಹೋಗುತ್ತದೆ. ಅಮೃತ ಯೋಜನೆಯಲ್ಲಿ ಜೀವನಾಧಾರವಿಲ್ಲದ ನಿರ್ಗತಿಕ ಮಹಿಳೆಯರಿಗೆ ಎಮ್ಮೆಯನ್ನು ಖರೀದಿಸಿ ಹೈನುಗಾರಿಕೆ ಕೈಗೊಳ್ಳಲೆಂದು ಧನ ಸಹಾಯ ಮಾಡುತ್ತದೇನೊ ನಿಜ ಆದರೆ ಅನುಭವ ಕೇಳುತ್ತದೆ. ಕುಂಚಿ ಕೊರವ ಮಹಿಳೆಯರು ಮೂಲತಃ ಅವರ ಸಾಂಪ್ರದಾಯಿಕ ದುಡಿಮೆಗಳಾದ ಬುಟ್ಟಿ, ವಿವಿಧ ಬಗೆಯ ಕಸಬರಿಗೆಗಳು, ಹಗ್ಗ, ಚಾಪೆ, ಸಿಂಬಿ ಮಾಡುವವರಾಗಿದ್ದರಿಂದ ಎಲ್ಲಿಂದ ಹೈನುಗಾರಿಕೆ ಬಗ್ಗೆ ಅನುಭವವಾಗಬೇಕು. ಯೋಜನೆಯೇ ನಿರ್ಗತಿಕ ಮಹಿಳೆಯರು ಅರ್ಹರೆಂದು ತಿಳಿಸುತ್ತದೆ. ಆದರೆ ಆ ಮಹಿಳೆಯರು ಎಮ್ಮೆ ಸಾಕಿ ಅನುಭವ ಪಡೆಯಬೇಕಾದರೆ ನಿರ್ಗತಿಕರೆಂದು ಕರೆಸಿಕೊಳ್ಳಲಾರರು. ಅಸ್ಪೃಶ್ಯತೆಯನ್ನು ಅನುಭವಿಸುತ್ತಿರುವ ಇವರಿಗೆ ಯಾರು ತಾನೇ ಎಮ್ಮೆಯನ್ನು ನೋಡಿಕೊಳ್ಳಲು ಕರೆಯುತ್ತಾರೆ. ಇಂತಹ ಹೈನುಗಾರಿಕೆಗೆ ಯಾರು ಅನುಭವದ ಪ್ರಮಾಣ ಪತ್ರ ವಿತರಿಸಿಯಾರು. ಇದನ್ನು ಗಮನಿಸಿದಾಗ ಯೋಜನೆಗಳು ವ್ಯಂಗವಾಗಿ ಕಂಡುಬರುತ್ತವೆ ಎಂದು ಹೇಳಿದರೆ ತಪ್ಪಾಗಲಾರದು.

ಸಾಂತ್ವನ ಕೇಂದ್ರಗಳನ್ನು ದೌರ್ಜನ್ಯ ಮತ್ತು ಅತ್ಯಾಚಾರಕ್ಕೊಳಗಾದ ಮಹಿಳೆಯರಿಗೆ ಆರ್ಥಿಕ ಸಹಾಯ, ಕಾನೂನು ನೆರವು ನೀಡಲು ಸ್ಥಾಪಿಸಲಾಗಿದೆ. ಪೂರ್ವ ಯೋಚಿತವಾಗಿ ಹಲ್ಲೆಗೊಳಗಾಗುವುದನ್ನು ಯೋಜನೆ, ಕಾನೂನುಗಳ ಮೂಲಕ ತಡೆಗಟ್ಟಿ ಕಟ್ಟುನಿಟ್ಟಾಗಿ ಜಾರಿಗೊಳಿಸಿ ಮಹಿಳೆಯರನ್ನು ರಕ್ಷಿಸುವುದು ಸೂಕ್ತವೇ ವಿನಃ ಹಲ್ಲೆಗೊಳಗಾದ ನಂತರ ಸಹಾಯ ಹಸ್ತ ತೋರುವುದು ಸೂಕ್ತವಲ್ಲವೆಂದೆನಿಸುತ್ತದೆ. ಪ್ರತಿ ನಿತ್ಯ ಬಹುತೇಕ ಮಹಿಳೆಯರು ಒಂದಲ್ಲ ಒಂದು ಕಾರಣಕ್ಕೆ ಮನೆಯಲ್ಲಿ ದೌರ್ಜನ್ಯಕ್ಕೆ ಒಳಗಾಗುತ್ತಲೇ ಇರುತ್ತಾರೆ. ಇಂತಹ ಎಷ್ಟು ಮಹಿಳೆಯರಿಗೆ ಸಾಂತ್ವನ ಕೇಂದ್ರ ಸಾಂತ್ವಾನ ನೀಡಬಲ್ಲದು. ಇದರ ಬದಲಾಗಿ ದೌರ್ಜನ್ಯ ಪ್ರಕ್ರಿಯೆಗಳನ್ನೇ ಸಂಪೂರ್ಣವಾಗಿ ತಡೆಗಟ್ಟುವಲ್ಲಿ ಸರ್ಕಾರ ಮುಂದಾಗಬೇಕು ಎನಿಸುತ್ತದೆ. ವಿಧವೆ ಮತ್ತು ದೇವದಾಸಿಯರ ವಿವಾಹಕ್ಕೆ ಸರ್ಕಾರ ಆರ್ಥಿಕ ನೆರವು ನೀಡಿ ಸಾಮಾಜಿಕ ಭದ್ರತೆ ಒದಗಿಸುತ್ತದೆ. ದೇವದಾಸಿಯರಿಗೇನೋ ಈ ಯೋಜನೆ ಸೂಕ್ತವಾಗಿದೆ. ಆದರೆ ಕುಂಚಿ ಕೊರವರಲ್ಲಿ ಈ ಪದ್ಧತಿ ಆಚರಣೆಯಲಿಲ್ಲ. ವಿಧವೆಯರಿಗೆ ಮರು ಮದುವೆಗೆ ಸಹಾಯ ಧನವೇನೋ ನೀಡುತ್ತದೆ. ಆದರೆ ವಯಸ್ಸನ್ನು ೧೮ ರಿಂದ ೩೫ ಎಂದು ಮಿತಿಗೊಳಿಸಿದೆ. ಅಂದರೆ ಈ ವಯಸ್ಸಿನವರು ಮಾತ್ರ ದಾಂಪತ್ಯ ಜೀವನ ನಡೆಸಲು ಯೋಗ್ಯರೆಂದು ಸರ್ಕಾರವೆ ನಿರ್ಧರಿಸಿದಂತಿದೆ. ಮದುವೆ ಭಾವನಾತ್ಮಕ ಕೊಂಡಿ, ಆಸರೆಯಾಗಿದ್ದು, ಎಲ್ಲರಿಗೂ ಎಲ್ಲಾ ವಯಸ್ಸಿನಲ್ಲಿ ಬೇಕೆನಿಸುತ್ತದೆ. ಇನ್ನೊಂದು ವಿಚಿತ್ರ ಸಂಗತಿಯೆಂದರೆ ವಿಧವಾ ವೇತನ ನೀಡುವುದು ಒಂದೆಡೆ ಕಂಡುಬಂದರೆ ವಿಧವಾ ಮರು ವಿವಾಹಕ್ಕೆ ಪ್ರೋತ್ಸಾಹಿಸುವ ನೆಲೆ ಮತ್ತೊಂದೆಡೆ ಕಂಡುಬರುತ್ತದೆ. ಸರ್ಕಾರವು ಬಹುಶಃ ಸಂಪ್ರದಾಯಿಕ ಸಂಕೋಲೆಗಳಲ್ಲಿ

ಸಿಲುಕಿಕೊಂಡಂತೆ ಗೋಚರಿಸುತ್ತದೆ. ಮಹಿಳೆಯರ ಸ್ಥಾನ-ಮಾನಗಳಿಗೆ ಧಕ್ಕೆಯನ್ನುಂಟು ಮಾಡುವ ಆಚರಣೆಗಳನ್ನು ಸಂವಿಧಾನದ ಪ್ರಕಾರವೇ ನಿಷೇಧಿಸಿದ್ದು ಸರ್ಕಾರವೇ ಇದನ್ನು ಪಾಲಿಸದೆ ಮಹಿಳೆಯರಿಗೆ ಕುಂದನ್ನುಂಟು ಮಾಡುವ ವೈದವ್ಯ ಪರಿಪಾಲನೆಗೆ ಪ್ರೋತ್ಸಾಹ ನೀಡುತ್ತಿದೆ. ತನ್ನಲ್ಲಿಯೇ ಇಂತಹ ಅನೇಕ ವೈರುಧ್ಯಗಳನ್ನು ಸರ್ಕಾರವೇ ಸೃಷ್ಟಿ ಮಾಡಿಕೊಂಡು ಆಡಳಿತ ನಡೆಸುತ್ತಿದೆ ಎಂದು ಹೇಳಬಹುದು.

ವಿಧವಾ ವೇತನ ಪಡೆಯಲು ಅವರ ವಾರ್ಷಿಕ ಆದಾಯ ೬೦೦೦ ರೂ.ಗಳು ಮಾತ್ರ ಇರಬೇಕೆಂದು ಹೇಳುತ್ತದೆ. ಅಂದರೆ ವೈದವ್ಯ ಪರಿಪಾಲನೆ ಇಂತಹ ಮಹಿಳೆಯರಿಗೆ ಮಾತ್ರವೇ ಧಕ್ಕೆಯನ್ನುಂಟು ಮಾಡುತ್ತದೆ ಎಂದು ಸರ್ಕಾರ ತಾನೇ ಪೂರ್ವಾಗ್ರಹ ಪೀಡಿತವಾದಂತಿದೆ. ಯಾವ ಉನ್ನತ, ಮಧ್ಯಮ ವರ್ಗದ ಮಹಿಳೆಯರಿಗೆ ತಾನೇ ಈ ವೈದವ್ಯ ಪರಿಪಾಲನೆ ಶ್ರೇಷ್ಠತೆಯನ್ನು ತಂದುಕೊಡಬಲ್ಲದು. ಯೋಜನೆ ಕೆಳ ವರ್ಗದ ಮಹಿಳೆಯರಿಗೆ ಆರ್ಥಿಕ ಭದ್ರತೆಯನ್ನು ತಂದುಕೊಡಬಲ್ಲದೇ ವಿನಃ ಇಡೀ ಮಹಿಳಾ ಸಂಕುಲಕ್ಕೆ ಸಾಮಾಜಿಕ ಭದ್ರತೆಯನ್ನಲ್ಲ. ಇಲ್ಲಿ ವಿಶೇಷವಾಗಿ ಹೇಳುವುದಾದರೆ ಕುಂಚಿ ಕೊರವರಲ್ಲಿ ಮರು ಮದುವೆಗೆ ಮುಕ್ತ ಅವಕಾಶಗಳಿವೆ. ಜೊತೆಗೆ ವೈದವ್ಯ ಪರಿಪಾಲನೆಯೂ ಇದೆ. ಆದರೆ ಇಂತಹ ಯೋಜನೆಗಳ ಲಾಭ ಇದುವರೆಗೂ ಯಾವ ಮಹಿಳೆಯರು ಪಡೆದುಕೊಂಡಿಲ್ಲ. ಮತ್ತೊಂದು ಯೋಜನೆಯಾದ ಸಾಮಾಜಿಕ ಪಿಡುಗುಗಳ ನಿವಾರಣಾ ಘಟಕ ಕೇವಲ ಪ್ರಚಾರ ಘಟಕವಾಗಿದೆ ಎಂದು ಹೇಳಬಹುದು. ಕಾರಣ ಎಲ್ಲಾ ಸಾಮಾಜಿಕ ಪಿಡುಗುಗಳು ಇನ್ನು ಜೀವಂತವಾಗೇ ಇದ್ದು, ಇವೇ ಸತ್ಯ ಎಂಬಂತೆ ತಮ್ಮ ಸ್ಥಾನಗಳನ್ನು ಭದ್ರಪಡಿಸಿಕೊಂಡಿರುವುದಾಗಿದೆ. ಬಾಲ ಸೇವಾ ಸಂಸ್ಥೆಗಳು ಕೊಳಚೆ ಪ್ರದೇಶಗಳಲ್ಲಿ ಮತ್ತು ಶಾಲೆಗಳಲ್ಲಿ ಮಕ್ಕಳಿಗೆ ನಿರ್ದಿಷ್ಟವಾಗಿ ಮಾನಸಿಕ ಮತ್ತು ಸಾಮಾಜಿಕ ಸಮಸ್ಯೆಗಳುಳ್ಳವರಿಗೆ ಮಾರ್ಗದರ್ಶನ ಮತ್ತು ಸಮಾಲೋಚನೆ ಮಾಡಿ ಉತ್ತಮ ಮಾರ್ಗ ತೋರಿಸುವ ಕಾರ್ಯ ಮಾಡುತ್ತದೆ. ಇಲ್ಲಿ ಕುಂಚಿ ಕೊರವ ಸಮುದಾಯದ ಮಕ್ಕಳು ನಿರ್ಗತಿಕರಾಗಿದ್ದು, ಮನೆ-ಮನೆ, ಬೀದಿ-ಬೀದಿಗಳಲ್ಲಿ ತಿರುಗಿ ಭಿಕ್ಷಾಟನೆ ನಡೆಸುತ್ತಿದ್ದಾರೆ. ಇವು ಪ್ರತಿನಿತ್ಯ ಎಲ್ಲರ ಕಣ್ಣಿಗೂ ಕಾಣುವಂತಹ ದೃಶ್ಯಗಳಾಗಿವೆ. ಹೀಗಿರುವಾಗ ಈ ಸಂಸ್ಥೆಯ ನಿಜವಾದ ಕಾರ್ಯವಾದರೂ ಏನು ಎಂಬ ಪ್ರಶ್ನೆ ಕಾಡದಿರದು.

ಭಾಗ್ಯ ಲಕ್ಷ್ಮಿ ಯೋಜನೆ ಒಂದು ಉತ್ತಮ ಯೋಜನೆಯಾಗಿದ್ದು, ಕುಂಚಿ ಕೊರವ ಸಮುದಾಯದ ಹೆಣ್ಣು ಮಕ್ಕಳಿಗೆ, ಮನೆಯವರಿಗೆ ಪೂರಕವಾಗಿ ಕಾರ್ಯ ನಿರ್ವಹಿಸುತ್ತದೆನೋ ನಿಜ ಆದರೆ ಇದರ ಷರತ್ತಿನ ಪ್ರಕಾರ ಕುಂಚಿ ಕೊರವ ಯಾವ ಮಹಿಳೆಯರು ಸಂತಾನಹರಣ ಶಸ್ತ್ರಚಿಕಿತ್ಸೆಗೆ ಒಳಗಾಗಿಲ್ಲ. ತಮ್ಮ ಸಮುದಾಯದ ಉಳಿವಿಗೆ ಮಕ್ಕಳನ್ನು ಹೆರುತ್ತಲೇ ಇದ್ದಾರೆ. ಆದ್ದರಿಂದ ಭಾಗ್ಯಲಕ್ಷ್ಮಿ ಯೋಜನೆ ಈ ಸಮುದಾಯಕ್ಕೆ ನಿಷ್ಪ್ರಯೋಜಕವಾಗಿದೆ. ಸಮಗ್ರ ಬಾಲ ವಿಕಾಸ ಯೋಜನೆಯಡಿಯಲ್ಲಿ ಮಕ್ಕಳ ಮತ್ತು ಬಸುರಿ, ಬಾಣಂತಿ ಮಹಿಳೆಯರ ಆರೋಗ್ಯವನ್ನು ಸುಧಾರಿಸಲು ಅನೇಕ ಕಾರ್ಯಕ್ರಮಗಳನ್ನು

[illegible]

[illegible]

[illegible]

ಹಮ್ಮಿಕೊಂಡು, ಪೌಷ್ಟಿಕಾಂಶದ ಕೊರತೆ ನೀಗಿಸಲು ಆಹಾರ ವಿತರಣೆ ಹಾಗೂ ಆರೋಗ್ಯ ಶಿಕ್ಷಣ ನೀಡುತ್ತಿದೆ. ಆದರೆ ಈ ಸಮುದಾಯದ ಮಹಿಳೆಯರು ಈ ಯೋಜನೆಯ ಲಾಭ ಪಡೆದುಕೊಳ್ಳುವಲ್ಲಿ ವಿಫಲರಾಗಿದ್ದಾರೆ ಎಂದು ಹೇಳಬಹುದು. ಇದಕ್ಕೆ ಈ ಸಮುದಾಯದಲ್ಲಿಯ ಅನಾರೋಗ್ಯ ಮತ್ತು ಕೊಳಚೆ ಪ್ರದೇಶವೆ ಜೀವಂತ ನಿದರ್ಶನಗಳಾಗಿವೆ. ರಾಷ್ಟ್ರೀಯ ಪೌಷ್ಟಿಕ ಮಿಷನ್ ಯೋಜನೆಯೂ ಕೂಡ ಈ ಮಾದರಿಯಲ್ಲಿ ವಿಫಲವಾಗಿರುವುದು ಕಂಡುಬರುತ್ತದೆ.

ಬಾಲಿಕಾ ಸಂಮೃದ್ಧಿ ಯೋಜನೆಯು ಹೆಣ್ಣು ಮಕ್ಕಳ ಬಗ್ಗೆ ಇರುವ ನಕಾರಾತ್ಮಕ ಧೋರಣೆಯನ್ನು ಹೋಗಲಾಡಿಸಲು ಕೈಗೊಂಡಂತಹ ಯೋಜನೆಯಾಗಿದೆ. ಮದುವೆಯ ವಯಸ್ಸನ್ನೇನೋ ಹೆಚ್ಚಿಸುತ್ತದೆ. ಆದರೆ ಶಿಕ್ಷಣಕ್ಕೆಂದು ನೀಡುವ ವಾರ್ಷಿಕ ವಿದ್ಯಾರ್ಥಿ ವೇತನ ತುಂಬ ಕಡಿಮೆ ಮೌಲ್ಯದ್ದಾಗಿದೆ. ಒಬ್ಬ ವ್ಯಕ್ತಿಯ ಜೀವನ ನಿರ್ವಹಣೆಗೆ ಸಾವಿರಗಟ್ಟಲೇ ದುಡಿದು ತಂದರು ಸಾಲದ ದಿನದಲ್ಲಿ ಕಡಿಮೆ ಮೊತ್ತದ ವೇತನ ಆರ್ಥಿಕ ಭದ್ರತೆ ತಂದುಕೊಡಲಾರದು. ಇಂತಹ ಯಾವುದೇ ಯೋಜನೆಯ ಲಾಭ ಇದುವರೆಗೂ ಕುಂಚಿ ಕೊರವ ಯಾವ ಬಾಲಕಿಯರು ಪಡೆದಿಲ್ಲ. ಮತ್ತೊಂದು ಸಂಗತಿಯೆಂದರೆ ಒಂದು ಬಾರಿ ಒಂದು ಯೋಜನೆಯ ಲಾಭ ಪಡೆದವರು ಮತ್ತೊಂದು ಯೋಜನೆಯ ಲಾಭ ಪಡೆಯಲು ಅರ್ಹರಿದ್ದರೂ ಪಡೆಯಬಾರದೆಂದು ಕ್ರಮ ರೂಪಿಸಿದೆ. ಯಾವುದಾದರೂ ಒಂದು ಯೋಜನೆಯ ಲಾಭ ಪಡೆದು ಅದರಲ್ಲಿ ವಿಫಲರಾದರೆ ಏನುಗತಿ! ಮತ್ತೆ ಬರಿಗೈ. ಒಟ್ಟಿನಲ್ಲಿ ಯಾವ ಯೋಜನೆಯು ಸಂಪೂರ್ಣವಾಗಿ ಮಹಿಳೆಯರಿಗೆ ಉಪಯುಕ್ತತೆ ತಂದುಕೊಡದಾಗಿದೆ.

ಮಹಿಳೆಯರಿಗೆ ವೃತ್ತಿ ಶಿಕ್ಷಣ ತರಬೇತಿ, ಹೊಲಿಗೆ ಯಂತ್ರಗಳ ಸರಬರಾಜು ಇಂತಹ ಉತ್ತಮ ಯೋಜನೆಯ ಸದುಪಯೋಗಗಳನ್ನು ಸಹ ಈ ಕುಂಚಿ ಕೊರವ ಮಹಿಳೆಯರು ಪಡೆಯದಿರುವುದು ಅವರ ದುರಾದೃಷ್ಟ ಎಂದು ಹೇಳಬಹುದು. ಆದರೆ ಓದಲು ಬರೆಯಲು ಬರದ ಈ ಮಹಿಳೆಯರು ಪತ್ರಿಕೆಯ ಮೂಲಕ ಪ್ರಕಟಗೊಳ್ಳಬಹುದಾದಂತಹ ಇಂಥ ಯೋಜನೆಗಳ ಬಗ್ಗೆ ಹೇಗೆ ಮಾಹಿತಿ ಪಡೆದುಕೊಳ್ಳಬಲ್ಲರು ಎಂಬುದು ಕೂಡ ಇಲ್ಲಿ ಗಮನಿಸಬೇಕಾದ ಅಂಶವಾಗಿದೆ. ಇದೇ ನಿಟ್ಟಿನಲ್ಲಿ ಅಸ್ಪೃಶ್ಯತೆ ನಿವಾರಣೆ ಯೋಜನೆಯಾಗಿರಬಹುದು, ದೌರ್ಜನ್ಯಕ್ಕೊಳಗಾದ ಪರಿಶಿಷ್ಟ ಜಾತಿಯವರಿಗೆ ಪರಿಹಾರ ನೀಡುವ ಯೋಜನೆಯಾಗಿರಬಹುದು, ಮೈಕ್ರೋ ಕ್ರೆಡಿಟ್ ಯೋಜನೆಯಾಗಿರಬಹುದು, ಹೀಗೆ ಹತ್ತು ಹಲವಾರು ಯೋಜನೆಗಳ ಸದುಪಯೋಗ ಈ ಮಹಿಳೆಯರು ಪಡೆಯದೆ ಹೋಗಿದ್ದಾರೆ. ಇದಕ್ಕೆ ಪೂರಕ ಎನ್ನುವಂತೆ ಯೋಜನೆಯೊಳಗಿನ ನ್ಯೂನ್ಯತೆಗಳು ಕೂಡಾ ಕಾರಣವಾಗಿವೆ.

ಕುಂಚಿ ಕೊರವ ಮಹಿಳೆಯರು ಅಜ್ಞಾನವಂತರು, ಅನಕ್ಷರಸ್ಥರಾಗಿರುವುದರಿಂದ ಇಂತಹ ಯಾವುದೇ ಯೋಜನೆಗಳ ಲಾಭ ಪಡೆಯುವಲ್ಲಿ ವಿಫಲರಾಗಿದ್ದಾರೆ. ಇವರು ಇಂತಹ ಯೋಜನೆಯ ಲಾಭ ಪಡೆದಿಲ್ಲ ಎಂಬುದಕ್ಕೆ ಸರ್ಕಾರವು ಇಂದು ನೇರವಾಗಿ ಹೊಣೆಯಾಗಬೇಕಿದೆ. ಏಕೆಂದರೆ ಯಾವುದೇ

ಯೋಜನೆ ರೂಪಿಸುವಾಗ ಎಲ್ಲ ಸಮುದಾಯಗಳ ಸ್ಥಿತಿ-ಗತಿಗಳನ್ನರಿತು ಎಲ್ಲರಿಗೂ ಅನ್ವಯವಾಗುವಂತೆ ಯೋಜನೆ ಜಾರಿಗೊಳಿಸಬೇಕು, ಬದಲಾಗಿ ಕೆಲವೇ ಕೆಲವು ಪರಿಶಿಷ್ಟ ಜಾತಿ ಸಮುದಾಯದ ಮಹಿಳೆಯರಿಗೆ ಅನ್ವಯವಾಗುವಂತೆ ಯೋಜನೆ ರೂಪಿಸಿದರೆ ಅವು ಸಮಾನತೆ ತಂದುಕೊಡಲಾರವು. ಇದಷ್ಟೇ ಅಲ್ಲದೆ ಅಧಿಕಾರಿಗಳ ಭ್ರಷ್ಟಾಚಾರ, ಮಧ್ಯವರ್ತಿಗಳ ಹಾವಳೀ ಯಾವ ಯೋಜನೆಗಳು ಮಹಿಳೆಯರಿಗೆ ಸಂಪೂರ್ಣವಾಗಿ ತಲುಪದಂತೆ ಮಾಡಿವೆ. ಇನ್ನು ಈ ಕುಂಚಿ ಕೊರವ ಮಹಿಳೆಯರು ಯಾವ ರೀತಿಯ ಲಾಭವನ್ನು ಪಡೆಯದೆ ಬಡತನವನ್ನು ಸದಾ ಕಾಲ ಅಪ್ಪಿಕೊಂಡಂತವರಾಗಿರುವುದು ಕಂಡುಬರುತ್ತದೆ. ಸರ್ಕಾರ ಇನ್ನು ಮುಂದಾದರೂ ಎಚ್ಚೆತ್ತು ಇಂತಹ ಅಂಚಿಗೆ ತಳಲ್ಪಟ್ಟ ಸಮುದಾಯಗಳನ್ನು ಗಮನದಲ್ಲಿಟ್ಟುಕೊಂಡು ಯೋಜನೆಗಳನ್ನು ರೂಪಿಸಬೇಕು. ಅಂದಾಗ ಮಾತ್ರ ಇಡೀ ದೇಶ ಅಭಿವೃದ್ಧಿ ಪಥದತ್ತ ದಾಪುಗಾಲು ಹಾಕಲು ಸಾಧ್ಯವಾಗುತ್ತದೆ. ಅಧಿಕಾರಿವರ್ಗದವರಲ್ಲಿಯ ಆಲಸಿತನ, ಭ್ರಷ್ಟಚಾರ, ಮಧ್ಯವರ್ತಿಗಳ ಹಾವಳಿಯನ್ನು ಸಂಪೂರ್ಣವಾಗಿ ಮಟ್ಟಹಾಕಿ, ಸಿನಿಮಾ ಚಿತ್ರಗಳು ಪ್ರತಿಯೊಂದು ಗೋಡೆಗಳ ಮೇಲೆ ಇರುವ ಹಾಗೇ ಯೋಜನೆಗಳ ಭಿತ್ತಿ ಪತ್ರಗಳಿರಬೇಕು. ಪ್ರತಿಯೊಂದು ಸಮುದಾಯಕ್ಕೆ ಹೋಗಿ ಅಭಿವೃದ್ಧಿ ಯೋಜನೆಗಳ ಬಗ್ಗೆ ಮಾಹಿತಿ ನೀಡುವ ಕಾರ್ಯಕ್ರಮವನ್ನು ಜವಾಬ್ದಾರಿಯುತವಾಗಿ ಸರ್ಕಾರ ಕೈಗೊಳ್ಳಬೇಕು. ಆಗ ಮಾತ್ರ ಮಹಿಳೆಯರು ಯೋಜನೆಯ ಲಾಭ ಪಡೆದು ಸಬಲೀಕರಣ ಹೊಂದಲು ಸಾಧ್ಯವಾಗುತ್ತದೆ.

ಅಡಿಟಿಪ್ಪಣಿ

೧. ನಾರಾಯಣ ವಿಶ್ವ ಎಂ., **ಗ್ರಾಮೀಣ ಮತ್ತು ನಗರ ಸಮಾಜಶಾಸ್ತ್ರ**, ಪು.೧೬೩

ಅಧ್ಯಾಯ ೭

ಸಮಾರೋಪ

೭

ಸಮಾರೋಪ

ಸಮುದಾಯ ಅನ್ನುವುದೇ ಒಂದು ಅರ್ಥದಲ್ಲಿ ನೆಲೆಯನ್ನು ಕಳೆದುಕೊಂಡು ಒದ್ದಾಡುವ ಸಂದರ್ಭದಲ್ಲಿ, ಅಲೆಮಾರಿಗಳಾದವರು ಒಂದೆಡೆ ಗುಂಪನ್ನು ಸೃಷ್ಟಿಸಿಕೊಂಡು ಜೀವನ ನಡೆಸಿ ಸಮಾಜದಲ್ಲಿ ತಮ್ಮದೇ ಆದ ಜಿಗುಟುತನವನ್ನು ಉಳಿಸಿಕೊಳ್ಳಲು ಹೆಣಗುತ್ತಿರುವ ಸಂದರ್ಭ ಕಂಡುಬರುತ್ತಿದೆ. ಸಮುದಾಯ ಎಂದರೆ ಅದು ಸ್ತ್ರೀ ಮತ್ತು ಪುರುಷ ಈ ಎರಡೂ ವರ್ಗದವರನ್ನು ಒಳಗೊಂಡಿರುತ್ತದೆ. ಇಂತಹ ಹತ್ತು ಹಲವಾರು ಸಮುದಾಯಗಳು ಸಮಾಜದಲ್ಲಿ ವಾಸಿಸುತ್ತಿದ್ದು, ಅವುಗಳಲ್ಲಿ ಒಂದಾದ ಅತ್ಯಂತ ಹಿಂದೆ ಉಳಿದಿರುವ ಕುಂಚಿ ಕೊರವ ಸಮುದಾಯದ ಮಹಿಳಾ ವರ್ಗವನ್ನು ಇಂದು ನಮ್ಮ ಪ್ರಸ್ತುತ ಅಧ್ಯಯನದಲ್ಲಿ ಅಭ್ಯಸಿಸಲಾಗಿದೆ. ಇವರು ಬೇರೆ ಸಮುದಾಯಗಳ ಆಸುಪಾಸಿನಲ್ಲಿ ವಿಶಿಷ್ಟ ಹಾಗೂ ವಿಭಿನ್ನ ರೀತಿಯಲ್ಲಿ ಜೀವನ ಸಾಗಿಸುತ್ತಿದ್ದಾರೆ. ಆದ್ದರಿಂದ ಈ ಮಹಿಳೆಯರ ಅಧ್ಯಯನ ಒಂದು ಅರ್ಥಪೂರ್ಣ ಹಾಗೂ ಪರಿಪೂರ್ಣತೆಯನ್ನು ಪಡೆದುಕೊಂಡಂತಹದ್ದಾಗಿದೆ. ಸಮುದಾಯದ ಪ್ರಮುಖ ಅಂಗವಾದ ಈ ಕುಂಚಿ ಕೊರವ ಮಹಿಳೆಯರ ಬದುಕಿನ ವಿವಿಧ ಮಜಲುಗಳನ್ನು ಹಂತ ಹಂತವಾಗಿ ಹೆಕ್ಕುತ್ತಾ, ವಿಶ್ಲೇಷಣೆಗೊಳಪಡಿಸಿ ಅರ್ಥೈಸುವಲ್ಲಿ ಅಧ್ಯಯನ ಬಹುಮುಖ್ಯ ಪಾತ್ರವಹಿಸಿದೆ. ತನ್ನದು ತನ್ನದಲ್ಲದ ಬದುಕನ್ನು ಒಟ್ಟಾಗಿಸಿಕೊಂಡು ಜೀವನ ನಡೆಸುವಲ್ಲಿ ಈ ಮಹಿಳೆಯರು ಯಶಸ್ವಿಯಾಗಿದ್ದಾರೆ. ಬೇರೆಲ್ಲಾ ಸಮುದಾಯಗಳಂತೆ ಈ ಸಮುದಾಯದಲ್ಲೂ ಪುರುಷ ಪ್ರಧಾನ ವ್ಯವಸ್ಥೆ ತನ್ನ ಸ್ಥಾನ ಭದ್ರಪಡಿಸಿಕೊಳ್ಳುವಲ್ಲಿ ಮೇಲುಗೈ ಸಾಧಿಸಿದೆ. ಇವುಗಳೆಲ್ಲವುಗಳನ್ನು ವಿಶ್ಲೇಷಿಸುವುದರ ಜೊತೆಗೆ ಅಲೆಮಾರಿ ಬುಡಕಟ್ಟಿನವರಾಗಿ ನಂತರ ಸಮುದಾಯದ ಜೀವನಕ್ಕೆ ಕಾಲಿರಿಸಿ, ನಗರದ ಪ್ರಭಾವಕ್ಕೊಳಗಾಗಿಯೂ ಹೇಗೆ ತಮ್ಮ ಜೀವನ ನಡೆಸಿಕೊಂಡು ಬಂದಿದ್ದಾರೆ ಎಂಬುದನ್ನು ಕೂಡ ಅಭ್ಯಸಿಸಲಾಗಿದೆ.

ಕುಂಚಿ ಕೊರವ ಸಂಸ್ಕೃತಿಯನ್ನು ಗಮನಿಸಿದಾಗ ಬೇರೆಲ್ಲ ಸಮುದಾಯದ ಸಂಸ್ಕೃತಿಗಳಂತೆ ಇದು ಕೂಡಾ ಪುರುಷ ಅಧೀನದಲ್ಲೇ ರೂಪಿತವಾಗಿದೆ. ಏನೆಲ್ಲ ತನ್ನ ಆಳ್ವಿಕೆ ಅಥವಾ ಅಧೀನತೆಗೆ ಬೇಕೊ ಅಂತಹ ಎಲ್ಲಾ ತಂತ್ರಗಳನ್ನು ರೂಪಿಸಿ ರೂಢಿಸುವುದರಲ್ಲಿ ಈ ಸಮುದಾಯ ಯಶಸ್ವಿಯಾಗಿದೆ. ಇಡೀ ಸಮುದಾಯದ ಬಲ, ಭದ್ರತೆ ಮಹಿಳೆಯರೇ ಎಂದು ಅವರನ್ನು ವ್ಯವಸ್ಥಿತವಾಗಿ ಶೋಷಿಸುತ್ತಲೇ ಇದೆ.

[illegible]

[illegible]

[illegible]

ಅನುಭವಿಸಿಯೂ ಅನುಭವಕ್ಕೆ ಬಾರದ ರೀತಿಯಲ್ಲಿ ಈ ಮುಗ್ಧ ಮಹಿಳೆಯರು ಪುರುಷ ಪ್ರಧಾನತೆಯ ಕುತಂತ್ರಕ್ಕೆ ಸಿಲುಕಿ ನಲುಗಿ ಹೋಗಿದ್ದಾರೆ. ದುಡಿಮೆ, ಕೌಟುಂಬಿಕ ಜವಾಬ್ದಾರಿ, ಸಮುದಾಯದ ಉಳಿವು (ಸಂತಾನೋತ್ಪತ್ತಿ) ಎಲ್ಲವನ್ನು ತಮ್ಮ ಹೆಗಲಿಗೇರಿಸಿಕೊಂಡು ಅವಿರತವಾಗಿ ಶ್ರಮಿಸುತ್ತಿರುವ ಈ ಮಹಿಳೆಯರ ಕಾರ್ಯ ಶ್ಲಾಘನೀಯ ಸಂಗತಿಯಾಗಿದೆ. ಸಾಮಾಜಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ಆರೋಗ್ಯದ ದೃಷ್ಟಿಯಿಂದ ಎಲ್ಲಾ ಕ್ಷೇತ್ರಗಳಲ್ಲೂ ಹಿಂದುಳಿದಿದ್ದು, ಈ ಕ್ಷೇತ್ರಗಳಲ್ಲೇ ತಮ್ಮ ಸಮುದಾಯದ ಪುರುಷರಿಂದಲೂ ಕೂಡಾ ಲಿಂಗ ತಾರತಮ್ಯಕ್ಕೊಳಗಾಗುತ್ತಿದ್ದಾರೆ. ಪುರುಷ ಪ್ರಧಾನತೆಯ ಹೂರಣವಿರುವ ಸಾಮಾಜೀಕರಣ, ಇವುಗಳಾವುದರ ಅರಿವು ಈ ಮಹಿಳೆಯರಿಗೆ ಅನುಭವಕ್ಕೆ ಬಾರದಂತೆ ಮಾಡಿದೆ. ಇವರಲ್ಲಿಯ ಅಜ್ಞಾನ ಕೂಡ ಇಂತವೆಲ್ಲವುದರಗಳ ಸರಿ ತಪ್ಪುಗಳನ್ನು ಗುರುತಿಸದಂತೆ ಮಾಡಿದೆ. ಚಿಕ್ಕ ಮಕ್ಕಳಿಂದಲೇ ಆರಂಭವಾಗುವ ಶ್ರಮದ ವಿಭಜನೆ ಈ ಮಹಿಳೆಯರಿಗೆ ಅಗತ್ಯಕ್ಕಿಂತ ಹೆಚ್ಚು ಹೊರೆ ತಂದೊಡ್ಡಿದೆ.

ಶಿಕ್ಷಣ ಪಡೆಯಬೇಕು, ನಮ್ಮ ಮಕ್ಕಳಿಗೂ ಶಿಕ್ಷಣ ದೊರಕಿಸಬೇಕೆಂದು ಈ ಮಹಿಳೆಯರು ಹಂಬಲಿಸುತ್ತಿದ್ದಾರೆ. ಏಕೆಂದರೆ ತಾವು ಇಂದು ಅನುಭವಿಸುವ ಸ್ಥಿತಿ ತಮ್ಮ ಹೆಣ್ಣುಮಕ್ಕಳಿಗೆ ಬಾರದಿರಲೆಂದು. ಆದರೆ ಪುರುಷ ಪ್ರಧಾನ ವ್ಯವಸ್ಥೆ ಇದಕ್ಕೆ ಇಂದಿಗೂ ಮುಳುವಾಗಿ ಕಾಡುತ್ತಿದೆ. ಜೊತೆಗೆ ಕಿತ್ತು ತಿನ್ನುವ ಬಡತನ, ಜಾತಿ ಶ್ರೇಣೀಕರಣಗಳು ಕೂಡ ಇದಕ್ಕೆ ಅಡ್ಡಿಯಾಗಿವೆ. ಬದುಕಿನ ಬಗ್ಗೆ ನೂರಾರು ಕನಸುಗಳನ್ನು ಹೊತ್ತು ಅವುಗಳನ್ನು ನನಸಾಗಿಸಿಕೊಳ್ಳುವ ಸಂದರ್ಭಕ್ಕೆ ಜಾತಕ ಪಕ್ಷಿಯಂತೆ ಕಾಯುತ್ತಿದ್ದಾರೆ. ಕನಸುಗಳೆಂದರೆ ವಜ್ರ, ವೈಡೂರ್ಯಗಳಲ್ಲ. ಕೇವಲ ಮೂಲಭೂತ ಸೌಕರ್ಯಗಳು. ಇವುಗಳನ್ನೂ ಈಡೇರಿಸಿಕೊಳ್ಳಲಾರಂದತಹ ಹೀನಾಯ ಸ್ಥಿತಿ ಈ ಕುಂಚಿ ಕೊರವ ಮಹಿಳೆಯರದ್ದಾಗಿದೆ. ದುಡಿಮೆಯಲ್ಲಿ ಬರುವ ಸಮಸ್ಯೆಗಳೊಂದೆಡೆಯಾದರೆ ತಮ್ಮ ಸಮುದಾಯದ ಪುರುಷರಿಂದ ಬಂದೊದಗುವ ಸಮಸ್ಯೆಗಳಿನ್ನೊಂದೆಡೆ. ಇವುಗಳನ್ನು ಗಮನಿಸಿದಾಗ ಈ ಮಹಿಳೆಯರು ಸಂಪೂರ್ಣವಾಗಿ ಸಮಸ್ಯೆಗಳ ಆಗರವೆ ಆಗಿದ್ದಾರೆ. ಇವುಗಳೆಲ್ಲದರ ನಡುವೆಯೂ ಜೀವನವನ್ನು ಹೋರಾಟವಾಗಿ ಸ್ವೀಕರಿಸಿ ಬದುಕಿನೂದ್ದಕ್ಕೂ ನೆಮ್ಮದಿಯ ಜೀವನಕ್ಕಾಗಿ ಕದನ ನಡೆಸುತ್ತಲೆ ಇದ್ದಾರೆ. ಸರ್ಕಾರ, ಸಮಾಜ, ಸ್ತ್ರೀಯರಿಗೆ ಸಮಾನತೆ ತೋರಬೇಕಾದ ಇವರ ಸಮುದಾಯ ಇವುಗಳು ಮಾತ್ರ ಈ ಮಹಿಳೆಯರಿಗೆ ನೆಮ್ಮದಿ ಜೀವನ ತಂದು ಕೊಡಬಲ್ಲವು.

ಕುಂಚಿ ಕೊರವ ಮಹಿಳೆಯರ ಅಭಿವೃದ್ಧಿಗೆಂದು(SC) ಸರ್ಕಾರ ಅನೇಕ ಯೋಜನೆಗಳನ್ನು ರೂಪಿಸಿದೆ. ಆದರೆ ಇವುಗಳಲ್ಲಿ ಹಲವಾರು ಲೋಪದೋಷಗಳಿದ್ದು, ಈ ಮಹಿಳೆಯರಿಗೆ ತಲುಪದಂತಾಗಿವೆ. ಜೊತೆಗೆ ಈ ಮಹಿಳೆಯರಲ್ಲಿಯ ಜ್ಞಾನದ ಕೊರತೆ ಕೂಡ ಇಂತಹ ಯೋಜನೆಗಳ ಲಾಭ/ಪ್ರಯೋಜನ ಪಡೆದುಕೊಳ್ಳದೇ ಇರುವ ಕಾರಣವಾಗಿದೆ. ಯಾವುದೇ ಒಂದು ಜನಪದ ಸಾಹಿತ್ಯ (ಹಾಡುಗಳು) ಆಯಾ

[illegible]

[illegible]

[illegible]

ಸಮುದಾಯದ ಸ್ಥಿತಿ-ಗತಿ, ಸ್ಥಾನ-ಮಾನಗಳನ್ನು ಬಿಂಬಿಸುತ್ತದೆ. ಈ ನಿಟ್ಟಿನಲ್ಲಿ ಕುಂಚಿ ಕೊರವರ ಜನಪದ ಗೀತೆಗಳನ್ನು ಗಮನಿಸಿದಾಗ ಅವು ಮಹಿಳೆಯರನ್ನು ಸಾಂಪ್ರದಾಯಿಕರಣಗೊಳಸುವಲ್ಲಿ ಕಾರ್ಯನಿರತವಾಗಿರುವುದು ಕಂಡುಬರುತ್ತದೆ. ಇದು ಕೂಡ ಪುರುಷ ಪರವಾಗಿಯೂ ಹಾಗೂ ಪುರುಷ ರೂಪಿತವಾಗಿದೆ ಎಂದು ಹೇಳಬಹುದು.

ಅಲೆಮಾರಿತನದಿಂದುಂಟಾಗುವ ಸಮಸ್ಯೆಗಳು, ವಲಸೆಯಿಂದ ಬಂದೊದಗುವ ಸಮಸ್ಯೆಗಳು, ಕೌಟುಂಬಿಕ ಸಮಸ್ಯೆಗಳು, ಅಸಂಘಟಿತವಾಗಿ ದುಡಿಮೆಯಲ್ಲಿ ಎದುರಿಸುತ್ತಿರುವ ಸಮಸ್ಯೆಗಳಂತೂ ಹೇಳತಿರವಾಗಿವೆ. ಇವುಗಳೆಲ್ಲವುದರಗಳಿಂದ ಮುಕ್ತವಾಗಬೇಕಾದರೆ ಈ ಸಮುದಾಯದಲ್ಲಿಯ ಪೂರ್ವಾಗ್ರಹ ಸಾಂಪ್ರದಾಯಿಕ ಮನೋಭಾವನೆಗಳು ಬದಲಾಗಬೇಕು. ಸರ್ಕಾರ ಇಂತಹ ತೀರಾ ಹಿಂದುಳಿದ ಸಮುದಾಯಗಳ ಮಹಿಳೆಯರ ಶ್ರೇಯೋಭಿವೃದ್ಧಿಗೆ ಪೂರಕವಾಗುವಂತಹ ಯೋಜನೆಗಳನ್ನು ರೂಪಿಸಬೇಕು. ಜೊತೆಗೆ ಇವರನ್ನು ಅಸ್ಪೃಶ್ಯರಾಗಿ ಕಾಣುವಂತ ಇತರೇ ಸಮುದಾಯದ ದೃಷ್ಟಿಕೋನಗಳು ಬದಲಾಗಬೇಕು ಅಂದಾಗ ಮಾತ್ರ ಕುಂಚಿ ಕೊರವ ಮಹಿಳೆಯರು ಸಮಾಜದ ಮುಖ್ಯವಾಹಿನಿಗೆ ಬರಲು ಸಾಧ್ಯವಾಗುತ್ತದೆ. ಇಂತಹ ಸಮುದಾಯದ ಮಹಿಳೆಯರು ಸಬಲೀಕರಣಹೊಂದಿ ಆಳವಾಗಿ ಬೇರೂರಿದಾಗ ಮಾತ್ರ ಭಾರತ ಅಭಿವೃದ್ಧಿ ಪಥದತ್ತ ಸಾಗುತ್ತದೆ ಮತ್ತು ಸಂಪೂರ್ಣವಾಗಿ ಅಭಿವೃದ್ಧಿ ಹೊಂದುತ್ತದೆ.

೭.೦. ಈ ಅಧ್ಯಯನದಿಂದ ಕಂಡುಬರುವ ಅಂಶಗಳು

೧. ಕುಂಚಿ ಕೊರವ ಸಮುದಾಯದಲ್ಲಿ ಎಲ್ಲಾ ಕಾರ್ಯಗಳು ಪುರುಷ ಪ್ರಧಾನ ನೆಲೆಯಲ್ಲಿಯೇ ಜರುಗುತ್ತವೆ.

೨. ಸಂಸ್ಕೃತಿ, ಸಂಪ್ರದಾಯ ಮತ್ತು ಆಚರಣೆಗಳೆಂಬ ಹೆಸರಿನಲ್ಲಿ ಮಹಿಳೆಯರನ್ನು ಎರಡನೆ ದರ್ಜೆಗೆ ಇಳಿಸಿ ಪುರುಷರು ತಮ್ಮ ಹಿಡಿತದಲ್ಲಿಟ್ಟುಕೊಳ್ಳುವಂತಹ ಕ್ರಿಯಾವಿಧಿಗಳನ್ನು ಜಾರಿಗೊಳಿಸಿಕೊಂಡಿದ್ದಾರೆ.

೩. ರಾಜಕೀಯ, ಶಿಕ್ಷಣ, ಆರೋಗ್ಯ, ಆರ್ಥಿಕ ಎಲ್ಲಾ ಕ್ಷೇತ್ರಗಳಲ್ಲೂ ಈ ಮಹಿಳೆಯರು ಸಂಪೂರ್ಣವಾಗಿ ಹಿಂದುಳಿದ್ದಾರೆ.

೪. ಅಮರ್ತ್ಯಸೇನ್ ಹೇಳಿರುವ ಹಾಗೆ ಮಹಿಳೆ, ಶ್ರಮ, ದುಡಿಮೆ ಹೀಗೆ ಮಹಿಳೆಯರನ್ನು ಇವುಗಳ ಸಮಾನ ನೆಲೆಯಲ್ಲಿ ಇಟ್ಟಿರುವ ಹಾಗೆ ಕುಂಚಿ ಕೊರವ ಸಮುದಾಯದಲ್ಲೂ ಮಹಿಳೆಯರನ್ನು ಇವುಗಳ(ಮಹಿಳೆ, ಶ್ರಮ, ದುಡಿಮೆ) ಸಮಾನ ನೆಲೆಯಲ್ಲಿಟ್ಟು ಕಾಣುತ್ತಾರೆ. ಮಹಿಳೆಯರನ್ನು ಸಮುದಾಯದ ಸಂಪನ್ಮೂಲವಾಗಿ ಗುರುತಿಸುತ್ತಿದ್ದು ಇವರು ಇಲ್ಲದೆ ಹೋದರೆ ಇಡೀ ಕುಂಚಿ ಕೊರವರ ಬದುಕು ದುರ್ಗತಿಗೆ ತಳ್ಳಲ್ಪಡುತ್ತಿತ್ತು.

[illegible]

[illegible]

[illegible]

[illegible]

[illegible]

೫. ವಿಶೇಷವಾಗಿ ಈ ಸಮುದಾಯದಲ್ಲಿ ಕಂಡುಬರುವ ಅಂಶವೆಂದರೆ ಹೆಣ್ಣು ಮಕ್ಕಳಿಗೆ ಹೇರಲಾಗುವ ಶೀಲ, ಪಾತಿವೃತ್ಯದ ಕಲ್ಪನೆ ಇವರಲಿಲ್ಲ. ಇದು ಪ್ರಸಂಶನೀಯ ಸಂಗತಿ ಎಂದು ಹೇಳಬಹುದು. ಈ ವಿಚಾರದಲ್ಲಿ ಎಲ್ಲಾ ಸಮುದಾಯದ ಗಂಡಸರಿಗೂ ರಿಯಾಯಿತಿ ನೀಡಿರುವ ಸಮಾಜದಲ್ಲಿ, ಹೆಣ್ಣು ಮಕ್ಕಳಿಗೂ ರಿಯಾಯಿತಿ ನೀಡಿರುವುದು ಸಮುದಾಯದ ವೈಶಿಷ್ಟ್ಯ ಎಂದು ಹೇಳಬಹುದು.

೬. ಕುಂಚಿ ಕೊರವರ ಜನಪದ ಗೀತೆಗಳು ಸಾಂಪ್ರದಾಯಿಕವಾಗಿದ್ದು, ಮೌಢ್ಯದಿಂದ ಕೂಡಿದ ಆಚರಣೆಗಳನ್ನೇ ತಲೆತಲಾಂತರಕ್ಕೂ ಹಬ್ಬಿಸುತ್ತಾ ಬರುತ್ತಿವೆ.

೭. ಅನಕ್ಷರಸ್ಥರು ಮತ್ತು ಅಜ್ಞಾನವಂತರಾಗಿರುವುದರಿಂದ ಸರ್ಕಾರದ ಯಾವುದೇ ಯೋಜನೆಯ ಲಾಭ-ಉಪಯೋಗ ಪಡೆಯದಿರಲು ಕಾರಣವಾಗಿದೆ.

೮. ಇಂತಹ ತಳ ಸಮುದಾಯವನ್ನು ವಿಶೇಷವಾಗಿ ಗಮನದಲ್ಲಿಟ್ಟುಕೊಂಡು ಸರ್ಕಾರ ಇದುವರೆಗೆ ಯಾವುದೇ ಯೋಜನೆಗಳನ್ನು ರೂಪಿಸಿಲ್ಲ. ಸಾಮಾನ್ಯವಾಗಿ ಇತರೇ ಪರಿಶಿಷ್ಟಜಾತಿಗಳಿಗೆ ಏನು ಯೋಜನೆಗಳಿವೆಯೋ ಅವೇ ಈ ಸಮುದಾಯಕ್ಕೂ ಅನ್ವಯಿಸುತ್ತವೆ.

೭.೧. ಸಲಹೆ ಸೂಚನೆಗಳು

೧. ಇವರಲ್ಲಿಯ ಕಾನೂನು ಬಾಹಿರ ಎಲ್ಲಾ ಆಚರಣೆಗಳನ್ನು ಸಂಪೂರ್ಣವಾಗಿ ತಡೆಗಟ್ಟಬೇಕು. ಉದಾ: ಬಾಲ್ಯ ವಿವಾಹ, ಭಿಕ್ಷಾಟನೆ, ಬಾಲ ಕಾರ್ಮಿಕ ವೃತ್ತಿ ಇತ್ಯಾದಿ.

೨. ಸಂಪ್ರದಾಯ, ಸಂಸ್ಕೃತಿಯ ಹೆಸರಿನಲ್ಲಿ ಮಹಿಳೆಯರಿಗೆ ಕುಂದನ್ನುಂಟು ಮಾಡುವ ಪಿತೃ ಪ್ರಧಾನ ವ್ಯವಸ್ಥೆ ಹೇರಲ್ಪಟ್ಟ ಎಲ್ಲಾ ನಡಾವಳಿಗಳನ್ನು ಸಾಮುದಾಯಿಕವಾಗಿಯೇ ಬಹಿಷ್ಕರಿಸಬೇಕು.

೩. ಮೇಲು ಕೀಳೆಂಬ ಭಾವನೆ ಇಲ್ಲದೇ ಎಲ್ಲಾ ಕ್ಷೇತ್ರದಲ್ಲೂ ಪುರುಷರಿಗೆ ಸರಿಸಮಾನವಾದ ಸ್ಥಾನ-ಮಾನಗಳನ್ನು ಮಹಿಳೆಯರಿಗೂ ಕಲ್ಪಿಸಿಕೊಡಬೇಕು.

೪. ಅಸ್ಪೃಶ್ಯತೆಯನ್ನು ದೂರಗೊಳಿಸಿ ಹೆಚ್ಚಿನ ಶಿಕ್ಷಣ, ಜ್ಞಾನ ಪಡೆಯುವುದರ ಮೂಲಕ ಬೇರೆ ಸಮುದಾಯಗಳೊಟ್ಟಿಗೆ ನಾನು ಕೂಡ ಒಬ್ಬಳು. ಸಮಾಜ ಜೀವಿ ಎಂದು ಭಾಗಿಯಾಗಬೇಕಾದಂತಹ ವಾತಾವರಣವನ್ನು ಇಡೀ ಸಮಾಜ ಸೃಷ್ಟಿ ಮಾಡಿಕೊಡಬೇಕು.

೫. ಸ್ತ್ರೀ-ಪುರುಷರು ಮತ್ತು ಹುಡುಗ-ಹುಡುಗಿಯರು ಎಂಬ ಕಾರಣಕ್ಕೆ ಶೈಕ್ಷಣಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ, ಧಾರ್ಮಿಕವಾಗಿ, ಆರೋಗ್ಯಕ್ಕೆ ಸಂಬಂಧಿಸಿದಂತೆ ಮಾಡಲಾಗುತ್ತಿರುವ ಎಲ್ಲಾ ತಾರತಮ್ಯ ಧೋರಣೆಯನ್ನು ತೊರೆದು ಇಬ್ಬರಿಗೂ ಸಮಾನತೆ ಕಲ್ಪಿಸಿಕೊಡಬೇಕು.

೬. ಈ ಕುಂಚಿ ಕೊರವ ಮಹಿಳೆಯರು ತಯಾರಿಸುವ ವಸ್ತುಗಳಿಗೆ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಿಕೊಡುವುದರ ಜೊತೆಗೆ ಇವರು ತಯಾರಿಸುವ ವಸ್ತುಗಳು ಆಕರ್ಷಕವಾಗಿ ಕಾಣುವಂತೆ ಆಧುನಿಕ ಸ್ಪರ್ಶ ನೀಡುವ ತರಬೇತಿ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು.

೭. ಶುಚಿತ್ವ ಇಲ್ಲದ ಕಾರಣ, ಆರೋಗ್ಯದ ಮೇಲುಂಟಾಗುವ ತೊಂದರೆಗಳಿಂದ ಹಚ್ಚೆ ಹಾಕಿಸಿಕೊಳ್ಳುವ ಪದ್ಧತಿಯಿಂದ ಉಂಟಾಗುವ ಅಂಟುರೋಗಗಳಿಂದ, ಅವಿರತ ಶ್ರಮದಿಂದ ದೈಹಿಕವಾಗಿ ಉಂಟಾಗುವ ಆರೋಗ್ಯದ ತೊಂದರೆಗಳಿಂದ ಇವರನ್ನು ಮುಕ್ತರನ್ನಾಗಿಸಬೇಕು. ಈ ಕಾರ್ಯಗಳು ಸರ್ಕಾರದ ಅಭಿವೃದ್ಧಿ ಯೋಜನೆಗಳಿಂದ ಆಗಬೇಕು ಮತ್ತು ಸ್ವತಃ ಕುಂಚಿ ಕೊರವ ಮಹಿಳೆಯರಲ್ಲೇ ಜಾಗೃತಿ ಮೂಡಬೇಕು.

೮. ಮಹಿಳಾ ಅಭಿವೃದ್ಧಿಗೆ ಪೂರಕವಾಗುವ ಮಹಿಳಾ ಸಂಘಟನೆಗಳ ನಿರ್ಮಾಣ, SHGಗಳ ಸಂಘಟನೆಗಳು ನಿರ್ಮಾಣವಾಗಬೇಕು. ಮತ್ತು ಪ್ರತಿಯೊಬ್ಬರಲ್ಲೂ ನಾಯಕತ್ವ ಗುಣ ಬೆಳೆಸುವ ಕಾರ್ಯ ಕೈಗೊಂಡಾಗ ಮಾತ್ರ ಈ ಸಮುದಾಯ ಉಳಿಯುತ್ತದೆ ಹಾಗೂ ಮಹಿಳೆಯರ ನೈತಿಕತೆ ಹೆಚ್ಚುತ್ತದೆ.

೯. ಈ ಮಹಿಳೆಯರು ತಮಗೆ ಸರ್ಕಾರ ನೀಡಿದ ರಾಜಕೀಯ ಮೀಸಲಾತಿಗಳಾಗಿರಬಹುದು, ಶೈಕ್ಷಣಿಕ ಮೀಸಲಾತಿಗಳಾಗಿರಬಹುದು, ಸರ್ಕಾರಿ ಉದ್ಯೋಗ ಕೈಗೊಳ್ಳುವಲ್ಲಿನ ಮೀಸಲಾತಿಗಳಾಗಿರಬಹುದು. ಜೊತೆಗೆ ಸರ್ಕಾರದ ಅಭಿವೃದ್ಧಿ ಯೋಜನೆ ಇವೆಲ್ಲವುದರಗಳ ಲಾಭ ಪಡೆದು ಸಮಾಜದ ಮುಖ್ಯ ವಾಹಿನಿಗೆ ಬರಬೇಕು.

೧೦. ಕುಂಚಿ ಕೊರವರ ಜನಪದ ಸಾಹಿತ್ಯದ ಪಾಲನೆ, ಪೋಷಣೆ ಮಹಿಳೆಯರಿಗೆ ಪೂರಕವಾಗುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸಬೇಕು/ಸಾಗಬೇಕು. ಮಹಿಳೆಯರಿಗೆ ಧಕ್ಕೆಯನ್ನುಂಟು ಮಾಡುವ ಸಾಹಿತ್ಯವನ್ನು ಹುದುಗಿಸಿ ಪೂರಕವಾಗುವ ಸಾಹಿತ್ಯವನ್ನು ಕಟ್ಟಿ ಬೆಳೆಸಬೇಕು.

೧೧. ವಲಸೆ ಹೋಗುವುದನ್ನು ನಿಲ್ಲಿಸಿ ಸಂಘಟಿತರಾಗಿ, ಮಾರುಕಟ್ಟೆ ರೂಪಿಸಿಕೊಂಡು ತಮ್ಮ ಪರಂಪರಾಗತ ಕೆಲಸ ಕೌಶಲ್ಯಗಳಿಂದಲೇ ಪ್ರಮುಖರಾಗಿ ಗುರುತಿಸಿಕೊಳ್ಳಬೇಕು.

ಅನುಬಂಧಗಳು

೧. ನಕ್ಷೆ

೨. ಪ್ರಶ್ನಾವಳಿ

೩. ವೈಯಕ್ತಿಕ ವಿವರಗಳ ಪಟ್ಟಿ

೪. ಗ್ರಂಥಋಣ

೫. ಛಾಯಾಚಿತ್ರಗಳು

೧. ನಕ್ಷೆ

ಅಧ್ಯಯನದ ಕ್ಷೇತ್ರ



೨. ಪ್ರಶ್ನಾವಳಿ

ಕೊರವ ಮಹಿಳೆಯರ ಬದುಕು ಮತ್ತು ಬವಣೆ

(ಕೊಪ್ಪಳ ನಗರದ ಕುಂಚಿ ಕೊರವ ಮಹಿಳೆಯರನ್ನು ಅನುಲಕ್ಷಿಸಿ)

ಹೆಸರು :

ವಯಸ್ಸು :

ಜಾತಿ :

ಉಪಜಾತಿ :

ವೈವಾಹಿಕ ಸ್ಥಾನಮಾನ : ಅ. ವಿವಾಹಿತೆ ಬ.ಅವಿವಾಹಿತೆ

ಕ. ವಿಧವೆ ಡ. ವಿಚ್ಛೇದಿತೆ

ಶಿಕ್ಷಣ ಮಟ್ಟ : ಅ. ಪ್ರಾಥಮಿಕ ಬ. ಮಾಧ್ಯಮಿಕ

ಕ. ಕಾಲೇಜು ಡ. ಅನಕ್ಷರಸ್ಥೆ

ಸಾಮಾಜಿಕ ಸ್ಥಾನಮಾನ

೧. ಹೆಣ್ಣುಮಕ್ಕಳ ವಿವಾಹದ ನಿರ್ಧಾರ ಯಾರು ತೆಗೆದುಕೊಳ್ಳುತ್ತಾರೆ?

ಅ. ತಂದೆ ತಾಯಿ ಬ. ಅಣ್ಣಂದಿರು

ಕ. ಸ್ವತಃ ನಾವೇ ತೆಗೆದುಕೊಳ್ಳುತ್ತೀವಿ ಡ. ಸಂಬಂಧಿಕರು

೨. ನಿಮ್ಮ ವಿವಾಹ ಎಷ್ಟನೇ? ವಯಸ್ಸಿನಲ್ಲಿ ಆಯಿತು?

ಅ. ೧-೫ ಬ. ೫-೧೦

ಕ. ೧೦-೧೫ ಡ. ೧೫-೨೦

೩. ವೈವಾಹಿಕ ಸಂಬಂಧ ಬೆಸೆಯುವಾಗ ಕೊಡುಕೊಳ್ಳುವಿಕೆಯ ಬಗಿಗಳು ಯಾವುದರಲ್ಲಿ ಜರುಗುತ್ತವೆ

ಅ. ಸಾತಪಾಡಿ

ಬ. ಮಾನಪಾಡಿ

ಕ. ಕಾವಾಡಿ

ಡ. ಬೇರೆ ಜಾತಿಯವರೊಂದಿಗೆ

೪. ಮದುವೆಯ ಸಂದರ್ಭದಲ್ಲಿನ ಸಂಬಂಧದ ಸ್ವರೂಪವನ್ನು ಯಾವ ಬಗೆಯಲ್ಲಿ ನಿರ್ಧರಿಸಲಾಗುತ್ತದೆ.

ಅ. ವರನ ಕಡೆಯಿಂದ ವಧುವಿಗೆ ಹಣ ನೀಡುವ ಮೂಲಕ

ಬ. ವಧುವಿನ ಕಡೆಯಿಂದ ವರನಿಗೆ ಹಣ ನೀಡುವ ಮೂಲಕ

ಕ. ಭಾವನಾತ್ಮಕ ಸಂಬಂಧಗಳ ಆಧಾರದ ಮೇಲೆ

೫. ಯಾವ ಸಂದರ್ಭದಲ್ಲಿ ಹೆಣ್ಣಿಗೆ ಮರುಮದುವೆಯಾಗಲು ಅವಕಾಶವಿದೆ

ಅ. ಗಂಡ ಸತ್ತ ನಂತರ

ಬ. ವಿಚ್ಛೇದಿತೆಯಾದಾಗ

ಕ. ಗಂಡ ಪರಿತ್ಯಜನೆ ಮಾಡಿದಾಗ

ಡ. ಯಾವಾಗಲೂ ಇಲ್ಲ

೬. ಇತರೆ ಮಹಿಳೆಯರಿಗಿಂತ ಬೇರೆ ಆಗಿದ್ದೀರಿ ಎಂದು ಗುರುತಿಸಿಕೊಳ್ಳಲು ಕಾರಣವೇನು?

ಅ. ಸಂಪ್ರದಾಯ

ಬ. ಗಂಡಸರ ದಬ್ಬಾಳಿಕೆ

ಕ. ಕೈಗೊಳ್ಳುವ ದುಡಿಮೆಯ ಬಗೆ

ಡ. ಜಾತೀಯತೆ

೭. ನಿಮ್ಮ ಮನೆಯಲ್ಲಿ ಯಾವ ವಿಷಯಕ್ಕೆ ಸಂಬಂಧಿಸಿದಂತೆ ನಿರ್ಧಾರಗಳನ್ನು ಕೈಗೊಳ್ಳುತ್ತೀರಿ?

ಅ. ಮಕ್ಕಳ ಮದುವೆಯ ವಿಚಾರದಲ್ಲಿ

ಕ. ಮಕ್ಕಳಿಗೆ ಶಿಕ್ಷಣ ಕೊಡಿಸುವ ಸಂದರ್ಭದಲ್ಲಿ

ಬ. ದುಡಿಮೆ ಕೈಗೊಳ್ಳುವ ವಿಚಾರದಲ್ಲಿ

ಡ. ಆಸ್ತಿ ಖರೀದಿಸುವ ವಿಷಯದಲ್ಲಿ

೮. ಕುಟುಂಬದಲ್ಲಿ ನಿಮಗೆ ಯಾವ ವಿಚಾರಗಳಲ್ಲಿ ಸೌಲಭ್ಯಗಳನ್ನು ನೀಡಿದ್ದಾರೆ?

ಅ. ಶಿಕ್ಷಣ ಹೊಂದುವಲ್ಲಿ

ಬ. ಆರೋಗ್ಯ ತಪಾಷಣಾ ವಿಚಾರದಲ್ಲಿ

ಕ. ದುಡಿದ ಹಣವನ್ನು ಸ್ವ ಇಚ್ಛೆಯಿಂದ ಖರ್ಚುಮಾಡುವಲ್ಲಿ

ಡ. ಯಾವುದು ಇಲ್ಲ

೯. ದುಡಿಯಲು ಯಾವ ಯಾವ ಊರುಗಳಿಗೆ ಹೋಗುತ್ತೀರಿ? ಹೋದರೆ ಅದರ ಸ್ವರೂಪ ಎಂತದ್ದು, ಸಮಸ್ಯೆಗಳೇನು?

--- .

೧೦. ಯಾವ ಸಂದರ್ಭದಲ್ಲಿ ದೌರ್ಜನ್ಯಕ್ಕೆ ಒಳಗಾಗುತ್ತೀರಿ? ಮತ್ತು ಅದರ ಸ್ವರೂಪವೆಂತದ್ದು.

ಅ. ದುಡಿಯಲು ಹೋದ ಸಂದರ್ಭದಲ್ಲಿ

ಬ. ಗಂಡ ಹೆಂಡಿರ ನಡುವೆ ಜಗಳವಾದಂತಹ ಸಂದರ್ಭದಲ್ಲಿ

ಕ. ಗಂಡ ಕುಡಿದು ಬಂದಂತ ಸಂದರ್ಭದಲ್ಲಿ

ಡ. ಯಾವಾಗಲೂ ಇಲ್ಲ

ಅದರ ಸ್ವರೂಪ : ---

--- .

೧೧. ನಿಮ್ಮ ಕೆಳಮಟ್ಟದ ಜೀವನ ನಿರ್ವಹಣೆಗೆ ಕಾರಣವೇನು?

ಅ. ಬಡತನ ಬ. ಜಾತೀಯತೆ

ಕ. ಪುರುಷ ಪ್ರಧಾನತೆ ಡ. ಶಿಕ್ಷಣ ಹೊಂದದೆ ಇರುವುದು

೧೨. ಬೇರೆ ಯಾವ ಜಾತಿಗೆ ಮತಾಂತರ ಹೊಂದಲು ಅವಕಾಶವಿದೆ?

ಅ. ಇಸ್ಲಾಂ ಧರ್ಮ ಬ. ಕ್ರೈಸ್ತ ಧರ್ಮ

ಕ. ಜೈನ ಧರ್ಮ ಅಥವಾ ಬೌದ್ಧಧರ್ಮ ಡ.ಯಾವುದು ಇಲ್ಲ

ಆರ್ಥಿಕ ಸ್ಥಿತಿಗತಿ

೧೩. ಯಾವ ಬಗೆಯ ಕೆಲಸಗಳಲ್ಲಿ ತೊಡಗಿಕೊಂಡಿದ್ದೀರಿ

---.

೧೪. ನಿಮ್ಮ ದುಡಿಮೆಯ ಸ್ವರೂಪ ಯಾವ ತರಹದ್ದು.

ಅ. ಸಾಂಪ್ರದಾಯಿಕವಾದದ್ದು ಬ. ಆಧುನಿಕವಾದದ್ದು

೧೫. ಯಾವ ಋತುಮಾನ ನಿಮ್ಮ ಕೆಲಸಕ್ಕೆ ಸೂಕ್ತವಾಗಿದೆ.

ಅ. ಮಳೆಗಾಲ ಬ. ಚಳಿಗಾಲ

ಕ. ಬೇಸಿಗೆ ಕಾಲ ಡ. ಎಲ್ಲಾ ಋತುಮಾನಗಳು

೧೭. ದಿನಕ್ಕೆ ಎಷ್ಟು ಗಂಟೆಗಳ ಕಾಲ ದುಡಿಯುತ್ತೀರಿ?

ಅ. ೧-೩ ಬ. ೩-೬

ಕ. ೬-೯ ಡ. ೯-೧೨

೧೮. ಕೆಲಸಕ್ಕೆ ಹೋದ ಸಂದರ್ಭದಲ್ಲಿ ಯಾವ ಬಗೆಯ ದೌರ್ಜನ್ಯಕ್ಕೆ ಒಳಗಾಗುತ್ತೀರಿ?

ಅ. ಲೈಂಗಿಕ ಕಿರುಕುಳ ಬ. ಮಾನಭಂಗ

ಕ. ಅಶ್ಲೀಲ ಮಾತುಗಳಿಂದ ಸಂಭೋದಿಸುವುದು ಡ.ಯಾವುದು ಇಲ್ಲ

೧೯. ನಿಮ್ಮ ಮನೆಯಲ್ಲಿ ಯಾರು ಯಾರು ಕೆಲಸ ಮಾಡುತ್ತೀರಿ?

ಅ. ನಾನು ಬ. ಗಂಡ

ಕ. ಅತ್ತೆ ಮತ್ತು ಮಕ್ಕಳು ಡ. ಮಾವ

೨೦. ನಿಮ್ಮ ದುಡಿಮೆ ಇಂದ ಬಂದ ಹಣವನ್ನು ಏನು ಮಾಡುತ್ತೀರಿ?

ಅ. ಬ್ಯಾಂಕ್‌ನಲ್ಲಿ ಇಡುತ್ತೇವೆ

ಬ. ಮನೆ ಬಳಕೆಗೆ ಖರ್ಚು ಮಾಡುತ್ತೇವೆ

೨೧. ದುಡಿದು ಬಂದ ಹಣವನ್ನು ಯಾರ ಕೈಗೆ ಕೊಡುತ್ತೀರಿ?

ಅ. ಪತಿಯ ಕೈಯಲ್ಲಿ

ಬ. ತಂದೆ ತಾಯಿಗಳ ಕೈಯಲ್ಲಿ

ಕ. ಅತ್ತೆ ಮಾವಂದಿರ ಕೈಯಲ್ಲಿ

ಡ. ಸ್ವತಃ ನಾನೇ ಖರ್ಚು ಮಾಡುತ್ತೇನೆ

ರ. ಗಂಡ ಹೆಂಡತಿಯರಿಬ್ಬರು ಖರ್ಚು ಮಾಡುತ್ತೇವೆ

೨೨. ಯಾವ ಬಗೆಯ ಮಹಿಳಾ ಗುಂಪುಗಳನ್ನು ರಚಿಸಿಕೊಂಡ ಅನುಭವವಿದೆ.

ಅ. ಸ್ವ ಸಹಾಯ ಗುಂಪುಗಳು

ಬ. ಸ್ತ್ರೀ ಶಕ್ತಿ ಗುಂಪುಗಳು

ಕ. ಮಹಿಳಾ ಸಂಘಗಳು

ಡ. ಯಾವುದು ಇಲ್ಲ

೨೩. ಗುಂಪುಗಳು ಈಗಲು ಚಾಲ್ತಿಯಲ್ಲಿ ಇವೆಯೇ?

ಅ. ಹೌದು ಬ. ಇಲ್ಲ

೨೪. ಸರ್ಕಾರದ ಯಾವುದಾದರೂ ಯೋಜನೆಯ ಲಾಭ ಪಡೆದಿದ್ದೀರಾ?

ಅ. ಹೌದು ಬ. ಇಲ್ಲ

೨೫. ಯಾವ ಬಗೆಯ ಆಸ್ತಿಯನ್ನು ಹೊಂದಿದ್ದೀರಿ?

ಅ. ಮನೆ ಬ. ಹೊಲ

ಕ. ಚರ ಆಸ್ತಿಗಳು ಡ. ಯಾವುದು ಇಲ್ಲ

ಶೈಕ್ಷಣಿಕ ಮಟ್ಟ

೨೬. ನಿಮ್ಮ ಮನೆಯಲ್ಲಿ ಎಷ್ಟು ಜನ ಓದು ಬರಹ ಕಲಿತಿದ್ದಾರೆ

ಹೆಣ್ಣು : ----------------------

ಗಂಡು : ----------------------

೨೭. ನೀವು ಎಲ್ಲಿಯವರೆಗೆ ಹೆಣ್ಣುಮಕ್ಕಳಿಗೆ ಶಿಕ್ಷಣ ಕೊಡಿಸುತ್ತೀರಿ?

ಅ. ಪ್ರಾಥಮಿಕ ಬ. ಮಾಧ್ಯಮಿಕ

ಕ. ಕಾಲೇಜು ಡ. ಯಾವುದು ಇಲ್ಲ

೨೮. ನಿಮ್ಮ ಸಮುದಾಯದಲ್ಲಿ ಯಾವ ಶ್ರೇಣಿಯ ಶಾಲೆ ಇದೆ?

ಅ. ಪ್ರಾಥಮಿಕ ಶಾಲೆ ಬ. ಪ್ರೌಢ ಶಾಲೆ

ಕ. ಯಾವುದು ಇಲ್ಲ

೨೯. ಯಾವುದರ ಮೂಲಕ ನಿಮ್ಮ ಸಮುದಾಯದ ಮಹಿಳೆಯರ ಸಬಲೀಕರಣ ಸಾಧ್ಯ ಎಂದು ಭಾವಿಸುತ್ತೀರಿ.

ಅ. ಶಿಕ್ಷಣದ ಮೂಲಕ

ಬ. ರಾಜಕೀಯದಲ್ಲಿ ಪಾಲ್ಗೊಳ್ಳುವ ಮೂಲಕ

ಕ. ಸಂಪನ್ಮೂಲಗಳ ಮೇಲೆ ಹಿಡಿತ ಸಾಧಿಸುವುದರ ಮೂಲಕ

ಡ. ಮಹಿಳಾ ಸಂಘ ಸಂಸ್ಥೆಗಳನ್ನು ಕಟ್ಟಿಕೊಳ್ಳುವ ಮೂಲಕ

ಧಾರ್ಮಿಕ ಮತ್ತು ಸಾಂಸ್ಕೃತಿಕ ಆಚರಣೆಗಳು

೩೦. ಎಂತಹ ಸಂದರ್ಭದಲ್ಲಿ ಸೂತಕಗಳ ಆಚರಣೆ ಮಾಡುತ್ತೀರಿ

ಅ. ಋತುಮತಿಯರಾದಾಗ

ಬ. ತಿಂಗಳ ಮುಟ್ಟಿನ ಸಂದರ್ಭದಲ್ಲಿ

ಕ. ಜನನ ಮತ್ತು ಮರಣದ ಸಂದರ್ಭದಲ್ಲಿ

ಡ. ಯಾವಾಗಲೂ ಮಾಡುವುದಿಲ್ಲ

೩೧. ಯಾವ ಬಗೆಯ ದೇವರುಗಳ ಪೂಜೆಯನ್ನು ಸಮುದಾಯದಲ್ಲಿ ಕೈಗೊಳ್ಳುತ್ತೀರಿ? ಮತ್ತು ಏಕೆ?

--.

೩೨. ಮಹಿಳೆಯರಿಗೆಂದೆ ಇರುವ ಪ್ರತ್ಯೇಕವಾದ ಯಾವ ಹಬ್ಬ ಹರಿದಿನಗಳನ್ನು ಆಚರಿಸುತ್ತೀರಿ?

--.

ರಾಜಕೀಯ ಸ್ಥಾನಮಾನ

೩೩. ರಾಜಕೀಯ ಬಗ್ಗೆ ನಿಮಗೆ ತಿಳುವಳಿಕೆ ಇದೆಯೇ?

ಅ. ಹೌದು ಬ. ಇಲ್ಲ

೩೪. ರಾಜಕೀಯದಲ್ಲಿ ಪಾಲ್ಗೊಂಡಿದ್ದೀರಾ? ಅದರ ಸ್ವರೂಪ ಯಾವ ರೀತಿಯದ್ದು.

ಅ. ನಗರ ಸಭೆ ಸದಸ್ಯೆಯಾಗಿ

ಬ. ಎಂ.ಎಲ್.ಎ.ಯಾಗಿ

ಕ. ಯಾವುದು ಇಲ್ಲ

೩೫. ರಾಜಕೀಯದಲ್ಲಿ ಭಾಗವಹಿಸುವ ಸಂದರ್ಭದಲ್ಲಿ ಎದುರಾಗುವ ಸಮಸ್ಯೆಗಳಾವುವು?

--.

ಆರೋಗ್ಯ

೩೬. ಸಾಮಾನ್ಯವಾಗಿ ನಿಮ್ಮಲ್ಲಿ ಸ್ವಚ್ಛತೆ ಕಡಿಮೆ ಎಂದು ಹೇಳುತ್ತಾರೆ. ಇದು ಸತ್ಯವೇ? ಹೌದು ಎಂದಾದರೆ ಮಲೀನತೆಯಿಂದ ಯಾವ ಬಗೆಯಲ್ಲಿ ಆರೋಗ್ಯದ ತೊಂದರೆಗಳು ಉಂಟಾಗುತ್ತವೆ.

----

೩೭. ನಿಮಗೆ ಹೆರಿಗೆ ಎಲ್ಲಿ ಮಾಡಿಸುತ್ತಾರೆ?

ಅ. ಸರ್ಕಾರಿ ಆಸ್ಪತ್ರೆಯಲ್ಲಿ

ಬ. ಖಾಸಗಿ ಆಸ್ಪತ್ರೆಯಲ್ಲಿ

ಕ. ಮನೆಯಲ್ಲಿ

೩೮. ದುಡಿಯಲು ಬೇರೆ ಬೇರೆ ಪ್ರದೇಶಗಳಿಗೆ ಹೋದಾಗ ಯಾವ ಬಗೆಯ ತೊಂದರೆಗಳು ಉಂಟಾಗುತ್ತವೆ?

---.

ವೈಯಕ್ತಿಕ ವಿವರಗಳ ಪಟ್ಟಿ

ಕ್ರ.ಸಂ.	ಮಹಿಳೆಯರ ಹೆಸರು	ವಯಸ್ಸು	ಊರು	ಜಾತಿ(ಉಪಜಾತಿ)	ವೈವಾಹಿಕ ಸ್ಥಾನಮಾನ	ಶಿಕ್ಷಣ ಮಟ್ಟ
೧	ಸುಂಕಮ್ಮ	೬೦	ಕೊಪ್ಪಳ	ಕೊರವ (ಕುಂಚಿ ಕೊರವ)	ವಿವಾಹಿತೆ	---
೨	ಗಂಗವ್ವ	೫೪	ಕದರಿ	ಕೊರವ (ಕುಂಚಿ ಕೊರವ)	ವಿವಾಹಿತೆ	---
೩	ದುರಗಮ್ಮ	೪೯	ಕವಲೂರು	ಕೊರವ (ಕುಂಚಿ ಕೊರವ)	ಅವಿವಾಹಿತೆ	---
೪	ಬಾಲಮ್ಮ	೧೫	ಕದರಿ	ಕೊರವ (ಕುಂಚಿ ಕೊರವ)	ವಿವಾಹಿತೆ	೩ನೇ ತರಗತಿ
೫	ದುರಗಮ್ಮ	೪೩	ಕೊಪ್ಪಳ	ಕೊರವ (ಕುಂಚಿ ಕೊರವ)	ವಿವಾಹಿತೆ	---
೬	ಗಂಗಮ್ಮ	೩೪	ಹುಬ್ಬಳ್ಳಿ	ಕೊರವ (ಕುಂಚಿ ಕೊರವ)	ವಿಧವೆ	---
೭	ಗಂಗಮ್ಮ	೪೦	ಮಾದೇವಪುರ	ಕೊರವ (ಕುಂಚಿ ಕೊರವ)	ವಿವಾಹಿತೆ	೭ನೇ ತರಗತಿ
೮	ಮಲ್ಲಮ್ಮ	೨೬	ಕೊಪ್ಪಳ	ಕೊರವ (ಕುಂಚಿ ಕೊರವ)	ವಿವಾಹಿತೆ	---
೯	ಶಿವನವ್ವ	೪೫	ಕೊಪ್ಪಳ	ಕೊರವ (ಕುಂಚಿ ಕೊರವ)	ವಿವಾಹಿತೆ	---
೧೦	ಗಂಗಮ್ಮ	೫೫	ಕೊಪ್ಪಳ	ಕೊರವ (ಕುಂಚಿ ಕೊರವ)	ವಿವಾಹಿತೆ	---
೧೧	ಲಕ್ಷ್ಮಿ	೨೬	ಕೊಪ್ಪಳ	ಕೊರವ (ಕುಂಚಿ ಕೊರವ)	ವಿಧವೆ	---
೧೨	ದ್ಯಾಮವ್ವ	೨೫	ಕೊಪ್ಪಳ	ಕೊರವ (ಕುಂಚಿ ಕೊರವ)	ವಿವಾಹಿತೆ	---
೧೩	ರೇಣುಕಾ	೮	ಕೊಪ್ಪಳ	ಕೊರವ (ಕುಂಚಿ ಕೊರವ)	ಅವಿವಾಹಿತೆ	೩ನೇ ತರಗತಿ
೧೪	ಮಂಜವ್ವ	೭೪	ಕೊಪ್ಪಳ	ಕೊರವ (ಕುಂಚಿ ಕೊರವ)	ವಿವಾಹಿತೆ	---

೧೫	ಶಾಂತವ್ವ	೯	ಗದಗ	ಕೊರವ	(ಕುಂಚಿ ಕೊರವ)	ಅವಿವಾಹಿತೆ	೪ನೇ ತರಗತಿ
೧೬	ದುರಗವ್ವ	೪೦	ಕೊಪ್ಪಳ	ಕೊರವ	(ಕುಂಚಿ ಕೊರವ)	ವಿಧವೆ	---
೧೭	ಕೆಂಚವ್ವ	೬೦	ಕೊಪ್ಪಳ	ಕೊರವ	(ಕುಂಚಿ ಕೊರವ)	ವಿಧವೆ	---
೧೮	ದುರಗವ್ವ	೨೨	ಶಿರಿವಾರ	ಕೊರವ	(ಕುಂಚಿ ಕೊರವ)	ವಿವಾಹಿತೆ	---
೧೯	ಸೋಮವ್ವ	೫೦	ಕೊಪ್ಪಳ	ಕೊರವ	(ಕುಂಚಿ ಕೊರವ)	ವಿವಾಹಿತೆ	---
೨೦	ಹನುಮವ್ವ	೫೦	ಕೊಪ್ಪಳ	ಕೊರವ	(ಕುಂಚಿ ಕೊರವ)	ವಿವಾಹಿತೆ	---
೨೧	ಚೌಡವ್ವ	೪೦	ಕೊಪ್ಪಳ	ಕೊರವ	(ಕುಂಚಿ ಕೊರವ)	ವಿವಾಹಿತೆ	---
೨೨	ಶಿವವ್ವ	೭	ಕೊಪ್ಪಳ	ಕೊರವ	(ಕುಂಚಿ ಕೊರವ)	ಅವಿವಾಹಿತೆ	---
೨೩	ನೇತ್ರಾ	೧೧	ಕೊಪ್ಪಳ	ಕೊರವ	(ಕುಂಚಿ ಕೊರವ)	ಅವಿವಾಹಿತೆ	---
೨೪	ಹುಲಗವ್ವ	೮	ಕೊಪ್ಪಳ	ಕೊರವ	(ಕುಂಚಿ ಕೊರವ)	ಅವಿವಾಹಿತೆ	೬ನೇ ತರಗತಿ
೨೫	ಮಂಜವ್ವ	೮	ಕೊಪ್ಪಳ	ಕೊರವ	(ಕುಂಚಿ ಕೊರವ)	ಅವಿವಾಹಿತೆ	೩ನೇ ತರಗತಿ
೨೬	ಪಕೀರವ್ವ	೩೦	ಕೊಪ್ಪಳ	ಕೊರವ	(ಕುಂಚಿ ಕೊರವ)	ವಿವಾಹಿತೆ	---
೨೭	ದುರಗವ್ವ	೭೫	ಕೊಪ್ಪಳ	ಕೊರವ	(ಕುಂಚಿ ಕೊರವ)	ವಿವಾಹಿತೆ	---
೨೮	ಅಂಬ್ರವ್ವ	೩೦	ಕೊಪ್ಪಳ	ಕೊರವ	(ಕುಂಚಿ ಕೊರವ)	ವಿವಾಹಿತೆ	---
೨೯	ಗಂಗವ್ವ	೧೮	ಕೊಪ್ಪಳ	ಕೊರವ	(ಕುಂಚಿ ಕೊರವ)	ವಿವಾಹಿತೆ	---
೩೦	ಲಕ್ಷ್ಮವ್ವ	೨೦	ಕೊಪ್ಪಳ	ಕೊರವ	(ಕುಂಚಿ ಕೊರವ)	ವಿವಾಹಿತೆ	---
೩೧	ಮಾರೆವ್ವ	೨೬	ಕೊಪ್ಪಳ	ಕೊರವ	(ಕುಂಚಿ ಕೊರವ)	ವಿವಾಹಿತೆ	---

೩೨	ರಾಜೇಶ್ವರಿ	೧೦	ಕೊಪ್ಪಳ	ಕೊರವ (ಕುಂಚಿ ಕೊರವ)	ಅವಿವಾಹಿತೆ	೫ನೇ ತರಗತಿ
೩೩	ಮಂಜುಳಾ	೧೧	ಕೊಪ್ಪಳ	ಕೊರವ (ಕುಂಚಿ ಕೊರವ)	ಅವಿವಾಹಿತೆ	೫ನೇ ತರಗತಿ
೩೪	ಪಾರ್ವತಿ	೧೩	ಕೊಪ್ಪಳ	ಕೊರವ (ಕುಂಚಿ ಕೊರವ)	ಅವಿವಾಹಿತೆ	೭ನೇ ತರಗತಿ
೩೫	ರತ್ನಮ್ಮ	೨೪	ಕೊಪ್ಪಳ	ಕೊರವ (ಕುಂಚಿ ಕೊರವ)	ವಿವಾಹಿತೆ	---
೩೬	ಗಂಗವ್ವ	೩೨	ಕೊಪ್ಪಳ	ಕೊರವ (ಕುಂಚಿ ಕೊರವ)	ವಿಧವೆ	---
೩೭	ನಾಗಮ್ಮ	೪೭	ಕೊಪ್ಪಳ	ಕೊರವ (ಕುಂಚಿ ಕೊರವ)	ವಿವಾಹಿತೆ	---
೩೮	ಶಾರವ್ವ	೨೯	ಕೊಪ್ಪಳ	ಕೊರವ (ಕುಂಚಿ ಕೊರವ)	ವಿವಾಹಿತೆ	---
೩೯	ದುರಗವ್ವ	೪೧	ಕೊಪ್ಪಳ	ಕೊರವ (ಕುಂಚಿ ಕೊರವ)	ವಿವಾಹಿತೆ	---
೪೦	ಬಾಲವ್ವ	೩೨	ಕೊಪ್ಪಳ	ಕೊರವ (ಕುಂಚಿ ಕೊರವ)	ವಿವಾಹಿತೆ	---
೪೧	ತಿಕ್ಲಮ್ಮ	೪೩	ಕೊಪ್ಪಳ	ಕೊರವ (ಕುಂಚಿ ಕೊರವ)	ಅವಿವಾಹಿತೆ	---
೪೨	ಹೊನ್ನವ್ವ	೩೬	ಕೊಪ್ಪಳ	ಕೊರವ (ಕುಂಚಿ ಕೊರವ)	ವಿವಾಹಿತೆ	---
೪೩	ಕಲ್ಲಮ್ಮ	೨೮	ಕೊಪ್ಪಳ	ಕೊರವ (ಕುಂಚಿ ಕೊರವ)	ವಿವಾಹಿತೆ	---
೪೪	ಭಿಂಕವ್ವ	೨೪	ಕೊಪ್ಪಳ	ಕೊರವ (ಕುಂಚಿ ಕೊರವ)	ವಿವಾಹಿತೆ	---
೪೫	ಶಾರವ್ವ	೩೨	ಕೊಪ್ಪಳ	ಕೊರವ (ಕುಂಚಿ ಕೊರವ)	ವಿವಾಹಿತೆ	---
೪೬	ದೇವಿ	೧೪	ಕೊಪ್ಪಳ	ಕೊರವ (ಕುಂಚಿ ಕೊರವ)	ವಿವಾಹಿತೆ	---
೪೭	ಚಿಪ್ರಿ	೯	ಗುನ್ನಳ್ಳಿ	ಕೊರವ (ಕುಂಚಿ ಕೊರವ)	ಅವಿವಾಹಿತೆ	---
೪೮	ಮಾಲವ್ವ	೨೨	ಕೊಪ್ಪಳ	ಕೊರವ (ಕುಂಚಿ ಕೊರವ)	ವಿವಾಹಿತೆ	---

[illegible]

೪೯	ದುರಗಮ್ಮ	೪೮	ಕೊಪ್ಪಳ	ಕೊರವ (ಕುಂಚಿ ಕೊರವ)	ವಿವಾಹಿತೆ	---
೫೦	ಗಾಳೆವ್ವ ಗುಡಿಮನಿ	೭೨	ಕೊಪ್ಪಳ	ಕೊರವ (ಕುಂಚಿ ಕೊರವ)	ವಿಧವೆ	---
೫೧	ಕೆಂಚಮ್ಮ	೩೫	ಕೊಪ್ಪಳ	ಕೊರವ (ಕುಂಚಿ ಕೊರವ)	ವಿವಾಹಿತೆ	---
೫೨	ಪಾದಕ್ಕೆ ಪೂಜಾರಿ	೪೮	ಕೊಪ್ಪಳ	ಕೊರವ (ಕುಂಚಿ ಕೊರವ)	ಅವಿವಾಹಿತೆ	---
೫೩	ಮಾಳಮ್ಮ	೩೪	ಕೊಪ್ಪಳ	ಕೊರವ (ಕುಂಚಿ ಕೊರವ)	ವಿವಾಹಿತೆ	---
೫೪	ಸುಂಕ್ಲಮ್ಮ	೨೮	ಕೊಪ್ಪಳ	ಕೊರವ (ಕುಂಚಿ ಕೊರವ)	ವಿವಾಹಿತೆ	---
೫೫	ಪಾರವ್ವ	೪೨	ಕೊಪ್ಪಳ	ಕೊರವ (ಕುಂಚಿ ಕೊರವ)	ವಿವಾಹಿತೆ	---
೫೬	ಮಂಜಮ್ಮ	೨೬	ಕೊಪ್ಪಳ	ಕೊರವ (ಕುಂಚಿ ಕೊರವ)	ವಿವಾಹಿತೆ	೩ನೇ ತರಗತಿ
೫೭	ನಾಗವ್ವ	೫೩	ಕೊಪ್ಪಳ	ಕೊರವ (ಕುಂಚಿ ಕೊರವ)	ವಿವಾಹಿತೆ	---
೫೮	ಮಾರಮ್ಮ	೪೬	ಕೊಪ್ಪಳ	ಕೊರವ (ಕುಂಚಿ ಕೊರವ)	ವಿವಾಹಿತೆ	---
೫೯	ಸುಂಕ್ಲಮ್ಮ	೫೪	ಕೊಪ್ಪಳ	ಕೊರವ (ಕುಂಚಿ ಕೊರವ)	ವಿವಾಹಿತೆ	---
೬೦	ಜಮ್ಮಕ್ಕ	೩೬	ಕೊಪ್ಪಳ	ಕೊರವ (ಕುಂಚಿ ಕೊರವ)	ವಿವಾಹಿತೆ	---
೬೧	ಗಾಳೆಮ್ಮ	೨೮	ಕೊಪ್ಪಳ	ಕೊರವ (ಕುಂಚಿ ಕೊರವ)	ವಿಧವೆ	---
೬೨	ಉಲಗಮ್ಮ	೭೨	ಕೊಪ್ಪಳ	ಕೊರವ (ಕುಂಚಿ ಕೊರವ)	ವಿವಾಹಿತೆ	---
೬೩	ಮಾರೆಮ್ಮ	೩೪	ಕೊಪ್ಪಳ	ಕೊರವ (ಕುಂಚಿ ಕೊರವ)	ವಿವಾಹಿತೆ	---
೬೪	ಜಂಬುಲಮ್ಮ	೭೮	ಕೊಪ್ಪಳ	ಕೊರವ (ಕುಂಚಿ ಕೊರವ)	ವಿಧವೆ	---
೬೫	ಪೆದ್ದಮ್ಮ	೮೦	ಕೊಪ್ಪಳ	ಕೊರವ (ಕುಂಚಿ ಕೊರವ)	ವಿಧವೆ	---

೬೬	ಚೌಡಮ್ಮ	೪೬	ಕೊಪ್ಪಳ	ಕೊರವ ಕುಂಚಿ(ಕೊರವ)	ವಿವಾಹಿತೆ	---
೬೭	ಪೋಷಮ್ಮ	೩೮	ಕೊಪ್ಪಳ	ಕೊರವ ಕುಂಚಿ(ಕೊರವ)	ವಿವಾಹಿತೆ	---
೬೮	ದುರ್ಗವ್ವ	೪೬	ಕೊಪ್ಪಳ	ಕೊರವ ಕುಂಚಿ(ಕೊರವ)	ವಿವಾಹಿತೆ	---
೬೯	ಗ್ಯಾನವ್ವ	೮೨	ಕೊಪ್ಪಳ	ಕೊರವ ಕುಂಚಿ(ಕೊರವ)	ವಿಧವೆ	---
೭೦	ದೇವಕ್ಕವ್ವ	೩೬	ಕೊಪ್ಪಳ	ಕೊರವ ಕುಂಚಿ(ಕೊರವ)	ವಿವಾಹಿತೆ	---
೭೧	ಅನಮವ್ವ	೪೪	ಕೊಪ್ಪಳ	ಕೊರವ ಕುಂಚಿ(ಕೊರವ)	ವಿವಾಹಿತೆ	---
೭೨	ಶಾರದಾ	೨೪	ಕೊಪ್ಪಳ	ಕೊರವ ಕುಂಚಿ(ಕೊರವ)	ವಿವಾಹಿತೆ	---
೭೩	ಮಾಂತವ್ವ	೪೩	ಕೊಪ್ಪಳ	ಕೊರವ ಕುಂಚಿ(ಕೊರವ)	ವಿವಾಹಿತೆ	---
೭೪	ಶಾವಮ್ಮ	೨೨	ಕೊಪ್ಪಳ	ಕೊರವ ಕುಂಚಿ(ಕೊರವ)	ವಿವಾಹಿತೆ	---
೭೫	ಭಾರತಿ	೮	ಕೊಪ್ಪಳ	ಕೊರವ ಕುಂಚಿ(ಕೊರವ)	ಅವಿವಾಹಿತೆ	---
೭೬	ಅಂಬವ್ವ	೫೪	ಗದಗ	ಕೊರವ ಕುಂಚಿ(ಕೊರವ)	ವಿವಾಹಿತೆ	---
೭೭	ಕೌಲವ್ವ	೩೬	ಕೊಪ್ಪಳ	ಕೊರವ ಕುಂಚಿ(ಕೊರವ)	ವಿವಾಹಿತೆ	---
೭೮	ಶಿಕ್ರವ್ವ	೮೧	ಕೊಪ್ಪಳ	ಕೊರವ ಕುಂಚಿ(ಕೊರವ)	ವಿಧವೆ	---
೭೯	ಹಂಚಾಳಮ್ಮ	೨೯	ಕೊಪ್ಪಳ	ಕೊರವ ಕುಂಚಿ(ಕೊರವ)	ವಿವಾಹಿತೆ	---
೮೦	ಪಲ್ಲವಿ	೯	ಕೊಪ್ಪಳ	ಕೊರವ ಕುಂಚಿ(ಕೊರವ)	ಅವಿವಾಹಿತೆ	೩ನೇ ತರಗತಿ

ಗ್ರಂಥಋಣ

೧. ಇಂದಿರಾ ಆರ್., ೨೦೦೨, **ಮಹಿಳೆ ಸಮಾಜ ಮತ್ತು ಸಂಸ್ಕೃತಿ,** ಕನ್ನಡ ವಿಶ್ವವಿದ್ಯಾಲಯ ಹಂಪಿ

೨. ಉಷಾ ಎಂ., ೨೦೦೫, **ಮಹಿಳೆ ಮತ್ತು ಜಾತಿ ಒಂದು ಸೈದ್ಧಾಂತಿಕ ಗ್ರಹಿಕೆ,** ಕನ್ನಡ ವಿಶ್ವವಿದ್ಯಾಲಯ, ಹಂಪಿ

೩. ನಾಯಕ್ ಡಿ.ಬಿ., ೨೦೦೭, **ದೇಸಿ ಸಂಸ್ಕೃತಿ,** ಬಂಜಾರ ಪ್ರಕಾಶನ, ಗುಲಬರ್ಗಾ

೪. ಪ್ರಭಾಕರ್ ಎಸ್., ೨೦೦೬, **ಆದಿವಾಸಿ ಆಖ್ಯಾನ,** ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ

೫. ಬರಗೂರು ರಾಮಚಂದ್ರಪ್ಪ(ಸಂ), ೧೯೯೩, **ಕೊರವರ ಸಂಸ್ಕೃತಿ(ಉಪಸಂಸ್ಕೃತಿ ಅಧ್ಯಯನ ಯೋಜನೆ)** ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೬. ಭೈರಪ್ಪ ಕೆ., ೧೯೯೭, **ಭಾರತೀಯ ಸಮಾಜ,** ಕೇಂಬ್ರಿಡ್ಜ್ ಪಬ್ಲಿಷಿಂಗ್ ಕಂಪನಿ ಬೆಂಗಳೂರು

೭. ಬೋರಲಿಂಗಯ್ಯ ಹಿ.ಚಿ.(ಸಂ), ೨೦೦೪, **ಬುಡಕಟ್ಟು ಅಧ್ಯಯನ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ

೮. ಮಲ್ಲಿಕಾ ಘಂಟಿ(ಸಂ), ೨೦೦೮, **ಸಂಸ್ಕೃತಿ ಮಹಿಳಾ ಮಾಲಿಕೆ ಸಂಪುಟ-೫,** ಕರ್ನಾಟಕ ಸಾಹಿತ್ಯ ಅಕಾಡಮಿ, ಕನ್ನಡ ಭವನ, ಬೆಂಗಳೂರು

೯. ಮಲ್ಲಿಕಾರ್ಜುನ ಬಿ. ಮಾನ್ಪಡೆ, ೨೦೦೮, **ಕೊರಮ,** ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

೧೦. ರಾಜಶೇಖರ್ ಎಮ್.ಎನ್.(ಸಂ), ೨೦೦೮, **ಸಂಸ್ಕೃತಿ ಮಹಿಳಾ ಮಾಲಿಕೆ ಸಂಪುಟ-೨,** ಕರ್ನಾಟಕ ಸಾಹಿತ್ಯ ಅಕಾಡಮಿ, ಕನ್ನಡ ಭವನ, ಬೆಂಗಳೂರು

೧೧. ರಾಜಶೇಖರ್ ಎಸ್., ೨೦೦೧, **ಭಾರತೀಯ ಸಮಾಜ,** ಭ್ರಮರ ಪ್ರಕಾಶನ, ಶಿವಮೊಗ್ಗ

೧೨. ರಾಮಚಂದ್ರ ಜೋಷಿ, ೨೦೦೫, **ಭಾರತೀಯ ಸಮಾಜ ರಚನೆ ಮತ್ತು ಪರಿವರ್ತನೆ,** ಸಿದ್ಧಲಿಂಗೇಶ್ವರ ಪ್ರಕಾಶನ, ಗುಲಬರ್ಗಾ

೧೩. ರಾಮಯ್ಯ ಬಿ.ಪಿ., ೨೦೦೨ *ಕೊರಮರು,* **ಕರ್ನಾಟಕದ ಬುಡಕಟ್ಟುಗಳು,** ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಭವನ, ಬೆಂಗಳೂರು

೧೪. ವಿಶ್ವನಾಥ ಕಾರ್ನಾಡ, ೧೯೯೪, **ತುಳುವರ ಮುಂಬೈ ವಲಸೆ**, ಕನ್ನಡ ವಿಭಾಗ ಮುಂಬೈ ವಿಶ್ವವಿದ್ಯಾಲಯ

೧೫. ವೆಂಗಟಗೀರಿ ದಳವಾಯಿ(ಸಂ), ೨೦೦೮, **ಸಂಸ್ಕೃತಿ ಮಹಿಳಾ ಮಾಲಿಕೆ, ಸಂಪುಟ-೬**, ಕರ್ನಾಟಕ ಸಾಹಿತ್ಯ ಆಕಾಡಮಿ, ಕನ್ನಡ ಭವನ, ಬೆಂಗಳೂರು

೧೬. ಶ್ರೀಮತಿ ಎಚ್.ಎಸ್.(ಸಂ), ೨೦೦೭, **ಮಹಿಳೆ ದುಡಿಮೆ ಮತ್ತು ಬಿಡುವು**, ಮಹಿಳಾ ಅಧ್ಯಯನ ಕೇಂದ್ರ, ಹಂಪಿ

೧೭. ಶ್ರೀಮತಿ ಎಚ್.ಎಸ್.(ಸಂ), ೨೦೦೭, **ಹೆಣ್ಣು ಮತ್ತು ಭಾಷೆ**, ಮಹಿಳಾ ಅಧ್ಯಯನ ಕೇಂದ್ರ, ಹಂಪಿ

೧೮. ಶಿವಚಿತ್ತಪ್ಪ ಕೆ.(ಸಂ), ೨೦೦೫, **ಮಹಿಳೆ ಮತ್ತು ಅಭಿವೃದ್ಧಿ**, ಚಿನ್ಮಯಿ ಪ್ರಕಾಶನ ಬೆಂಗಳೂರು

೧೯. ಸಬೀಹಾ ಭೂಮಿಗೌಡ(ಸಂ), ೨೦೦೮, **ಸಂಸ್ಕೃತಿ ಮಹಿಳಾ ಮಾಲಿಕೆ ಸಂಪುಟ -೧**, ಕರ್ನಾಟಕ ಸಾಹಿತ್ಯ ಅಕಾಡಮಿ, ಕನ್ನಡ ಭವನ, ಬೆಂಗಳೂರು

೨೦. ಹೇಮಲತಾ ಹೆಚ್.ಎಂ., ೨೦೦೪, **ಮಹಿಳಾ ಅಧ್ಯಯನ ೨**, ಡಿ.ವಿ.ಕೆ.ಮೂರ್ತಿ, ಮೈಸೂರು

೨೧. ಹೇಮಲತಾ ಹೆಚ್.ಎಂ., ೨೦೦೬, **ಮಹಿಳಾ ಅಧ್ಯಯನ ೩**, ಡಿ.ವಿ.ಕೆ.ಮೂರ್ತಿ, ಮೈಸೂರು

ಛಾಯಾಚಿತ್ರಗಳು

ಕುಂಚಿ ಕೊರವರ ಮದುವೆಯ ಛಾಯಾಚಿತ್ರಗಳು





ಕುಂಚಿ ಕೊರವರ ವಾಸಸ್ಥಳ





ವಿವಿಧ ದುಡಿಮೆಗಳಲ್ಲಿ ತೊಡಗಿರುವ ಕುಂಚಿ ಕೊರವ ಮಹಿಳೆಯರು

ವಿವಿಧ ದುಡಿಮೆಗಳಲ್ಲಿ ತೊಡಗಿರುವ ಕುಂಚಿ ಕೊರವ ಮಹಿಳೆಯರು





ವಿವಿಧ ದುಡಿಮೆಗಳಲ್ಲಿ ತೊಡಗಿರುವ ಕುಂಚಿ ಕೊರವ ಮಹಿಳೆಯರು





ಕುಂಚಿ ಕೊರವ ಮಹಿಳೆಯರಿಂದ ಜಾನಪದ ಗೀತೆಗಳ
ಸಂಗ್ರಹಣೆಯಲ್ಲಿ ತೊಡಗಿರುವ ಛಾಯಾಚಿತ್ರ